Permission to Remain Absent was Granted.

Budget Estimate for 1963-64. Demands for Grants Debate

Demand No. 24-35 Industries

SRI K. MALLAPPA (Minister for Industries and Commerce).— Sir, on the recommendation of the Governor of Mysore, I beg to move:

"That a sum not exceeding Rs. 9,15,07,500 be granted to the Government to defray the charges which will come in course of payment during the financial year for the period ending **31st day** of March 1964, in respect of 'Industries."

MR. SPEAKER.—Motion moved:

"That a sum not exceeding Rs. 9,15,07,500 be granted to the Government to defray the charge which will come in course of payment during the financial year for the period ending 31st day of March 1964, in respect of 'Industries'."

Not only Demand No. 24 but Demands Nos. 28 and 44 shall be deemed to have been moved.

ಶ್ರೀ ಎಸ್. ಗೋಪಾಲ ಗೌಡ (ತೀರ್ಥ ಹಳ್ಳಿ).—ಸ್ವಾಮಿ, ಈ ಸಭೆಯಲ್ಲಿ ಸಭಾ ನಾಯಕರು ಇಲ್ಲದೆ ಇರುವಾಗ ಅವರ ಜವಾಬ್ದಾರಿಯನ್ನು ನಿರ್ವಹಿಸಲು ಒಬ್ಬ ಉಪನಾಯಕರು ಈ ಸಭೆಯಲ್ಲಿರ ಬೇಕಾದುದು ಅಗತ್ಯವೆಂದು ನಾನು ಭಾವಿಸುತ್ತೇನೆ. ಆದರೆ ಆಳುವ ಪಕ್ಷದವರು ಯಾವರೀತಿ ಭಾವಿಸುತ್ತಾರೋ ಅದು ಗೊತ್ತಿಲ್ಲ. ಹಾಗೆ ಯಾರನ್ನಾದರೂ ಆ ನಾಯಕರ ಸ್ಥಾನದಲ್ಲಿ ನೇಮಿಸ ದಿದ್ದರೆ ಇಲ್ಲಿ ಅನಾಯಕತ್ವ ಉಂಟಾಗಿ ಬಿಡುತ್ತದೆ. ಆದ್ದರಿಂದ ಸಭಾ ನಾಯಕ ಗೈರುಹಾಜರಿ ಯಲ್ಲಿ ಒಬ್ಬ ಉಪ ಸಭಾಯಕರನ್ನು ನೇಮಿಸುವುದು ಅಗತ್ಯವೆಂದು ನಾನು ಭಾವಿಸುತ್ತೇನೆ.

MR. SPEAKER.—The suggestion has gone into the records.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ (ತಿಪಟೂರು).—ಸ್ವಾಮಿ, ಈ ಹಿಂದೆ ನಾನಾಗಲೇ ಅರಿಕೆ ಮಾಡಿಕೊಂಡಿದ್ದ ವಿಚಾರ ಎಂದರೆ ಯುಗಾದಿ ಹಬ್ಬಕ್ಕೆ ರಜಾ ಕೊಡತಕ್ಕ ವಿಚಾರದಲ್ಲಿ ಏನೂ ಗೊತ್ತಾಗಲಿಲ್ಲ. ಬೇಕಾದರೆ ಈ ದಿವಸ ಮಧ್ಯಾನ್ನ ಮತ್ತು ನಾಳೆ ಭಾನುವಾರ ಬೇಕಾದರೆ ಸಭೆ ನಡೆಸಿ, ಸೋಮವಾರ-ಮಂಗಳವಾರ ಮತ್ತು ಬುಧವಾರ ಆ ಮೂರು ದಿನಗಳು ರಜಾ ಕೊಟ್ಟರೆ ಸದಸ್ಯರಿಗೆ ಊರುಗಳಿಗೆ ಹೋಗಿಬರಲು ಅನುಕೂಲವಾಗುತ್ತಿತ್ತು.

MR. SPEAKER.—Is that what the Hon'ble Member wanted to say?

ಶ್ರೀ ವಿ. ಎಂ. ದೇವ್ (ಗುಬ್ಬಿ).—ಅಡ್ವೊಕೇಟ್ ಜನರಲ್‌ರವರಿಗೆ ಈ ಸಭೆಯಲ್ಲಿ ಓಟ್ ಮಾಡುವ ಹಕ್ಕಿಲ್ಲವಾದ್ದರಿಂದ ಅವರು ಓತ್ ತೆಗೆದುಕೊಳ್ಳ ಬೇಕಾಗಿಲ್ಲವೆಂತ ಅಧ್ಯಕ್ಷರು ತಿಳಿಸಿದಂತೆ ಕಾಣುತ್ತಿದೆ. ಆದರೆ ಈ ಪ್ರಮಾಣವಚನ ಸ್ವೀಕಾರದಲ್ಲಿ ರೂಲ್ಸ್........

MR. SPEAKER.—The hon. member may kindly study the position and meet me on Monday; if necessary, I will give a ruling on Tuesday. (laughter)

ಶ್ರೀ ವಿ. ಎಂ. ದೇವ್.—ನಾವು ಅಷ್ಟೆಲ್ಲ ಓದುವುದರ ಬದಲು ತಮ್ಮನ್ನು ಕೇಳಿಬಿಟ್ಟರೆ ಅದೆಲ್ಲ ಬಗೆಹರಿದಂತೆ ಆಗುತ್ತದೆಂದು ಕೇಳಿದೆನು.

MR. SPEAKER.—I have already said that it is not necessary.

About the suggestion that was made by Sri Revanna Siddappa, regarding Ugadi Festival holiday, I do not know if it is possible.

ಶ್ರೀ ಬಿ. ಡಿ. ಜತ್ತಿ (ಹಣಕಾಸಿನ ಸಚಿವರು).–ಬಡ್ಜೆಟ್ಟನ್ನು ಕಡೆಯಲ್ಲಿ ಓಟಿಂಗಿಗೆ ಹಾಕುವುದಕ್ಕೆ ಅವಕಾಶವಾಗುವುದಿಲ್ಲ. ತೊಂದರೆ ಆಗುತ್ತದೆ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಈ ದಿವಸ ಇನ್ನೂ 4 ಗಂಟೆ ಕಾಲ ಹೆಚ್ಚಾಗಿ ಕುಳಿತುಕೊಂಡು, ನಾಳೆ ಭಾನುವಾರ ಬೇಕಾದರೂ ಕೂಡೋಣ.

Mr. SPEAKER.—This is not a matter which can be thrust at so short a notice. It need not be mentioned in the House.

Sri B. D. JATTI.—Sir, after tea time we shall decide after having a meeting with the Leader of the Opposition.

Mr. SPEAKER.—These things should not be brought before the House without previous discussions.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ, ನಾನು ಮೊನ್ನೆ ಒಂದು ಸಲಹೆಯನ್ನು ಮಾಡಿದ್ದೆ ಆಗ ತಾವು ಆ ಸಲಹೆ ಬಹಳ ತಡವಾಗಿ ಬಂತೆಂದು ಹೇಳಿಸುಮ್ಮನಾದಿರಿ. ಆದ್ದರಿಂದ ಈಗ ಈ ಡಿಮ್ಯಾಂಡಿನ ಮೇಲೆ ಚರ್ಚೆ ಪ್ರಾರಂಭವಾಗುವುದಕ್ಕೆ ಮುನ್ನವೇ ನಾನೀಗ ಒಂದು ಹೊಸ ಸಲಹೆಯನ್ನು ತಮ್ಮ ಮುಂದಿಡಲು ಅಪೇಕ್ಷಿಸುತ್ತೇನೆ. ಆ ಸಲಹೆಯೇನೆಂದರೆ-ಆ ಕಾಮನ್ಸ್ ಸಭೆಯಲ್ಲಿ ನಡೆಯುತ್ತಿರುವ ಹಾಗೆ ಇಲ್ಲಿಯೂ ಪ್ರತಿಯೊಬ್ಬ ಸದಸ್ಯರಿಗೂ 5 ನಿಮಿಷ ಕಾಲಾವಕಾಶ ಕೊಟ್ಟರೆ- ಅಷ್ಟರಲ್ಲೇ ಅವರು ಹೇಳುವುದನ್ನು ಹೇಳಿ ಮುಗಿಸಿಬಿಡುವಂತೆ ಸೂಚನೆ ಮಾಡಿದರೆ ಒಳ್ಳೆಯದೆಂದು ಕಾಣುತ್ತದೆ. ನಾವೀಗ ಆ ಕಾಮನ್ಸ್ ಸಭೆಯಲ್ಲಿ ನಡೆಯುತ್ತಿರುವ ಪ್ರೋಸೀಜರನ್ನು ತಿಳಿದುಕೊಳ್ಳಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆ. ಆದ್ದರಿಂದ ಅಧ್ಯಕ್ಷರು ಪ್ರತಿಯೊಬ್ಬರಿಗೂ 5 ನಿಮಿಷವೋ ಅಥವಾ ಏಳು ನಿಮಿಷವೋ ಒಂದು ಕಾಲ ನಿಗದಿಯನ್ನು ಮಾಡತಕ್ಕದ್ದು ಉಚಿತವೆಂದು ಸಲಹೆ ಮಾಡುತ್ತೇನೆ. ತಾವು ನಿಮ್ಮ ಸಲಹೆ very late ಆಗಿ ಬಂತು ಅಂತ ಹೇಳದಿರಲೆಂದು ಈಗಲೇ ಸಜೆಕ್ಷನ್ ಕೊಟ್ಟಿದ್ದೇನೆ.

ಶ್ರೀ ಎಸ್. ಗೋಪಾಲ ಗೌಡ.—ಹಾಗೆ ಕಾಲ ನಿಗದಿ ಮಾಡಿದ ಮೇಲೆ ಯಾವಾದರೂ ಸದಸ್ಯರು ಅವರ ವೇಳೆಯಲ್ಲಿ ಈ ಸಭೆಯಲ್ಲಿಲ್ಲದೆ ಮಾತನಾಡಲಿಲ್ಲ ಎಂತ ಆದಾಗ ಆ ದಿವಸದ ಭತ್ಯವನ್ನು ಅಂದರೆ 16 ರೂಪಾಯಿಗಳನ್ನು ಕೊಡಬಾರದೆಂದು, ನಾನು ಈ ಒಂದು ತಿದ್ದುಪಡಿಯನ್ನು ಮೇಲಿನ ಸಲಹೆ ಬಗ್ಗೆ ಸೂಚಿಸುತ್ತೇನೆ.

Mr. SPEAKER.—I think it is necessary to fix time-limit because afterwards it should not be said that there are so many speakers and some are denied. Shall I make it ten minutes for each member and 20 minutes for the member who initiates the debate ?

Sri S. SIVAPPA.—You can fix ten minutes with a little relaxation of a few minutes according to your discretion.

Mr. SPEAKER.—The Hon'ble Member can take 20 minutes and for the rest of the Members it would be ten minutes each.

† ಶ್ರೀ ಎಸ್. ಶಿವಪ್ಪ.—ಸ್ವಾಮಿ, ಕೈಗಾರಿಕಾ ಮಂತ್ರಿಗಳು 12,03,43,500 ರೂಪಾಯಿಗಳ ಕೈಗಾರಿಕಾ ಬೇಡಿಕೆಯನ್ನು ಸಭೆಯ ಮುಂದೆ ಇಟ್ಟಿದ್ದಾರೆ. ಕೈಗಾರಿಕಾ ಬೇಡಿಕೆಯ ಮೇಲೆ ಮಾತನಾಡತಕ್ಕ ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ. ಒಂದಾನೊಂದು ಕಾಲದಲ್ಲಿ ಇಡೀ ಭಾರತ ದೇಶದಲ್ಲಿ ನಮ್ಮ ಮೈಸೂರು ದೇಶ ಕೈಗಾರಿಕಾ ನೀತಿಯಲ್ಲಿ ಪ್ರಥಮವಾಗಿತ್ತು. ಈ ನೀತಿಯಲ್ಲಿ ಪ್ರತಿಪಾದಿಸುತ್ತ Economy and Resources Committee ಯವರು ಸಹ ಹೀಗೆ ಹೇಳಿದ್ದಾರೆ:

> "In the march of rehabilitation and modernisation, the State of Mysore is among the first and it has the credit of being among foremost States in the Indian union."

ಮೈಸೂರು ದೇಶ, ಕೈಗಾರಿಕಾ ಪಥದಲ್ಲಿ ಬಹಳ ಪ್ರಾಮುಖ್ಯವಾದ ಪಾತ್ರವನ್ನು ವಹಿಸಿದಂಥ ಮೈಸೂರು ದೇಶ 17 ವರ್ಷಗಳ ಕಾಂಗ್ರೆಸ್ಸಿನ ಆಡಳಿತಾಧಿಕಾರದಲ್ಲಿ ಹಿಂದೆ ಹಿಂದಕ್ಕೆ ಸರಿಯುತ್ತಿದೆ ಎಂದು ಅದೇ ಕಮಿಟಿಯವರು ಬಹಳ ಹೃದಯಂಗಮವಾಗಿ, ಮೈಸೂರಿನ ಕೈಗಾರಿಕಾ

ನೀತಿಯಲ್ಲಿ ದಾರುಣವಾದ ಚಿತ್ರವನ್ನು ಬಹಳ ಚೆನ್ನಾಗಿ ಬರೆದಿದ್ದಾರೆ. ಇದು ಯಾರಿಗೂ ಕೂಡ ಸಂತೋಷವನ್ನುಂಟು ಮಾಡುವ ಪರಿಸ್ಥಿತಿಯಲ್ಲ. ಮೈಸೂರು ದೇಶದವರಾದ ನಾವೆಲ್ಲರೂ ಕೂಡ ಈ ವಿಚಾರವನ್ನು ಬಹಳ ಆಳವಾಗಿ ಯೋಚಿಸಿ ಮೈಸೂರು ದೇಶದ ಕೈಗಾರಿಕಾ ನೀತಿ ಏತಕ್ಕೋಸ್ಕರವಾಗಿ ಈ ರೀತಿ ಕುಂಠಿತವಾಗಿದೆ ಎನ್ನುವುದಕ್ಕೆ ಕಾರಣವನ್ನೂ ಕಂಡು ಹಿಡಿದು, ಅದನ್ನು ಸರಿಪಡಿಸದೆ ಹೋದರೆ ಬಹಳ ಕೆಟ್ಟ ಪರಿಸ್ಥಿತಿಗೆ ಹೋಗುತ್ತದೆಂದು ಎಲ್ಲರೂ ಕೂಡ ಎಚ್ಚರಿಕೆಯನ್ನು ನೀಡಬೇಕಾಗಿದೆ. ನಮ್ಮ ಶಿಲ್ಪ ಶ್ರೇಷ್ಠರಾದ ಸರ್ ಎಂ. ವಿಶ್ವೇಶ್ವರಯ್ಯನವರು industrialise or perish ಎಂದು ಹೇಳಿ ಅವರು ಆ ಹೊತ್ತಿನ ದಿವಸ ಏನೊಂದು ಕೈಗಾರಿಕಾ ಪಥದಲ್ಲಿ ಹೋಗತಕ್ಕ industrial scheme ಹಾಕಿದರೋ ಅಂಥ ನೀತಿಯನ್ನು ಕೂಡ ತೊಡೆದು ಹಾಕುತ್ತಿದ್ದೀರಿ. ಯಾವ ಒಬ್ಬ ಮಹಾ ಶಿಲ್ಪಿ, ಕೈಗಾರಿಕಾ ಶಿಲ್ಪಿ ಆದಂಥ ಸರ್ ಎಂ. ವಿಶ್ವೇಶ್ವರಯ್ಯನವರು ಹಾಕಿಕೊಟ್ಟ, ಮಾರ್ಗದಲ್ಲಿ ನಡೆಯನೆ, ಅವರ ಫೋಟೋಗಳನ್ನು ಇಟ್ಟು ಪೂಜೆ ಮಾಡುವುದರಲ್ಲಿಯೇ ತೃಪ್ತಿ ಹೊಂದಿ, ಅವರು ಹೇಳಿದ ಮಾರ್ಗದಲ್ಲಿ ನಡೆದು, ಅವರು ಹೇಳಿದುದನ್ನು ಆಚರಣೆಗೆ ತರತಕ್ಕ ಸಾಮರ್ಥ್ಯ ನಿಮ್ಮಲ್ಲಿಲ್ಲದೇ ಹೋಯಿತು ಎಂದು ನಾನು ವಿಷಾದದಿಂದ ಹೇಳಬೇಕಾಗಿದೆ. ಸರ್ ಎಂ. ವಿಶ್ವೇಶ್ವರಯ್ಯನವರ ಭಾವಚಿತ್ರವನ್ನು ಸಭೆಯ ಹೊರಗಡೆ ಗಾಳಿಯಲ್ಲಿ ಹಾಕಿದ್ದೀರಿ. ಮೈಸೂರು ದೇಶದ ಶಿಲ್ಪಿಯಾದ ಅವರ ಹೆಸರನ್ನೂ ದೇಶದಲ್ಲೆಲ್ಲ ಕೊಂಡಾಡಿದ್ದಾರೆ. ಅಂಥ ಮಹಾ ಪುರುಷನ ಭಾವಚಿತ್ರ ಇವೊತ್ತು ಹೊರಗಡೆ ಗಾಳಿಯಲ್ಲಿ ಬಿದ್ದಿದೆ. ಇದು ಸರ್ಕಾರದ ಅಲಕ್ಷ್ಯ ಮನೋಭಾವವನ್ನು ತೋರಿಸುತ್ತದೆ. ಸಭೆ, ಸಮಾರಂಭಗಳಲ್ಲಿ ಅವರ ಹೆಸರನ್ನು ಉಪಯೋಗಿಸಿಕೊಂಡು ಹೊಗಳಿಕೆ ಗಳಿಸಲು ಪ್ರಯತ್ನಪಡುತ್ತಿದ್ದಾರೆಯೇ ಹೊರತು ಅವರ ಕಾರ್ಯತತ್ಪರತೆಯನ್ನು ಮುಂದುವರಿಸಿಕೊಂಡು ಹೋಗುತ್ತಿಲ್ಲ. ಇದು ಮೈಸೂರಿನವರಾದ ನಮಗೆ ಖಂಡಿತವಾಗಿಯೂ ಶೋಚನೀಯವಾದ ಪರಿಸ್ಥಿತಿಯಾಗಿದೆ.

ಇವೊತ್ತಿನ ದಿವಸ ಸರ್ಕಾರದವರೇ ನೇರವಾಗಿ ನಡೆಸುತ್ತಿರುವ ಕೈಗಾರಿಕೆಗಳ ಸ್ಥಿತಿಗತಿಗಳನ್ನೂ ಸೂಕ್ಷ್ಮವಾಗಿ ವಿಮರ್ಶೆ ಮಾಡುವುದಾದರೆ ಅದು ತಮ್ಮ ವಾಕ್ಯದಿಂದಲೇ ವ್ಯಕ್ತವಾಗುತ್ತದೆ. ಈ ಸರ್ಕಾರದ ಕೈಗಾರಿಕೆಗಳು ಆಶಾದಾಯಕವಾಗಿ ಕೆಲಸ ಮಾಡುತ್ತಿಲ್ಲವೆನ್ನುವುದು ಎಲ್ಲಾ ವರದಿಗಳಲ್ಲಿಯೂ ಕಂಡು ಬರುತ್ತದೆ. ಮೈಸೂರು ದೇಶದ ಕೈಗಾರಿಕೆಗಳಲ್ಲಿ 20 ಕೋಟಿ ರೂಪಾಯಿ ಬಂಡವಾಳ ಹಾಕಿರುವುದರಲ್ಲಿ ಶೇಕಡ ಆರರಷ್ಟು ಕೈಗಾರಿಕೆಗಳು ಮಾತ್ರ ಲಾಭದಾಯಕವಾಗಿ ಕೆಲಸ ಮಾಡುತ್ತಿವೆ. ಈ ಕೈಗಾರಿಕೆಗಳನ್ನು ಸರ್ಕಾರದವರು ನಡೆಸದೆ ಬಂಡವಾಳಶಾಹಿಗಳು ನಡೆಸುತ್ತಿದ್ದರೆ, ಅವರು ಏನು ಮಾಡುತ್ತಿದ್ದರೆಂದು ತಾವು ಯೋಚನೆ ಮಾಡಬೇಕು. ಅವರು ಸರಿಯಾಗಿ ಕೆಲಸ ಮಾಡದೆ ಕೈಗಾರಿಕೆಗಳನ್ನೆಲ್ಲ ಹೇಳದೆ ಕೇಳದೆ ಹರಾಜು ಹಾಕಿ ಯಾರಿಗೋ ವಹಿಸಿಬಿಡುತ್ತಿದ್ದರು. ಸರ್ಕಾರದ ನೇತೃತ್ವದಲ್ಲಿ ನಡೆಯುವ ಕೈಗಾರಿಕೆಗಳು ನಷ್ಟದಲ್ಲಿ ನಡೆಯುವುದಕ್ಕೆ ಕಾರಣಗಳನ್ನು ಕಂಡು ಹಿಡಿಯಬೇಕಾಗಿದೆ. ಏನೊಂದು ಕಮಿಟಿಯನ್ನು ಸರ್ಕಾರ ನೇಮಕ ಮಾಡಿತ್ತೋ ಅವರೇ ಹೇಳುವಂತೆ ಸರ್ಕಾರದ ಕೈಗಾರಿಕಾ ಆಡಳಿತದಲ್ಲಿ ದಕ್ಷತೆ ಇಲ್ಲದೆ ಇರುವುದು ಒಂದು ಕಾರಣ, ಇನ್ನೊಂದು ಲೆಕ್ಕಾಚಾರದ ನೀತಿಯಲ್ಲಿ, ಯಾವ ಆಧುನಿಕ ರೀತಿಯಲ್ಲಿ ಕೈಗಾರಿಕಾ ಲೆಕ್ಕಾಚಾರವನ್ನಿಡಬೇಕೋ ಅಂಥ ಲೆಕ್ಕಾಚಾರವನ್ನು ಅನುಸರಿಸಲಿಲ್ಲವೆಂದು ಕಮಿಟಿಯವರು ಹೇಳುತ್ತಾರೆ. The mode of cost accounting ಇಲ್ಲವೆಂದು ಹೇಳುತ್ತಾರೆ.

> "It is suggested that the cost accountant's unit be set up in each State-owned industrial concern under au experienced cost Accounts Officer with trained personnel."

ಎಂದರೆ ನಿಮ್ಮ ಕೈಗಾರಿಕೆಗಳಲ್ಲಿ ಲೆಕ್ಕಾಚಾರ ಪದ್ಧತಿ ಆಧುನಿಕವಾಗಿಲ್ಲ-ನಿಮ್ಮ ಉತ್ಪತ್ತಿಗೆ ಏನು ಖರ್ಚಾಗುತ್ತದೆ. ಮತ್ತು ಅಲ್ಲಿ ಉತ್ಪತ್ತಿಯಾದ ಪದಾರ್ಥಗಳಿಗೆ ಎಷ್ಟು ಲಾಭ ಬರುತ್ತದೆನ್ನುವ ಪದ್ಧತಿ ನಿಮ್ಮಲ್ಲಿ ಆಧುನಿಕವಾದ ರೀತಿಯಲ್ಲಿಲ್ಲ-ಬಹುಶಃ ಕೋಲಾರದ ಚಿನ್ನದ ಗಣಿಗಳನ್ನು ಬಿಟ್ಟರೆ—ಈಗ ಅದನ್ನು ಸಹ ಮಾರಿಬಿಟ್ಟಿರಿ - ಬೇರೆಲ್ಲಿಯೂ the method of cost accounting ಇಲ್ಲವೇ ಇಲ್ಲವೆಂದು ಹೇಳಿದ್ದಾರೆ.

ಶ್ರೀ ಬಿ. ಡಿ. ಜತ್ತಿ.—ಅದು ಬಹಳ ಹಳೆಯ ರಿಪೋರ್ಟ್. ಅದು ಬಂದು ಒಂದು ವರ್ಷವಾಯಿತು. ಈಗ ಬೇಕಾದಷ್ಟು improve ಆಗಿದೆ.

ಶ್ರೀ ಎಸ್. ಶಿವಪ್ಪ.—ತಮ್ಮ ಮಂತ್ರಿಮಂಡಲವೇ ಮಾಡಿದಂಥ ಕಮಿಟಿ ಯಾವ ರಿಪೋರ್ಟನ್ನು ಕೊಟ್ಟಿದೆ ಅದು ಬಂದು ಇನ್ನೂ ಒಂದು ವರ್ಷ ಕೂಡ ಆಗಿಲ್ಲ. ಅನೇಕರು ಹೇಳಿದುದನ್ನು ಕಾರ್ಯತಃ ಮಾಡುತ್ತಿಲ್ಲ. ಈಗ improve ಮಾಡಿದ್ದೇವೆಂದು ಹೇಳಿದ್ದೀರಿ. ಮುಂದಿನ ವರ್ಷದ ವಾರ್ಷಿಕ

(ಶ್ರೀ ಎಸ್. ಶಿವಪ್ಪ)

ವರದಿ ಬಂದಾಗ ಯಾವ ರೀತಿಯ ಲಾಭ ತೋರಿಸುತ್ತದೆ ಎನ್ನುವುದರ ಮೇಲೆ ಅವಲಂಬಿಸಿದೆ. ಬಾಯಿ ಮಾತಿನಲ್ಲಿ ಹೇಳಿದರೆ ಅದನ್ನು ಒಪ್ಪತಕ್ಕ ಪರಿಸ್ಥಿತಿಯಲ್ಲಿ ಖಂಡಿತವಾಗಿಯೂ ನಾವಿಲ್ಲ.

ನಮ್ಮ ಮೈಸೂರು ದೇಶದ ಕೈಗಾರಿಕಾ ಇಲಾಖೆಯಲ್ಲಿ ಕೈಗಾರಿಕೆಗಳನ್ನು ನಡೆಸುತ್ತಿರುವ ವರಲ್ಲಿ correct tools and techniques ಇವರ ಅಭಾವವಿದೆ ಎಂದು ಹೇಳುತ್ತಿದ್ದಾರೆ. The skills of workers compare favourably ಎಂದರೆ ನಮ್ಮ ಮೈಸೂರು ದೇಶದಲ್ಲಿರತಕ್ಕ ಕೆಲಸಗಾರರು ಪ್ರಪಂಚದ ಯಾವ ಕಾರ್ಖಾನೆಯಲ್ಲಿರತಕ್ಕ ಕೆಲಸಗಾರರಿಗಿಂತ ಬಹಳ ಬುದ್ಧಿವಂತ ರಾಗಿದ್ದಾರೆ. ಆದರೆ ಅವರಿಗೆ ಸಾಕಷ್ಟು ಸಲಕರಣೆಗಳಿಲ್ಲದೇ ಇರುವುದರಿಂದ ನಮ್ಮ ಇಲಾಖೆ ಗಳಲ್ಲಿರತಕ್ಕ ಕೈಗಾರಿಕೆಗಳಲ್ಲಿ ಪ್ರತಿಫಲ ಬರುತ್ತಿಲ್ಲ ಎಂದು ಒತ್ತಿ ಹೇಳಿದ್ದಾರೆ.

> "The skills of workers compare favourably with the best in the world while the organisations are not only not fruitful, but poor and deficient."

> "A cursory study makes it abundantly clear that the problem of managing state-owned industries has received scant attention."

ಇದು ತಜ್ಞರು ಹೇಳಿರತಕ್ಕ ಅಭಿಪ್ರಾಯ. ದಯವಿಟ್ಟು ಇದನ್ನು ಹಗುರವಾಗಿ ಭಾವನೆ ಮಾಡಬಾರದು. ಮೈಸೂರು ಸರ್ಕಾರ ತನ್ನ ಆಡಳಿತದಲ್ಲಿ ನಡೆಸುತ್ತಿರುವ ಕಾರ್ಖಾನೆಗಳು ಚೆನ್ನಾಗಿ ನಡೆಯಲಿ ಎನ್ನುವ ವಿಚಾರವನ್ನು ನೀವು ನೇಮಕ ಮಾಡಿರತಕ್ಕ ಕಮಿಟಿಯವರೇ ಹೇಳಿ ದ್ದಾರೆ. ಈ ಅಭಿಪ್ರಾಯವನ್ನು ತಾವು ಹಗುರವಾಗಿ ತೆಗೆದುಕೊಳ್ಳಬಾರದು. ಇದನ್ನು ಅದಷ್ಟು ಮಟ್ಟಿಗೂ ಸರಿಪಡಿಸಿಕೊಳ್ಳದೆ ಹೋದರೆ ನಮ್ಮ ದೇಶದ ಕೈಗಾರಿಕೆಗಳು ಏನು ಪ್ರತಿಫಲವನ್ನು ಕೊಡಬೇಕೋ ಆ ಪ್ರತಿಫಲ ದೊರಕದೆ ಹೋಗತಕ್ಕ ಸನ್ನಿವೇಶ ಬರುತ್ತದೆ ಎಂದು ನಾವು ಅನೇಕ ಸಲ ಹೇಳಿದ್ದೇವೆ. ಇವೊತ್ತು ಕೂಡ ಅದೇ ಎಚ್ಚರಿಕೆಯನ್ನು ತಮಗೆ ಹೇಳಬೇಕಾಗಿದೆ.

ಇವೊತ್ತು ಅನೇಕ ಕೈಗಾರಿಕೆಗಳನ್ನು ರಾಷ್ಟ್ರೀಕರಣ ಮಾಡಿದ್ದೀರಿ. ರಾಷ್ಟ್ರೀಕರಣ ಮಾಡಿ ದಂಥ ಕೈಗಾರಿಕೆಗಳ ಸ್ಥಿತಿ ಮೊದಲು ಏನಿತ್ತೋ ಅದಕ್ಕಿಂತ ಹಿಂದೆ ಹೋಗಿದೆ. ಸಮಾಜವಾದದ ಮೇಲೆ ಸರ್ಕಾರದ ರಚನೆ ಮಾಡಿದ್ದೇವೆ ಎಂದು ಹೇಳತಕ್ಕವರ ರಾಷ್ಟ್ರೀಕರಣದ ತತ್ವವೇನಿದೆ, ಅದರ ಉದಾತ್ತ ಧ್ಯೇಯವೇನಿದೆ ಅದರ ಪ್ರಕಾರ ಕೈಗಾರಿಕೆಗಳನ್ನು ನಡೆಸತಕ್ಕ ರೀತಿನೀತಿಯಲ್ಲಿ ಜನರಿಗೆ ಸಂಶಯ ಬಂದು ರಾಷ್ಟ್ರೀಕರಣ ನೀತಿ ಇದೆಯೋ ಎನ್ನುವ ಭಾವನೆ ಅವರಲ್ಲಿ ಉದ್ಭವವಾಗುವಂಥ ಕಾರ್ಯ ಮಾಡಿದ್ದೀರಿ.

ಶ್ರೀ ಕೆ. ಮಲ್ಲಪ್ಪ.—ಈಗ ನಾವು ಯಾವ ಕೈಗಾರಿಕೆಯನ್ನೂ ರಾಷ್ಟ್ರೀಕರಣ ಮಾಡಿಲ್ಲ.

ಶ್ರೀ ಎಸ್. ಶಿವಪ್ಪ.—ಈಗ ರೋಡ್ ಟ್ರಾನ್ಸ್‌ಪೋರ್ಟು ಇಲಾಖೆಯನ್ನು ರಾಷ್ಟ್ರೀಕರಣಮಾಡಿ ದಿರಿ. ಕೋಲಾರದ ಚಿನ್ನದ ಗಣಿಯನ್ನು ರಾಷ್ಟ್ರೀಕರಣ ಮಾಡಿದಿರಿ. ಆದರೆ ಈ ಚಿನ್ನದ ಗಣಿ ಯನ್ನು ನಡೆಸಲು ಶಕ್ತಿಯಿಲ್ಲ ಎಂದು ಇವೊತ್ತಿನ ದಿವಸ ಅದನ್ನು ಕೇಂದ್ರಕ್ಕೆ ವಾಪಸು ವಹಿಸಿಬಿಟ್ಟಿ ದ್ದೀರಿ. ತಾವು ಈ ಚಿನ್ನದ ಗಣಿಯನ್ನು ರಾಷ್ಟ್ರೀಕರಣ ಮಾಡಿದ ಮೇಲೆ ಪುನಃ ಇದನ್ನು ಕೇಂದ್ರಕ್ಕೆ ವಹಿಸುವುದಕ್ಕೆ ಮುಂಚೆ ತಾವು ಈ ಸಭೆಗೆ ಬಂದು ಸದಸ್ಯರ ಸಲಹೆಗಳನ್ನು ತೆಗೆದುಕೊಂಡು ಮಾಡಲಿಲ್ಲ. ಈ ಶಾಸನ ಸಭೆಯಲ್ಲಿ ಇದರ ಬಗ್ಗೆ ಮೇಲಿಂದ ಮೇಲೆ ಕೇಳುತ್ತಿದ್ದಾಗ ನೀವು ಈ ರಾಷ್ಟ್ರೀಕರಣದಿಂದ ಲಾಭವಾಗಲಿಲ್ಲ. ಅದರಿಂದ ಶಕ್ತಿಯಿಲ್ಲದೆ ನಾವೀಗ ಇದನ್ನು ಕೇಂದ್ರಕ್ಕೆ ವಹಿಸುತ್ತಿದ್ದೇವೆಂದು ನಿಮ್ಮ ನೀತಿಯನ್ನು ಇಲ್ಲಿ ಹೇಳಬೇಕಾಗಿತ್ತು, ನಮ್ಮ ದೇಶದ ಜನತೆಗೆ ಹೇಳ ಬೇಕಾಗಿತ್ತು. ರಾಷ್ಟ್ರೀಕರಣ ಮಾಡಿದ್ದರೂ ಚಿನ್ನದ ಗಣಿಯಲ್ಲಿ ಸಾಕಷ್ಟು ಲಾಭ ಬರಲಿಲ್ಲ. ಇದರಿಂದ ಎಲ್ಲ ವಿಚಾರಗಳನ್ನು ಗಮನಕ್ಕೆ ತೆಗೆದುಕೊಂಡು, ಈ ಸಭೆಯ ಗಮನಕ್ಕೂ ತಂದು ಆನಂತರ ಕೇಂದ್ರಕ್ಕೆ ವರ್ಗಾಯಿಸಿದ್ದಿದ್ದರೆ ನಾವೂ ಕೂಡ ನಿಮ್ಮ ನೀತಿಗೆ "ಸೈ" ಎನ್ನುತ್ತಿದ್ದೆವು. ಹೀಗೆ ಕೈಗಾರಿಕೆಗಳು ಸರಿಯಾಗಿ ಕೆಲಸ ಮಾಡದೇ ಹೋದರೆ, ಇದು ರಾಷ್ಟ್ರೀಕರಣದ ನೀತಿಗೇ ಒಂದು ಧಕ್ಕೆ ತಂದಂತಾಗುತ್ತದೆ.

ಶ್ರೀ ಕೆ. ಮಲ್ಲಪ್ಪ.—ರಾಷ್ಟ್ರೀಕರಣ ಮಾಡಿದುದಲ್ಲ. When it was transferred to the Government of India, it was a Government undertaking.

ಶ್ರೀ ಎಸ್. ಶಿವಪ್ಪ.—ನಮಗೂ ಗೊತ್ತಿದೆ ಜಾಣತನದಿಂದ ತಪ್ಪಿಸಿಕೊಳ್ಳುವುದಕ್ಕಾಗಿ ನೀವು ಈ ಚಿನ್ನದ ಗಣಿಯನ್ನು ಕೇಂದ್ರಕ್ಕೆ ವಹಿಸಿದ್ದೇವೆಂದು ಹೇಳುತ್ತೀರಿ.

Mr. SPEAKER.—Don't you think that it was a wise thing on the part of the Government.

ಶ್ರೀ ಎಸ್. ಶಿವಪ್ಪ.—ಅದಕ್ಕೋಸ್ಕರವಾಗಿಯೇ ನಾನು ಇಲ್ಲಿ ಹೇಳುತ್ತಿರುವುದು ಇಂಗ್ಲೆಂಡಿನಲ್ಲಿ ಕೂಡ ಹಿಂದೆ ಲೇಬರ್ ಸರಕಾರ ಬಂದಾಗ ಅಲ್ಲೂ ಎಲ್ಲ ಕೈಗಾರಿಕೆಗಳನ್ನು ರಾಷ್ಟ್ರೀಕರಣ ಮಾಡಿದರು. ಆ ರೀತಿ ರಾಷ್ಟ್ರೀಕರಣ ಮಾಡಿದಂತಹ ಕೈಗಾರಿಕೆಗಳು ಇವೊತ್ತು ಎಷ್ಟು ಉನ್ನತ ಮಟ್ಟದಲ್ಲಿ ನಡೆಯುತ್ತಿವೆ ಎನ್ನುವುದನ್ನು ತಾವು ಇಂದು ಅವಲೋಕಿಸಬಹುದು. ಅಲ್ಲಿ ರಾಷ್ಟ್ರೀಕರಣ ಮಾಡಿದಂತಹ ಕೈಗಾರಿಕೆಗಳು ಬಹಳ ಚೆನ್ನಾಗಿ ನಡೆಯುತ್ತಿವೆ. ಇವೊತ್ತು ನಿಮ್ಮಲ್ಲಿರುವ ಕೈಗಾರಿಕೆಗಳಲ್ಲಿ ಸರಿಯಾಗಿ ಕೆಲಸ ಮಾಡುವಂತಹ ತಜ್ಞರಾದ ಅಧಿಕಾರಿಗಳಿಲ್ಲ. ಇದರಿಂದ ಇಲ್ಲಿನ ಕೈಗಾರಿಕೆಗಳೆಲ್ಲ ಹಾಳಾಗುತ್ತಿವೆ. ಕೈಗಾರಿಕೆಗಳಿಗಾಗಿ ಬೋರ್ಡುಗಳನ್ನು ಮಾಡಿ ಅದರಲ್ಲಿ ನಿಮಗೆ ಬೇಕಾದವರು, ನಿಮ್ಮ ಪಕ್ಷಕ್ಕೆ ಸೇರಿದವರನ್ನೊ ಇಲ್ಲವೆ ನಿಮ್ಮ ಬಂಧುಗಳಾಗಿರುವವರನ್ನೊ ಅದಕ್ಕೆ ಅಧ್ಯಕ್ಷರನ್ನಾಗಿ ಮಾಡುತ್ತಿದ್ದೀರಿ. ಈ ರೀತಿ ಅನುಭವವಿಲ್ಲದಿರುವವರನ್ನು, ತಜ್ಞರಲ್ಲದವರನ್ನು ಮತ್ತು ಸಾಮರ್ಥ್ಯರಲ್ಲದವರನ್ನು ಈ ಕೈಗಾರಿಕೆಗಳಲ್ಲಿ ನೇಮಿಸುತ್ತಿರುವುದರಿಂದ, ನಮ್ಮ ದೇಶದಲ್ಲಿರುವ ಕೈಗಾರಿಕೆಗಳನ್ನು ರಾಷ್ಟ್ರೀಕರಣ ಮಾಡಬೇಕೆಂದು ಯಾವ ಉದ್ದೇಶದಿಂದ ಮಾಡಿದರೋ ಆ ಉದ್ದೇಶ ಸಾರ್ಥಕವಾಗುತ್ತಿಲ್ಲ ಎಂದು ಇಲ್ಲಿ ಒತ್ತಿ ಹೇಳಬೇಕಾಗಿದೆ. ನಿಜವಾಗಿ ಕಾರ್ಯಗತವಾಗುತ್ತಿರುವ ಕೈಗಾರಿಕೆಗಳು ಎಂದು ನಾವು ಹೇಳುವಂತಿಲ್ಲ. ಇಂಗ್ಲೆಂಡಿನಲ್ಲಿ ರಾಷ್ಟ್ರೀಕರಣ ಮಾಡಿರುವ ಕೈಗಾರಿಕೆಗಳಲ್ಲಿ, ಎಕ್ಸ್‌ಪೆರಿಮೆಂಟು ಮಾಡಿ ಅದಕ್ಕೆ ತಕ್ಕ ಮೆಷಿನರಿಗಳನ್ನು ಉಪಯೋಗಿಸಿ ತಜ್ಞರಾದವರಿಂದ, ಪ್ರವೀಣರುಗಳಿಂದ ಕೆಲಸ ಚೆನ್ನಾಗಿ ನಡೆಯುತ್ತಿರುವುದನ್ನು ಎಲ್ಲರೂ ನೋಡಬಹುದು. ಇಂತಹ ತಜ್ಞರು ದೊಡ್ಡ ದೊಡ್ಡ ಆಯಿಲ್ ಕಂಪೆನಿಗಳನ್ನೊ, ಇತರ ಕೈಗಾರಿಕೆಗಳನ್ನು ನಡೆಸುತ್ತಿದ್ದಾರೆ. ಅಂತಹ ತಜ್ಞರಾದವರನ್ನು ಎಕ್ಸ್‌ಪರ್ಟುಗಳನ್ನು ಇಲ್ಲಿ ರಾಷ್ಟ್ರೀಕರಣ ಮಾಡಿರುವ ಕೈಗಾರಿಕೆಗಳಲ್ಲಿ ಉಪಯೋಗಿಸಿಕೊಂಡು ಅವರ ಸೇವೆಯನ್ನು ಪಡೆದು, ಚೆನ್ನಾಗಿ ನಡೆಯುತಕ್ಕ ರೀತಿಯಲ್ಲಿ ಮಾಡಬೇಕು. ನಮ್ಮ ದೇಶದವರು ಪರದೇಶಗಳಿಗೆ ಹೋಗಿ ಚೆನ್ನಾಗಿ ತರಬೇತಿ ಪಡೆದುಬಂದ ಪರಿಣತರಾದ ತಜ್ಞರುಗಳಿಗೆ ಇಲ್ಲಿನ ಕೈಗಾರಿಕೆಗಳಲ್ಲಿ ಯೋಗ್ಯವಾದ ಪ್ರೋತ್ಸಾಹ ಸಿಗದೆ ಇವೊತ್ತಿನ ದಿವಸ ಅವರು ಹೊರಗಡೆಗೆ ಹೋಗುತ್ತಿದ್ದಾರೆ. ಅಂತಹ ಅಧಿಕಾರಿಗಳಿಂದ ಅಲ್ಲಿನ ಕೈಗಾರಿಕೆಗಳೂ ಪ್ರಗತಿ ಹೊಂದುತ್ತಿವೆ. ಇಲ್ಲಿರುವ ಕೈಗಾರಿಕೆಗಳಲ್ಲಿ ಸಾಕಷ್ಟು ಪ್ರಗತಿ ಏಕೆ ಆಗುವುದಿಲ್ಲ ಎನ್ನುವುದನ್ನು ಸರಿಯಾಗಿ ಅರ್ಥಮಾಡಿಕೊಂಡು ನೋಡುವಾಗ ಇಲ್ಲಿ ಸರಿಯಾದ ಎಕ್ಸ್‌ಪೆರಿಮೆಂಟು ಮಾಡಿ ಕೆಲಸ ಮಾಡುವ ತಜ್ಞರು ಇಲ್ಲ ಎನ್ನುವುದು ತಿಳಿಯುತ್ತದೆ. ಚೆನ್ನಾಗಿ ಪರಿಣತರಾದ ತಜ್ಞರು ಮತ್ತು ಚೆನ್ನಾಗಿ ಪರಿಶ್ರಮವಿರುವಂತಹ ವ್ಯಕ್ತಿಗಳನ್ನು ಆರಿಸಿ ಈ ಕೈಗಾರಿಕೆಗಳನ್ನು ನಡೆಸದೇ ಹೋದರೆ ಈ ಕೈಗಾರಿಕಾ ನೀತಿ ಸಫಲವಾಗುವುದಿಲ್ಲ, ಎಂದು ನಾನು ವಿಷಾದದಿಂದ ಹೇಳಬೇಕಾಗಿದೆ. ಯಾವ ರೀತಿ ಮದರಾಸಿನಲ್ಲಿ ಮತ್ತಿತರ ಕಡೆಗಳಲ್ಲಿ ಕೈಗಾರಿಕೆಗಳು ಸಾಕಷ್ಟು ಮುಂದುವರಿಯುತ್ತಿವೆ ಎನ್ನುವುದನ್ನು ನೋಡಿ ಅರ್ಥಮಾಡಿಕೊಳ್ಳಬಹುದು. ಆದುದರಿಂದ ಎಲ್ಲ ಕೈಗಾರಿಕೆಗಳನ್ನೂ ನೀವೇನೂ ಮಾಡುತ್ತಿರುವುದರಿಂದ ನಿಮ್ಮ ಅಧಿಕಾರಿಗಳು ಸರಿಯಾಗಿ ನೋಡುತ್ತಿಲ್ಲ. ಇಂಡಸ್ಟ್ರಿಗಳು ಪಬ್ಲಿಕ್ ಸೆಕ್ಟರಿನಲ್ಲಿ ಮತ್ತು ಪ್ರೈವೇಟು ಸೆಕ್ಟಾರಿನಲ್ಲಿ ಪ್ರಾರಂಭವಾಗುವಂತೆ ಏರ್ಪಾಡು ಮಾಡಬೇಕು. ನಿಮ್ಮ ಕೈಗಾರಿಕಾ ನೀತಿ ಹೇಗಿದೆ ಎಂದರೆ, ಕೆಲವು ದೊಡ್ಡ ದೊಡ್ಡ ಕೈಗಾರಿಕೆಗಳನ್ನು ಸರಕಾರವೇ ನೇರವಾಗಿ ಷೇರುಗಳನ್ನು ಹಾಕಿಕೊಂಡು ತಮ್ಮ ಜವಾಬುದಾರಿಯನ್ನೆಲ್ಲಾ ಇಲ್ಲಿನ ಅಧಿಕಾರಿಗಳಿಗೇ ಬಿಟ್ಟಿದ್ದಾರೆ. ಇದೇ ಸಮಯದಲ್ಲಿ ಬೇರೆ ಯಾರಾದರೂ ಪರಿಣತರಾದವರು ಇಲ್ಲಿ ಕೈಗಾರಿಕೆಯನ್ನು ಸ್ಥಾಪನೆ ಮಾಡುವುದಕ್ಕೆ ಬಂದು ಸರಕಾರದ ಸಹಾಯ ಸಹಕಾರಗಳನ್ನು ಕೇಳಿದರೆ ಇಲ್ಲಿರುವ ಅಧಿಕಾರಿಗಳು ಅವಕಾಶವನ್ನೇ ಕೊಡುವುದಿಲ್ಲ. ಇಂತಹ ನೀತಿಯನ್ನು ಅನುಸರಿಸುತ್ತಿರುವುದು ಈ ದೇಶದಲ್ಲಿ ಕಂಡುಬರುತ್ತದೆ. ಇದರಿಂದಾಗಿ ಈ ದೇಶದಲ್ಲಿ ತಾವೇ ನಡೆಸತಕ್ಕ ಕೈಗಾರಿಕೆಗಳಲ್ಲಿ ಪ್ರಗತಿ ಹೇಗೆ ತಾನೇ ಸಾಧ್ಯವಾದೀತು ? ಪ್ರೈವೇಟು ಇಂಡಸ್ಟ್ರಿಗಳಲ್ಲಿ ಸರಕಾರಿ ಅಧಿಕಾರಿಗಳೇ ಇಲ್ಲದೆ, ಚೆನ್ನಾಗಿ ನಡೆಯುತ್ತಿರುವ ಕಾಲದಲ್ಲಿ ನಮ್ಮ ಕೈಗಾರಿಕೆಗಳಿಂದ ಪ್ರಗತಿ ಹೇಗೆ ಸಾಧ್ಯ ಎನ್ನುವ ಧೋರಣೆ ಬಂದಿದೆ. ನಿಜವಾಗಿಯೂ ಕೈಗಾರಿಕಾ ಕ್ಷೇತ್ರದಲ್ಲಿ ಒಳ್ಳೆಯ ಪರಿಪೂರ್ಣತೆಯನ್ನು ಹೊಂದಿ ಅನೇಕ ಪ್ರದೇಶಗಳಿಗೆ ಹೋಗಿ ದೊಡ್ಡ ದೊಡ್ಡ ಪದವಿಗಳನ್ನು ಪಡೆದುಕೊಂಡು ಬಂದು ಇಲ್ಲಿ ಏನಾದರೂ ಕೈಗಾರಿಕೆಗಳನ್ನು ಸ್ಥಾಪನೆಮಾಡುತ್ತೇವೆ. ನಮಗೆ ಬೇಕಾಗುವ ಸೌಲಭ್ಯಗಳನ್ನು ದೊರಕಿಸಿಕೊಡಿ ಎಂದು ಕೇಳಿದರೆ ಅಂತಹವರಿಗೆ ಸರಕಾರದ ಸಹಾಯ ದೊರಕಲಿಲ್ಲ, ನಿಮ್ಮಿಂದ

(ಶ್ರೀ ಎಸ್. ಶಿವಪ್ಪ)

ಸೌಲಭ್ಯಗಳು ದೊರೆಯಬೇಕಾಗಿದ್ದರೆ ನಿಮಗೆ ಆಪ್ತರಾದ ಜನಗಳಿಗೆ ಮಾತ್ರ ಅಂತಹ ಸೌಲಭ್ಯಗಳು ದೊರಕುತ್ತವೆ. ನಿಜವಾಗಿಯೂ ಕೈಗಾರಿಕೆ ವಿಷಯದಲ್ಲಿ ಪ್ರವೀಣರಾದವರಿಗೆ, ಕೈಗಾರಿಕೆಯ ಸಂಪತ್ತನ್ನು ಜಾಸ್ತಿ ಮಾಡಬೇಕೆಂದು ಮುಂದೆ ಬರುವಂತಹ ಜನಕ್ಕೆ ಸರಕಾರದಿಂದ ಯಾವ ಸಹಾಯವೂ ದೊರಕುತ್ತಿಲ್ಲ. ಇದಕ್ಕಾಗಿ ಅನೇಕ ಉದಾಹರಣೆಗಳನ್ನು ಹೇಳಬಹುದು. ನಮ್ಮ ಯುವಕರು ಹೊರ ದೇಶಗಳಿಗೆ ಹೋಗಿ ಪರಿಣತರಾಗಿ ಬಂದು ನಮ್ಮ ಸರಕಾರಕ್ಕೆ ಅರ್ಜಿಹಾಕಿ ಇಂಡಸ್ಟ್ರಿಯಲ್ ಎಸ್ಟೇಟಿನಲ್ಲೋ ಅಥವಾ ಬೇರೆ ಕಡೆಗಳಲ್ಲೋ ಕೆಲಸಮಾಡಲು ಅವಕಾಶ ಸಿಕ್ಕಿದ್ದರೆ ಅಂತಹವರಿಂದ ಕೈಗಾರಿಕೆಯಲ್ಲಿ ಹೆಚ್ಚಿನ ಪ್ರಗತಿಯನ್ನು ಸಾಧಿಸಿ ಈ ದೇಶಕ್ಕೆ ಸಹಾಯಮಾಡಬೇಕು ಎಂದು ತಮ್ಮ ಮುಂದೆ ಬಂದರೆ, ಅಂತಹವರಿಗೆ ಇಲ್ಲಿ ಅವಕಾಶವೇ ಸಿಗುತ್ತಿಲ್ಲ. ಹೀಗೆ ಒಬ್ಬರು ಬಂದು ಅವರಿಗೆ ಅವಕಾಶ ಸಿಗಲಿಲ್ಲ ಎಂದು ಇವೊತ್ತು ಅವರನ್ನು ತಾತಾ ಇಂಡಸ್ಟ್ರೀಸ್ ಸಂಸ್ಥೆಯಲ್ಲಿ 800 ರಿಂದ 1000 ರೂಪಾಯಿಗಳ ಸಂಬಳ ಮೇಲೆ ಅವರನ್ನು ಕೆಲಸಕ್ಕೆ ಈಗ ನೇಮಿಸಿಕೊಂಡಿದ್ದಾರೆ. ಈ ತರಹದ ಅನೇಕ ಉದಾಹರಣೆಗಳನ್ನು ಕೊಡಬಹುದು. ಈಚೆಗೆ ನಾನು ಈ ಸಭೆಯಲ್ಲಿ ಮಾನ್ಯ ಸಚಿವರನ್ನು ಒಂದು ಪ್ರಶ್ನೆ ಕೇಳಿದಾಗ Raw Material ಗಳನ್ನು ಸಪ್ಲೈ ಮಾಡಲು ಯಾವ ರೀತಿ ಕಾರ್ಯಕ್ರಮ ಹಾಕಿಕೊಂಡಿದ್ದಾರೆ ಎನ್ನುವುದನ್ನು ಹೇಳಿದರು. ಕೈಗಾರಿಕೆಯ ವ್ಯಾಪಾರಸ್ಥರಿಗಾಗಿ ಜಿಂಕ್‌ಷೀಟು, ಅಲ್ಯೂಮಿನಿಯಂ, ಸ್ಟೇನ್‌ಲೆಸ್ ಸ್ಟೀಲ್ ಇತ್ಯಾದಿ ವಸ್ತುಗಳನ್ನು ತರಿಸಿಕೊಡಲು ಒಂದು ಪ್ರಯತ್ನ ಮಾಡಿ ಕೈಗಾರಿಕೆಗಾಗಿ ಉಪಯೋಗ ಮಾಡಬೇಕೆಂದು ಇದ್ದರೂ ಆಗುತ್ತಿಲ್ಲ ಎನ್ನುವುದನ್ನು ಅವರೇ ಒಪ್ಪಿಕೊಂಡರು. ಇದಕ್ಕಾಗಿ ಅವರನ್ನು ಅಭಿನಂದಿಸಬೇಕು. ಅವರು ಈಗ ಒಂದು ಕಮಿಟಿಯನ್ನು ಮಾಡಿ ಸರಿಯಾದ ರೀತಿಯಲ್ಲಿ ಕೆಲಸ ಮಾಡುವ ಯಾರಾದರೂ ಕೈಗಾರಿಕೆಯಲ್ಲಿ ನಿಜವಾದ ಆಸಕ್ತಿಯುಳ್ಳಂತಹವರಿಗೆ ನೇರವಾಗಿ ಸಹಾಯ ಮಾಡಬೇಕೆಂದು ಈ ಕಮಿಟಿ ಮಾಡಿರುವುದು ನಿಜವಾಗಿಯೂ ಶ್ಲಾಘನೀಯವಾದ ವಿಚಾರ. ಇದರಲ್ಲಿ ಕಟ್ಟುನಿಟ್ಟಾದ ನೀತಿಯನ್ನು ತಾಳಿ ದೇಶದ ಜನತೆಗೆ ಸರಿಯಾದ ಉಪಯೋಗವನ್ನು ಮಾಡಿಕೊಡದಿದ್ದರೆ ಸಾಕಷ್ಟು ಪ್ರಯೋಜನವಾಗುವುದಿಲ್ಲ ಎಂದು ಇಲ್ಲಿ ತಮಗೆ ಹೇಳಬೇಕಾಗಿದೆ.

ಮೈಸೂರು ದೇಶದಲ್ಲಿ ಅಪಾರವಾದ ಖನಿಜ ಸಂಪತ್ತಿದೆ. ಅದೂ ಹೇರಳವಾಗಿದೆ. ಖನಿಜ ಸಂಪತ್ತಿಗೋಸ್ಕರವೇ ನಮ್ಮ ಮೈಸೂರು ದೇಶದಲ್ಲಿ Mineral Development and Geological Department ಎನ್ನುವುದು ಬಹುಶಃ ಭಾರತ ದೇಶದಲ್ಲೇ ಯಾರೂ ಕೂಡ ಮಾಡದೇ ಇರತಕ್ಕ ಕಾಲದಲ್ಲಿ ಆದದ್ದು. ಎಂದರೆ ಸುಮಾರು 50 ವರ್ಷಗಳ ಹಿಂದೆಯೇ ಈ ಮೈಸೂರು ದೇಶದಲ್ಲಿ ಈ ಇಲಾಖೆ ಏರ್ಪಾಡುಮಾಡಿ ಖನಿಜ ಸಂಪತ್ತಿನ ಪರಿಸ್ಥಿತಿಯನ್ನು ಪರಿಶೀಲನೆ ಮಾಡಿ, ವಿಮರ್ಶೆ ಮಾಡುತ್ತಿದ್ದಾರೆ. ಈ ದೇಶದ ಎಲ್ಲಾ ಕಡೆಯಲ್ಲೂ ಇರುವ ಖನಿಜ ಸಂಪತ್ತುಗಳನ್ನು ಯಾವ ರೀತಿಯಾಗಿ ಉಪಯೋಗಿಸಿಕೊಳ್ಳಬಹುದು, ಮತ್ತು ಪ್ರಯೋಜನ ಪಡೆಯಬಹುದು ಎನ್ನುವುದಕ್ಕಾಗಿ ಈ ಇಲಾಖೆ ಮಾಡಿದ್ದರೂ ಕೂಡ ಈಗ ಇದರಿಂದ ಸಾಕಷ್ಟು ಪ್ರಯೋಜನ ಪಡೆಯುತ್ತಿಲ್ಲ. ನಿಮ್ಮಲ್ಲಿ ಸಾಕಷ್ಟು ಧೈರ್ಯವಿಲ್ಲ. ಚಾಕಚಕ್ಯತೆ ಇಲ್ಲ, ಮತ್ತು ಸಾಕಷ್ಟು ಸಾಹಸವೂ ಇಲ್ಲ. ಪರದೇಶದವರು, ವ್ಯವಹಾರದಲ್ಲಿ ನುರಿತ ತಜ್ಞರು ಇಲ್ಲಿಗೆ ಬಂದು ನಮ್ಮ ದೇಶದಲ್ಲಿರುವ ಖನಿಜ ಸಂಪತ್ತನ್ನು ನೋಡಿ ಬಹಳ ಸಂತೋಷಪಟ್ಟಿದ್ದಾರೆ. ಆದರೆ ಇದರ ಬಗ್ಗೆ ತಾಳಿರುವ ಧೋರಣೆಯಿಂದಾಗಿ ಸರಿಯಾದ ಪ್ರಯೋಜನ ಪಡೆಯುತ್ತಿಲ್ಲ. ಮೈಸೂರು ದೇಶ ಇವೊತ್ತು ಎಲ್ಲದರಲ್ಲಿಯೂ ಮುಂದೆ ಇದೆ. ಅನುಭವದಲ್ಲಿ ತಾಂತ್ರಿಕ ವಿಜ್ಞಾನದಲ್ಲಿ ಎಲ್ಲದರಲ್ಲಿಯೂ ಮುನ್ನಡೆವಿದೆ ಮೈಸೂರು ದೇಶದ ಜನತೆ ಇವೊತ್ತಿನ ದಿವಸ ಸಾಕಷ್ಟು ಪ್ರಮಾಣದಲ್ಲಿ ಪರಿಣತರನ್ನೂ ಪಡೆದಿರುತ್ತಾರೆ. ಹಾಗಿದ್ದರೂ ಅಂತಹವರಿಗೆ ನಮ್ಮ ದೇಶದಲ್ಲಿ ಸಾಕಷ್ಟು ಪ್ರೋತ್ಸಾಹ ತಾವು ಕೊಟ್ಟಿಲ್ಲವೆಂದು ಈ ದಿವಸ ತಮ್ಮ ಮುಂದೆ ಹೇಳಬೇಕಾಗಿದೆ. ಬೇರೆ ಬೇರೆ ಕಡೆಯಲ್ಲಿರುವ ಖನಿಜ ಸಂಪತ್ತನ್ನು ಶೇಖರಿಸಿ ಈ ದೇಶದಲ್ಲಿ ಸಾಕಷ್ಟು ಪ್ರಯೋಜನ ಹೊಂದುತ್ತಿಲ್ಲ. ನಮ್ಮಲ್ಲಿರುವ ಕೆಲವು ಡಿಸ್ಟ್ರಿಕ್ಟುಗಳಲ್ಲಿ ಚಿತ್ರದುರ್ಗ, ಹಾಸನ ಈ ಕಡೆಗಳಲ್ಲಿ ore carrying Roads ಎಂದು ಮಾಡಿಕೊಂಡು ಈ ದೇಶದಲ್ಲಿರುವ ಅದಿರನ್ನು ಪರದೇಶಗಳಿಗೆ ಕಳುಹಿಸುತ್ತಿದ್ದಾರೆ. ಇದು ಎಂತಹ ಪರಿಸ್ಥಿತಿ ಎನ್ನುವುದನ್ನು ತಾವೇ ನೋಡಬಹುದು.

ನಮ್ಮ ದೇಶದಲ್ಲಿಯ ಮುಖ್ಯ ಖನಿಜ ಸಂಪತ್ತಾಗಿರುವ ಮ್ಯಾಂಗನೀಸ್ ಓರ್‌ನ್ನು ಹೊರ ದೇಶಗಳಿಗೆ ಕಳಿಸುತ್ತೇವೆ. ಆ ರೀತಿ ಹೊರಕ್ಕೆ ಕಳಿಸುವ ಪೂರ್ವದಲ್ಲಿ ಇಲ್ಲಿಯೇ ಅದನ್ನು ಪ್ರೋಸೆಸಿಂಗ್ ಮಾಡಿ ಆ ಮೇಲೆ ಪರದೇಶಕ್ಕೆ ಕಳಿಸಬೇಕು ಅಂದರೆ ನಮಗೆ ಹೆಚ್ಚು ಸಂಪಾದನೆಯಾಗುತ್ತದೆ. ದೊಡ್ಡ ಪ್ರಮಾಣದಲ್ಲಿ ಕೈಗಾರಿಕೆ ಸ್ಥಾಪನೆ ಮಾಡಿ ಕಬ್ಬಿಣ ಅದಿರನ್ನು ಇಲ್ಲಿಯೇ ರೀಫೈನ್ ಅಂದರೆ ಪರಿಪಕ್ವವಾಗುವಹಾಗೆ ಮಾಡಬೇಕು. ಇದರಿಂದ ಹೆಚ್ಚು ಫಲದೊರೆಯುತ್ತದೆ.

10-10 A.M.

ಕೊನೆಯದಾಗಿ ಒಂದು ಮಾತು ಹೇಳುತ್ತೇನೆ. ನಮ್ಮ ರಾಜ್ಯದಲ್ಲಿ ಎಲ್ಲ ಜಿಲ್ಲೆಗಳಿಗೂ ಇಂಡಸ್ಟ್ರಿಯಲ್ ಎಸ್ಟೇಟುಗಳನ್ನು ಸಮಾನವಾಗಿ ಹಂಚಬೇಕು. ಹಾಸನ ಜಿಲ್ಲೆಯ ಬಸ್‌ರಾಷ್ಟ್ರೀ ಕರಣ ಮಾಡಿದ್ದೀರಿ. ಅನೇಕ ಜನರು ಸಂಪಾದನೆ ಮಾರ್ಗವಿಲ್ಲದೆ ತಮ್ಮ ಕಸುಬನ್ನು ಕಳೆದುಕೊಂಡು ನಿರುದ್ಯೋಗಿಗಳಾಗಿದ್ದಾರೆ. ನಮ್ಮ ಹಾಸನ ಜಿಲ್ಲೆಯಲ್ಲಿ ಕೈಗಾರಿಕೆ ರಾಷ್ಟ್ರೀ ಕರಣ ಮಾಡಿದ್ದೀರಿ. ಅವರ ಕೈಗಾರಿಕೆಯನ್ನು ಕಿತ್ತುಕೊಂಡಿದ್ದೀರಿ. ಈ ಸಂದರ್ಭದಲ್ಲಿ ಅವರಿಗೆ alternative ವೃತ್ತಿ ಕಲ್ಪಿಸಿಕೊಡುವ ಬಗ್ಗೆ ಹೆಚ್ಚು ಗಮನ ಕೊಡಬೇಕಾದುದು ಅಗತ್ಯ, ಆದುದರಿಂದ ಇಂಡಸ್ಟ್ರಿಯಲ್ ಎಸ್ಟೇಟು ಪ್ರಾರಂಭಿಸಿ, ಇರತಕ್ಕ ರಾಮೆಟೀರಿಯಲ್ ಉಪಯೋಗಿಸಿಕೊಂಡು ಕೈಗಾರಿಕೆಗಳನ್ನು ಹೆಚ್ಚಿಸಿಕೊಳ್ಳುವದಕ್ಕಾಗಿ ಎಲ್ಲ ಜಿಲ್ಲೆಗಳಿಗೆ ಇಂಡಸ್ಟ್ರಿಯಲ್ ಎಸ್ಟೇಟ್ ಕೊಡಬೇಕು. ಇಲ್ಲಿಯವರೆಗೆ ನಮ್ಮ ಹಾಸನ ಜಿಲ್ಲೆಗೆ ಯಾವ ರೀತಿಯಿಂದಲೂ ಪ್ರೋತ್ಸಾಹ ಕೊಟ್ಟಿಲ್ಲ. ನೂರಾರು ವರ್ಷಗಳಿಂದ ಶ್ರವಣಬೆಳಗೊಳ ಪಾತ್ರೆ ತಯಾರು ಮಾಡುವ ಬಗ್ಗೆ ಪ್ರಸಿದ್ಧವಾಗಿದೆ. ಶ್ರವಣಬೆಳಗೋಳದಲ್ಲಿ ಒಂದು ಪಾತ್ರೆ ಕಾರ್ಖಾನೆ ಮಾಡಬೇಕೆಂದು ಅರ್ಜಿ ಹಾಕಿಕೊಂಡರೆ, ಈ ತುರ್ತುಪರಿಸ್ಥಿತಿಯಲ್ಲಿ ರಾಮೆಟೀರಿಯಲ್ ಸಿಕ್ಕುವುದಿಲ್ಲ ಕಾರ್ಖಾನೆ ಪ್ರಾರಂಭಿಸುವುದು ಸಾಧ್ಯವಿಲ್ಲ ಎಂದು ಕೈಗಾರಿಕಾ ಡೈರೆಕ್ಟರರು ಉತ್ತರ ಕೊಟ್ಟಿದ್ದಾರೆ. ನೂರಾರು ವರ್ಷಗಳಿಂದ ಕೆಲಸ ಮಾಡತಕ್ಕಂಥ ಸ್ಥಳದಲ್ಲಿ ಕೊಡದೇ ಇದ್ದರೆ ಏನು ಪ್ರಯೋಜನ ! ಎಲ್ಲಿಯೋ ಒಂದು ಬೋರ್ಡು ಹಾಕಿಕೊಂಡು ಕಾರ್ಖಾನೆ ತೆಗೆದವರಿಗೆ ಸ್ಟೈನ್‌ಲೆಸ್ ಸ್ಟೀಲ್, ಕಾಪರ್, ಬ್ರಾಸ್ ಮುಂತಾದ ವಸ್ತುಗಳನ್ನು ಕೊಡುತ್ತಿದ್ದೀರಿ. ಆದರೆ ನಿಜವಾಗಿಯೂ ಕೆಲಸ ಮಾಡತಕ್ಕಂಥವರು ಕೇಳಿದರೆ ಇಲ್ಲ ಎಂದು ಹೇಳುತ್ತೀರಿ. ಹೊಸದಾಗಿ ಪ್ರಾರಂಭ ಮಾಡುವಂಥವರಿಗೆ ಕೊಡುವುದರ ಬದಲು ಈ ವೃತ್ತಿಯನ್ನೇ ಅವಲಂಬನ ಮಾಡಿಕೊಂಡು ಇರತಕ್ಕಂಥ ಜನರಿಗೆ ಪ್ರಯಾರಿಟಿ ಕೊಡಬೇಕು. ಆಮೇಲೆ ಉಳಿದ ಜನರಿಗೆ ಕೊಡಬಹುದು. ದೇಶದ ಸಂಪದಭಿವೃದ್ಧಿಗೋಸ್ಕರ ಈ ರೀತಿ ಮಾಡಬೇಕಾದುದು ಅಗತ್ಯ, ನಮ್ಮ ಮೈಸೂರು ದೇಶ ಭಾರತದಲ್ಲೆಲ್ಲಾ ಕೈಗಾರಿಕೆಗಳ ವಿಚಾರದಲ್ಲಿ ಪ್ರಪ್ರಥಮ ಸ್ಥಾನ ಪಡೆದಿದ್ದಿತು. ಆದರೆ ಇವತ್ತಿನ ದಿವಸ ಅದು ಕುಂಠಿತವಾಗಿದೆ. ಆದುದರಿಂದ ಇವತ್ತಿನ ದಿವಸ ಪುನಃ ಮೊದಲನಂತಾಗುವುದಕ್ಕಾಗಿ ಸರಕಾರ ತನ್ನ ನೀತಿಯನ್ನು ಬದಲಾವಣೆ ಮಾಡಿಕೊಳ್ಳುವುದು ಅವಶ್ಯವಾಗಿದೆ. ಕೊನೆಯದಾಗಿ ಈ ಬಗ್ಗೆ ಬಹಳ ಸಮಂಜಸವಾಗಿ ಹೇಳಿರುವ ಒಂದು ವಾಕ್ಯವನ್ನು ಓದಿ ತೋರಿಸುತ್ತೇನೆ.

> "The pioneering spirit, that the State of Mysore has so amply manifested in the past. Needs not only to be recaptured but invigorated under imaginative, audacious and resolute leadership."

ನಿಜವಾಗಿಯೂ ಇದು ಬಹಳ ಒಳ್ಳೆಯ ಮಾತು. ಸರಕಾರ ಈ ಹಾದಿಯಲ್ಲಿ ಹೋಗಬೇಕೆಂದು ಹೇಳಿ ನನ್ನ ಭಾಷಣ ಮುಗಿಸುತ್ತೇನೆ.

Mr. SPEAKER.—The House will now rise to meet half an hour later.

The House adjourned for Recess at Seven Minutes past ten of the Cloc and Reassembled at Thirty-Five Minutes past ten of the Clock.

(MR. CHAIRMAN [SRI SIDDIAH Kashimath] in the Chair)

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ, ಸೋಮವಾರ ಬುಧುವಾರ ರಜ ಕೊಡುವ ಬಗ್ಗೆ ಏನಾಯಿತು ತಿಳಿಸುತ್ತೀರಾ ?

ಸಭಾಪತಿಯವರು.—ಸ್ಪೀಕರ್ ಅವರು ಬಂದ ಮೇಲೆ ಹೇಳುತ್ತಾರೆ.

ಶ್ರೀ ಡಿ. ಎಂ. ಸಿದ್ದಯ್ಯ (ಬಿಳಿಗೆರೆ).—ಮಾನ್ಯ ಸಭಾಪತಿಗಳೇ, ಮಾನ್ಯ ಕೈಗಾರಿಕಾ ಮಂತ್ರಿಗಳು ಮಂಡಿಸಿರತಕ್ಕಂಥ ಬೇಡಿಕೆಗಳಿಗೆ ಸಂಪೂರ್ಣವಾಗಿ ಬೆಂಬಲ ಕೊಡುತ್ತೇನೆ. ನಮ್ಮ ದೇಶ ಕೈಗಾರಿಕೆಗಳಿಗೆ ಹೆಸರಾದ ದೇಶ. ಇಡೀ ಹಿಂದುಸ್ಥಾನದಲ್ಲಿ ಮೈಸೂರು ಸಂಸ್ಥಾನ ಮುಂದುವರಿದ ದೇಶ ನಮ್ಮ ಮೈಸೂರು ಸಂಸ್ಥಾನದಲ್ಲಿ ಕೈಗಾರಿಕೆಗಳನ್ನು ಪ್ರಾರಂಭಿಸುವುದರಲ್ಲಿ ಗತಿಸಿದ ಸರ್ ವಿಶ್ವೇಶ್ವರಯ್ಯನವರು ಮೂಲ ಪುರುಷರು ಎಂದು ಹೇಳಲು ಇಚ್ಛಿಸುತ್ತೇನೆ. ಸರ್ ವಿಶ್ವೇಶ್ವರಯ್ಯನವರು ಕೈಗಾರಿಕೆ ಅಭಿವೃದ್ಧಿ ಗೋಸ್ಕರ ಬಹಳ ಶ್ರಮಿಸಿದ್ದಾರೆ. ಅವರ ಸೇವಾ ಮನೋಭಾವ ದೂರದೃಷ್ಟಿಯಿಂದ ಮೈಸೂರು ಸಣ್ಣ ದೊಡ್ಡ ಕೈಗಾರಿಕೆಗಳಲ್ಲಿ ಅಭಿವೃದ್ಧಿ ಹೊಂದಿದೆ. ಅಂಥ ಮಹನೀಯರ ಚಿತ್ರಪಟ ಒಂದು ರಾಷ್ಟ್ರನಾಯಕರ ಪಂಕ್ತಿಯಲ್ಲಿ ಈ ಸಭೆಯಲ್ಲಿ ಇರಬೇಕು ಎಂದು ಸೂಚಿಸುತ್ತೇನೆ. ಅದಕ್ಕಾಗಿ ಒಂದು ವ್ಯವಸ್ಥೆ ಮಾಡಿ ಮುಂದಿನ ಅಧಿವೇಶನ ದೊಳಗಾಗಿ ಈ ಸಭೆಯಲ್ಲಿ ರಾಷ್ಟ್ರನಾಯಕರ ಚಿತ್ರಪಟಗಳ ಜೊತೆಗೆ ಸರ್ ವಿಶ್ವೇಶ್ವರಯ್ಯನವರ ಚಿತ್ರಪಟವನ್ನಿಡಲು ಈ ಸಭೆ ಕಲ್ಪಿಸಿ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ, ಸ್ಯಾಂಡಲ್ ವುಡ್ ಆಯಿಲ್ ಫ್ಯಾಕ್ಟರಿ, ಪೋರ್ಸಿಲೇನ್ ಫ್ಯಾಕ್ಟರಿ ಮುಂತಾದ ಅನೇಕ ಕೈಗಾರಿಕೆಗಳು ಲಾಭದಾಯಕವಾಗಿ ಕೆಲಸ ಮಾಡುತ್ತಿವೆ. ಈ ತುರ್ತು ಪರಿಸ್ಥಿತಿಗೆ ಅನುಗುಣವಾಗಿ ಹಾಸನ್ ಇಂಪ್ಲಿಮೆಂಟ್ ಫ್ಯಾಕ್ಟರಿಯಲ್ಲಿ ಸೈನಿಕರಿಗೆ ಬೇಕಾಗುವ ಹೆಲ್ಮೆಟ್ ಮುಂತಾದ ವಸ್ತುಗಳನ್ನು ತಯಾರಿಸುವ ಹೊಸ ಯೋಜನೆಯ ವ್ಯವಸ್ಥೆ ಮಾಡಿರುವುದು ಬಹಳ ಪ್ರಶಂಸನೀಯವಾದದ್ದು. ಇದರಿಂದ ಆರ್ಥಿಕ ಸ್ಥಿತಿ ಉತ್ತಮ ಗೊಳ್ಳುವದಲ್ಲದೆ, ಈ ತುರ್ತು ಪರಿಸ್ಥಿತಿಯಲ್ಲಿ ನಮ್ಮ ಗಡಿಯಿಂದ ಚೀಣೀ ದುರಾಕ್ರಮಣಕಾರರನ್ನು ಹೊಡೆದೋಡಿಸುವುದಕ್ಕೆ ಬೇಕಾಗಿರುವ ಯುದ್ಧೋಪಕರಣ ವಸ್ತುಗಳ ತಯಾರಿಕೆ ಮಾಡುವ ವ್ಯವಸ್ಥೆ ಕೈ ಕೊಂಡಿರುವುದು ನಿಜವಾಗಿಯೂ ಬಹಳ ಪ್ರಶಂಸನೀಯವಾದದು ಈಗ ನಮಗೆ ಹೆಚ್ಚಾಗಿ ಪವರ್ ಬೇಕಾಗಿದೆ. ಸರಿಯಾಗಿ ವಿದ್ಯುಚ್ಛಕ್ತಿ ಪೂರೈಕೆ ಮಾಡಿದರೆ ಕೈಗಾರಿಕೆಗಳು ಚೆನ್ನಾಗಿ ಅಭಿವೃದ್ಧಿ ಹೊಂದುತ್ತವೆ. ಸರಕಾರದ ನೀತಿ mixed economy ಆಗಿದೆ. ಪಬ್ಲಿಕ್ ಮತ್ತು ಪ್ರೈವೇಟ್ ಸೆಕ್ಟರ್‌ನಲ್ಲಿ ಕೆಲಸ ನಡೆಸುತ್ತಿದ್ದಾರೆ. ಮೈಸೂರು ಸರಕಾರ ಬಂಡವಾಳ ಹಾಕಿ ದೊಡ್ಡ ದೊಡ್ಡ ಕೈಗಾರಿಕೆಗಳನ್ನು ನಡೆಸಿಕೊಂಡು ಬರುತ್ತಿದೆ. ಪ್ರೈವೇಟ್ ಸೆಕ್ಟರಿನಲ್ಲಿ ಕೈಗಾರಿಕೆಯಿಂದ ಎಷ್ಟು ಉತ್ಪತ್ತಿಯಾಗುತ್ತದೆಯೋ ಅಷ್ಟು ಉತ್ಪತ್ತಿ ಪಬ್ಲಿಕ್ ಸೆಕ್ಟರ್ ದಲ್ಲಿ ಆಗುತ್ತಿಲ್ಲ. ಸರಕಾರ ನಡೆಸಿಕೊಂಡು ಬರತಕ್ಕಂಥ ಕೈಗಾರಿಕೆಗಳಲ್ಲಿ ಅದೇ ಮಟ್ಟದಲ್ಲಿರಬೇಕಾದುದು ಅಗತ್ಯ. ಹೆಚ್ಚು ದಕ್ಷತೆಯಿಂದ ಉತ್ಪಾದನಾ ಶಕ್ತಿ ಹೆಚ್ಚು ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕು. ಭದ್ರಾವತಿ ಕಬ್ಬಿಣ ಕಾರ್ಖಾನೆಯನ್ನು ಕಾರ್ಪೋರೇಷನ್ ಮಾಡಿದ್ದೀರಿ. ರೋಡ್ ಟ್ರಾನ್ಸ್‌ಪೋರ್ಟ್ ಕಾರ್ಪೋರೇಷನ್ ಮಾಡಿದ್ದೀರಿ. ಒಂದು ನಿರ್ದಿಷ್ಟ ನೀತಿಗೆ ಅನುಗುಣವಾಗಿ ಕೈಗಾರಿಕೆ ಕಾರ್ಪೋರೇಷನ್ ಮಾಡಬೇಕು ಚೆನ್ನಾಗಿ ಕೆಲಸ ಮಾಡಿದರೆ ಹೆಚ್ಚು ಉತ್ಪತ್ತಿ ಕೊಟ್ಟು ಅಭಿವೃದ್ಧಿಯಾಗುತ್ತವೆ. ಮುಖ್ಯವಾಗಿ ನಮ್ಮ ದೇಶದಲ್ಲಿ ಕಾಟನ್ ಮಿಲ್ ಒಂದು ದೊಡ್ಡ ಕೈಗಾರಿಕೆಯಾಗಿದೆ. ನಾಲ್ಕು ಸಹಕಾರಿ ಸಂಘಗಳ ಜೊತೆಗೆ ಹದಿಮೂರು ಪ್ರೈವೇಟ್ ಲೈಸೆನ್ಸ್ ಕೊಟ್ಟು ಉತ್ತೇಜನ ಕೊಟ್ಟಿದ್ದೀರಿ. ಕೈಗಾರಿಕೆಗಳು ಬೆಳೆದು ಉತ್ಪಾದನಾ ಶಕ್ತಿ ಜಾಸ್ತಿಯಾಗುವಂತೆ ಪ್ರಶಂಸನೀಯವಾದ ನೀತಿಯಲ್ಲಿ ಕೆಲಸ ಮಾಡಿರುವುದಕ್ಕಾಗಿ ಸಂತೋಷಪಡುತ್ತೇನೆ.

ಮುಖ್ಯವಾಗಿ ಸಣ್ಣ ಸಣ್ಣ ಕೈಗಾರಿಕೆಗಳ ವಿಷಯದಲ್ಲಿ ಸರ್ಕಾರದವರು ಹೆಚ್ಚು ಶ್ರದ್ಧೆವಹಿಸಿ ಅವುಗಳನ್ನು ಹಳ್ಳಿಗಾಡಿನಲ್ಲಿ ಸ್ಥಾಪನೆ ಮಾಡಬೇಕು. ವ್ಯವಸಾಯ ದೇಶಕ್ಕೆ ಹೇಗೆ ಪ್ರಾಮುಖ್ಯವಾದ ಕಸುಬೋ ಹಾಗೆಯೇ ಕೈಗಾರಿಕೆಯೂ ಸಹ ಬಹಳ ಪ್ರಾಮುಖ್ಯವಾದದ್ದು. ಅದರಲ್ಲೂ ಕೂಡ ವಿಲೇಜ್ ಅಂಡ್ ಸ್ಮಾಲ್‌ಸ್ಕೇಲ್ ಇಂಡಸ್ಟ್ರಿ ಬಹಳ ಚೆನ್ನಾಗಿ ನಡೆದು ವ್ಯವಸಾಯಕ್ಕೂ ಕೈಗಾರಿಕೆಗೂ ನಿಕಟವಾದ ಸಂಬಂಧವನ್ನು ಏರ್ಪಡಿಸಿ ದೇಶದ ಆರ್ಥಿಕ ಸ್ಥಿತಿ ಚೆನ್ನಾಗಿ ಆಗಬೇಕು. ದೇಶದ ಆರ್ಥಿಕ ಸ್ಥಿತಿ ಉದ್ಧಾರವಾಗಬೇಕಾದರೆ ಹಳ್ಳಿಗಾಡಿನಲ್ಲಿ ಗ್ರಾಮ ಕೈಗಾರಿಕೆಗಳು ಮತ್ತು ಸಣ್ಣ ಪುಟ್ಟ ಕೈಗಾರಿಕೆಗಳಿಗೆ ಲಕ್ಷಾಂತರ, ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಿ ಅವುಗಳನ್ನು ಸ್ಥಾಪನೆ ಮಾಡಿ ಜನಗಳು ಅವುಗಳಲ್ಲಿ ನೇರವಾಗಿ ಭಾಗವಹಿಸಿ ಕೈಗಾರಿಕೆಗಳು ಬೆಳೆದು ಅಭಿವೃದ್ಧಿಯಾಗತಕ್ಕದು ಬಹಳ ಮುಖ್ಯ ವಿಚಾರ. ಕೈಗಾರಿಕೆಯ ಅಭಿವೃದ್ಧಿಗೋಸ್ಕರ ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ 21·63 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. 29 ಕ್ರಾಫ್ಟ್ ಕೋ-ಆಪರೇಟಿವ್ ಸೊಸೈಟಿಗಳನ್ನು ಪ್ರಾರಂಭ ಮಾಡಿದ್ದಾರೆ. 1961-62ನೇ ಇಸವಿಯಲ್ಲಿ 12 ಕ್ರಾಫ್ಟ್ ಸೊಸೈಟಿಗಳನ್ನು ವ್ಯವಸ್ಥೆಮಾಡಿ ಅದಕ್ಕೋಸ್ಕರವಾಗಿ 4·88 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿರತಕ್ಕದ್ದು ಪ್ರಶಂಸನೀಯ ವಿಚಾರ. ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಸಹಕಾರ ಪದ್ಧತಿಯ ಮೇಲೆ ಸುಮಾರು 400 ನೇಯ್ಗೆ ಸಂಘಗಳನ್ನು ಪ್ರಾರಂಭ ಮಾಡಿ, ಎರಡನೆ ಪಂಚವಾರ್ಷಿಕ ಯೋಜನೆ ಪೂರ್ತಿಯಾಗುವ ಹೊತ್ತಿಗೆ 506 ಸಂಘಗಳನ್ನು ಪ್ರಾರಂಭ ಮಾಡಿದ್ದಾರೆ.

ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿಯೂ ಸಹ ಸಹಕಾರ ತತ್ವದ ಮೇಲೆ ನಡೆಯತಕ್ಕ ಸಂಘಗಳನ್ನು ಇನ್ನೂ ಹೆಚ್ಚಾಗಿ ಸ್ಥಾಪಿಸಿ ನಮ್ಮ ದೇಶದಲ್ಲಿ ಅವುಗಳಿಗೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡುವುದು ಅತ್ಯಗತ್ಯ. ಹಾಗೆಯೇ ಸಹಕಾರ ಪದ್ಧತಿಯ ಮೇಲೆ ಎರಡು ಸಾವಿರ ಪವರ್ ಲೂಮು ಗಳನ್ನು ಪ್ರಾರಂಭಿಸಲು 62.55 ಲಕ್ಷ ರೂಪಾಯಿಗಳನ್ನು ಸರ್ಕಾರದವರು ವೆಚ್ಚ ಮಾಡಲು ವ್ಯವಸ್ಥೆ ಮಾಡಿದ್ದಾರೆ. ಹ್ಯಾಂಡಿಕ್ರಾಫ್ಟ್ಸ್ ಸೊಸೈಟಿಗಳು ಮತ್ತು ಸಣ್ಣ ಕೈಗಾರಿಕೆಗಳು ಇವುಗಳ ವಿಷಯ ದಲ್ಲಿ ಸರ್ಕಾರದವರು ಹೆಚ್ಚು ಶ್ರದ್ಧೆಯನ್ನು ವಹಿಸಿ ಪ್ರತಿಯೊಂದು ಡಿಸ್ಟ್ರಿಕ್ಟಿನಲ್ಲಿಯೂ ಇಂಡಸ್ಟ್ರಿಯಲ್ ಎಸ್ಟೇಟುಗಳನ್ನು ಸ್ಥಾಪನೆ ಮಾಡಬೇಕೆಂದಿದ್ದಾರೆ. ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಒಟ್ಟು 30 ಇಂಡಸ್ಟ್ರಿಯಲ್ ಎಸ್ಟೇಟುಗಳನ್ನು ಸರ್ಕಾರದವರು ತೆರೆಯುವವರಾಗಿದ್ದಾರೆ. ಅದಕ್ಕೋಸ್ಕರ ನಮ್ಮ ಸರ್ಕಾರದವರು 120 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುವವರಾಗಿದ್ದಾರೆ. ಅದರ ಪೈಕಿ ಈ ವರ್ಷ 23 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ವ್ಯವಸ್ಥೆ ಮಾಡಿಕೊಂಡಿದ್ದಾರೆ. ಇಂಥಾ ಒಂದು ಸಂದರ್ಭದಲ್ಲಿ ಕೈಗಾರಿಕಾಭಿವೃದ್ಧಿ ನಮ್ಮ ದೇಶದಲ್ಲಿ ಒಂದು ರೀತಿಯಿಂದ ವ್ಯವಸ್ಥಿತ ವಾದ ಹಾಗೂ ಒಳ್ಳೆಯ ರೀತಿಯಲ್ಲಿ ಮಾಡಿರತಕ್ಕದ್ದು ಪ್ರಶಂಸನೀಯ ವಿಚಾರ.

ಎಲ್ಲಕ್ಕಿಂತಲೂ ಮುಖ್ಯವಾಗಿ ನಾನು ಯಾವ ಭಾಗದಿಂದ ಚುನಾಯಿತನಾಗಿ ಬಂದಿದ್ದೇನೆಯೋ ಅಲ್ಲಿ ಅತಿ ಪ್ರಾಮುಖ್ಯವಾಗಿರತಕ್ಕ ಇಂಡಸ್ಟ್ರಿ ಎಂದರೆ ರೇಷ್ಮೆ ವ್ಯವಸಾಯ. ನಂಜ ಗೂಡು ಸಬ್ ಡಿವಿಜನ್‌ನಲ್ಲಿ ಸುಮಾರು 10 ಲಕ್ಷ ಜನ ಈ ರೇಷ್ಮೆ ಕೈಗಾರಿಕೆಯನ್ನು ನಡೆಸಿಕೊಂಡು ಬಂದಿದ್ದಾರೆ. ನಮ್ಮ ದೇಶದಲ್ಲಿ ಉತ್ಪತ್ತಿಯಾಗತಕ್ಕಂಥ ಇಪ್ಪತ್ತು ಲಕ್ಷ ಪೌಂಡ್ ರೇಷ್ಮೆಯಲ್ಲಿ ಸುಮಾರು ಎಂಬತ್ತು ಪರ್ಸೆಂಟ್ ರೇಷ್ಮೆ ನಂಜನಗೂಡಿನ ಸಬ್ ಡಿವಿಜನ್ನಿನಿಂದಲೇ ಉತ್ಪತ್ತಿಯಾಗುತ್ತದೆ. ಆ ರೇಷ್ಮೆ ವ್ಯವಸಾಯದ ಕಸುಬನ್ನು ಅವಲಂಬಿಸಿರತಕ್ಕ ಜನಗಳಿಗೆ ಅನುಕೂಲ ಮಾಡುವುದಕ್ಕೋಸ್ಕರವಾಗಿ ಈಗ ಸರ್ಕಾರದವರು ಮೂವತ್ತುಮೂರು ಕಕೂನ್ ಮಾರ್ಕೆಟ್ಟುಗಳನ್ನು ಪ್ರಾರಂಭಿಸಿ ರೈತರಿಗೆ ಸರಿಯಾದ ಬೆಲೆ ಸಿಕ್ಕಿ ರೈತರು ಸಂತೋಷವಾಗಿದ್ದಾರೆ. ಹೆಚ್ಚು ಹೆಚ್ಚು ಉತ್ಸುಕತೆಯಿಂದ ಇದ್ದಾರೆ. ಬೆಂಗಳೂರಿನಲ್ಲಿ ರೇಷ್ಮೆ ಕೋಠಿಗಳಿವೆ. ಈ ಕೋಠಿಗಳಲ್ಲಿ ಪೈಪೋಟಿಯಿಂದ ರೇಷ್ಮೆಗೆ ಸರಿಯಾದ ಬೆಲೆಯು ಸಿಕ್ಕದೆ ತೊಂದರೆಯಾಗಿತ್ತು. ಆದ್ದರಿಂದ ಚಾಮರಾಜನಗರದಲ್ಲಿ ಸುಮಾರು ಹತ್ತು ಲಕ್ಷ ರೂಪಾಯಿಗಳ ಬಂಡವಾಳವನ್ನು ಹಾಕಿ ಒಂದು ಸಹಕಾರ ಸಂಘವನ್ನು ಸ್ಥಾಪನೆ ಮಾಡಿದ್ದಾರೆ. ಸೆಂಟ್ರಲ್ ಸಿಲ್ಕ್ ಬೋರ್ಡ್‌ಗಳು ಬೊಂಬಾಯಿನಲ್ಲಿ ಮತ್ತು ಬೆಂಗಳೂರಿನಲ್ಲಿ ಇವೆ. ಯಾವ ಸ್ಥಳದಲ್ಲಿ ರೇಷ್ಮೆ ಕೈಗಾರಿಕೆ ಚೆನ್ನಾಗಿ ನಡೆದು ಹೆಚ್ಚು ಉತ್ಪತ್ತಿಯಾಗುತ್ತದೆಯೋ ಆ ಸ್ಥಳದಲ್ಲಿ ಸೆಂಟ್ರಲ್ ಸಿಲ್ಕ್ ಬೋರ್ಡು ಇರಬೇಕೆಂದು ನಾನು ಸರ್ಕಾರಕ್ಕೆ ಸಲಹೆಯನ್ನು ಮಾಡುತ್ತೇನೆ. ರೇಷ್ಮೆ ಕೈಗಾ ರಿಕೆ ನಮ್ಮ ದೇಶದಲ್ಲಿ ಅತ್ಯುತ್ತಮವಾದ ಕೈಗಾರಿಕೆಯಾಗಿ ಪ್ರಪಂಚದ ಮಾರ್ಕೆಟ್ಟಿನಲ್ಲಿ ಹೆಸರುವಾಸಿ ಯಾಗಿದೆ. ಆದ್ದರಿಂದ ಸರ್ಕಾರದವರು ಈ ಕೈಗಾರಿಕೆಗೆ ಹೆಚ್ಚಿನ ಸೌಲಭ್ಯವನ್ನು ಕೊಡಬೇಕು. ಟಾರಿಫ್ ಕಮೀಷನ್ನಿನವರು ಗ್ರಾಂಟು ಕೊಡದೆ, ಸಬ್ಸಿಡಿ ಕೊಡದೆ ಇದ್ದರೆ ಈ ಕೈಗಾರಿಕೆ ತನ್ನ ಕಾಲ ಮೇಲೆ ತಾನು ನಿಂತುಕೊಳ್ಳುವುದು ಕಷ್ಟ. ಆದ್ದರಿಂದ ಸರ್ಕಾರದವರು ಇದಕ್ಕೆ ಹೆಚ್ಚು ಬಂಡವಾಳ ವನ್ನು ಹಾಕಿ ಪ್ರೋತ್ಸಾಹವನ್ನು ಕೊಟ್ಟು ಈ ಕೈಗಾರಿಕೆಯನ್ನು ಬೆಳೆಸಬೇಕೆಂದು ನಾನು ಈ ಸಂದ ರ್ಭದಲ್ಲಿ ಹೇಳುತ್ತೇನೆ.

ಇನ್ನು ಮಿನರಲ್ ಡೆವಲಪ್‌ಮೆಂಟ್ ವಿಷಯ. ನಮ್ಮ ದೇಶದಲ್ಲಿ ಖನಿಜ ಸಂಪತ್ತು ಬಹಳ ವಾಗಿದೆ. ಖನಿಜ ಸಂಪತ್ತಿನ ಎಕ್ಸ್‌ಪರ್ಟುಗಳು ಎಲ್ಲೆಲ್ಲಿ ಯಾವ ಯಾವ ಖನಿಜ ಸಿಕ್ಕುತ್ತದೆ ಎಂಬುದನ್ನು ಪರೀಕ್ಷಿಸಿ ಖನಿಜ ಸಂಪತ್ತಿನ ಬೆಳವಣಿಗೆಗೆ ಹೆಚ್ಚು ಪ್ರೋತ್ಸಾಹವನ್ನು ಕೊಡಬೇಕು. ಮಾನ್ಯ ಕೈಗಾರಿಕಾ ಸಚಿವರು ಏನು ಕೈಗಾರಿಕಾ ಬೇಡಿಕೆಯನ್ನು ನಮ್ಮ ಮುಂದೆ ಇಟ್ಟಿದ್ದಾರೆಯೋ ಅದಕ್ಕೆ ನನ್ನ ಸಂಪೂರ್ಣವಾದ ಅನುಮೋದನೆಯನ್ನು ಕೊಟ್ಟು ಮಾನ್ಯ ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಬಿ. ಚನ್ನಬೈರೇಗೌಡ (ಹೊಸಕೋಟೆ).—ಮಾನ್ಯ ಸಭಾಧ್ಯಕ್ಷರೇ ಈಗ ಕೈಗಾರಿಕೆಗಳಿ ಗೋಸ್ಕರವಾಗಿ ಎರಡು ಕೋಟಿ ರೂಪಾಯಿಗಳ ಬೇಡಿಕೆಯನ್ನು ಸರ್ಕಾರದವರು ನಮ್ಮ ಮುಂದಿಟ್ಟಿ ದ್ದಾರೆ. ಇದರಲ್ಲಿ ಕೈಗಾರಿಕಾ ಅಭಿವೃದ್ಧಿಗೆ ಇಪ್ಪತ್ತು ಲಕ್ಷ ರೂಪಾಯಿಗಳು ಕೂಡ ಇಲ್ಲ. ವಾಡಿಕೆ ಯಂತೆ ಅಧಿಕಾರಿಗಳ ಸಂಬಳ, ಸಹಕಾರ ಸಂಘಗಳ ಮೂಲಕ ಸಾಲವನ್ನು ಹಂಚುವುದು ಇವುಗಳು ಇವೆ. ಒಂದು ಹೊಸ ಪ್ರೋಗ್ರಾಂ ಹಾಕಿಕೊಂಡು ಕೈಗಾರಿಕೆಯನ್ನು ಸ್ಥಾಪನೆ ಮಾಡಿ ಕಚ್ಚಾ ಪದಾರ್ಥಗಳ ಉತ್ಪತ್ತಿಯನ್ನು ಹೆಚ್ಚಿಸಿ ನಿರುದ್ಯೋಗ ಸಮಸ್ಯೆಯನ್ನು ಪರಿಹಾರ ಮಾಡುವುದರ ಬಗ್ಗೆ ಏನೊಂದೂ ಕಂಡು ಬರುವುದಿಲ್ಲ. ನಾನು ಈ ವಿಷಯವನ್ನು ಬಹಳ ವಿಷಾದದಿಂದ ಹೇಳ ಬೇಕಾಗಿದೆ. ಗತಿಸಿದ ಸರ್. ಎಂ. ವಿಶ್ವೇಶ್ವರಯ್ಯನವರಿಗೆ ನಮ್ಮ ದೇಶವನ್ನು ಕೈಗಾರಿಕಾ ದೇಶ ವನ್ನಾಗಿ ಮಾಡಬೇಕು, ನಿರುದ್ಯೋಗ ನಿವಾರಣೆ ಮಾಡಿ ಉತ್ಪಾದನಾ ಶಕ್ತಿಯನ್ನು ಹೆಚ್ಚಿಸಿ ನಮ್ಮ

(ಶ್ರೀ ಬಿ. ಚನ್ನಬೈರೇಗೌಡ)

ದೇಶದಲ್ಲಿ ಸಂಪತ್ತನ್ನು ಹೆಚ್ಚಿಸಬೇಕು ಎನ್ನತಕ್ಕಂಥ ಆಶೆ ಅವರಿಗಿತ್ತು. ಮಹಾತ್ಮಾ ಗಾಂಧಿಯವರೂ ಕೂಡ ನಮ್ಮ ದೇಶದಲ್ಲಿ ಗೃಹ ಕೈಗಾರಿಕೆಗಳು ಆಗಬೇಕು, ಗ್ರಾಮಾಂತರ ಪ್ರದೇಶದಲ್ಲಿ ಜನಗಳಿಗೆ ಉದ್ಯೋಗವನ್ನು ದೊರಕಿಸಬೇಕು ಉತ್ಪಾದನೆಯನ್ನು ಹೆಚ್ಚಿಸಬೇಕು, ಆದಾಯವನ್ನು ಹೆಚ್ಚಿಸಬೇಕು ಮತ್ತು ಸಂಪನ್ಮೂಲಗಳನ್ನು ಹೆಚ್ಚಿಸಬೇಕು ಎನ್ನುವ ಆಶೆ ಅವರಿಗಿತ್ತು. ಕಾಂಗ್ರೆಸ್ ಸರ್ಕಾರ ಬಂದ ಮೇಲೆ ನಮ್ಮ ದೇಶದಲ್ಲಿ ಏನಾಗಿದೆಯೆಂದರೆ ಮನೆ ಮನೆಗೂ ಕಳ್ಳ ಭಟ್ಟಿಯನ್ನು ತಯಾರು ಮಾಡತಕ್ಕಂಥ ಗೃಹ ಕೈಗಾರಿಕೆಯನ್ನು ಸ್ಥಾಪನೆ ಮಾಡಿದ್ದಾರೆ. ಜನತೆಯ ಶಕ್ತಿಯನ್ನು ಹೆಚ್ಚಿಸುವುದಕ್ಕೆ ಯಾವ ಕಾರ್ಯಕ್ರಮವನ್ನೂ ಸರ್ಕಾರದವರು ಹಾಕಿಕೊಂಡಿಲ್ಲ. ಮಹಾತ್ಮ ಗಾಂಧೀಜಿಯವರು ಗೃಹ ಕೈಗಾರಿಕೆಗಳು ಜಾಸ್ತಿಯಾಗಬೇಕೆಂದು ಹೇಳಿದರೆ ಇವರು ಭಟ್ಟಿ ಹಿಡಿಯುವ ಕೈಗಾರಿಕೆಯನ್ನು ಹೆಚ್ಚಿಸಿದ್ದಾರೆಂದು ಹೇಳಿದರೆ ತಪ್ಪಾಗಲಾರದು. ಈಗ ಹದಿನೈದು ವರ್ಷಗಳಿಂದ ನಾನು ಕೈಗಾರಿಕೆಯನ್ನು ನೋಡುತ್ತಿದ್ದೇನೆ, ಕೈಗಾರಿಕಾ ಇಲಾಖೆಯಲ್ಲಿ ಏನು ಹೆಚ್ಚಾಗಿದೆ ಎಂದರೆ ಇಂಡಸ್ಟ್ರೀಸ್ ಅಂಡ್ ಕಾಮರ್ಸಿನಲ್ಲಿ 8 ಜನ ಅಧಿಕಾರಿಗಳಿಗೆ ಹುದ್ದೆಯನ್ನು ಕಲ್ಪಿಸಿಕೊಟ್ಟು ಅವರಿಗೆ ಆಫೀಸುಗಳನ್ನು ಮಾಡಿಕೊಟ್ಟಿದ್ದಾರೆ. ಆದರೆ ದೇಶದಲ್ಲಿ ಕೈಗಾರಿಕಾ ಅಭಿವೃದ್ಧಿ ಆಗಿಲ್ಲ. ಈಗ ನಮ್ಮ ದೇಶದಲ್ಲಿ ಪೋರ್ಸಿಲೈನ್ ಫ್ಯಾಕ್ಟರಿಯನ್ನು ಸ್ಥಾಪನೆ ಮಾಡಿ ಅನೇಕ ವರ್ಷಗಳಾಯಿವು. ಹಿಂದೆ ಯಾವ ಮಟ್ಟದಲ್ಲಿ ಅಲ್ಲಿ ಪದಾರ್ಥಗಳು ತಯಾರಾಗುತ್ತಿದ್ದವೋ ಈಗಲೂ ಅದೇ ಮಟ್ಟದಲ್ಲಿ ಸಾಮಾನುಗಳು ತಯಾರಾಗುತ್ತಿವೆ.

ಶ್ರೀ ಕೆ. ಮಲ್ಲಪ್ಪ.—ಮಾನ್ಯ ಸದಸ್ಯರು ಪೋರ್ಸಿಲೇನ್ ಫ್ಯಾಕ್ಟರಿಯನ್ನು ಯಾವಾಗ ನೋಡಿದರು ?

ಶ್ರೀ ಬಿ. ಚನ್ನಬೈರೇಗೌಡ.—ಎರಡು ಸಾರಿ ನೋಡಿದ್ದೇನೆ. ಅಲ್ಲಿ ತಯಾರಾಗತಕ್ಕ ಕಪ್ಪು ಸಾಸರುಗಳು ವಕ್ರ ವಕ್ರವಾಗಿದೆ. ಅವುಗಳಲ್ಲಿ ಕಾಫಿಯನ್ನು ಸಹ ಕುಡಿಯುವುದಕ್ಕಾಗುವುದಿಲ್ಲ.

ಶ್ರೀ ಕೆ. ಮಲ್ಲಪ್ಪ.—ಮಾನ್ಯ ಸದಸ್ಯರು ಬರೀ ಕಪ್ಪು ಸಾಸರುಗಳನ್ನಷ್ಟೇ ನೋಡಿದ್ದಾರೆಂದು ಕಾಣುತ್ತದೆ.

ಶ್ರೀ ಬಿ. ಚನ್ನಬೈರೇಗೌಡ.—ಅಲ್ಲಿ ತಯಾರಾಗತಕ್ಕ ಸಾಮಾನುಗಳನ್ನೆಲ್ಲಾ ನಾನು ನೋಡಿದ್ದೇನೆ. ಅವುಗಳನ್ನು ಕೈನಲ್ಲಿ ಮುಟ್ಟುವುದಕ್ಕೆ ಕೂಡ ಆಗುವುದಿಲ್ಲ. ಚೀಣಾ ಮತ್ತು ಜಪಾನ್ ದೇಶದಿಂದ ಬರತಕ್ಕ ಸಾಮಾನುಗಳು ಚೆನ್ನಾಗಿರುತ್ತವೆ ಮತ್ತು ಕಡಿಮೆ ಬೆಲೆಗೂ ಸಿಕ್ಕುತ್ತವೆ. ಈಗ ನಮ್ಮ ಸಂಸ್ಥಾನದಲ್ಲಿ ಒಟ್ಟು ಹನ್ನೆರಡು ಕೈಗಾರಿಕಾ ಸಂಸ್ಥೆಗಳು ಸರ್ಕಾರದ ಆಡಳಿತದಲ್ಲಿ ನಡೆಯುತ್ತಿವೆ. ಅವು ಪ್ರತಿವರ್ಷ ಲಕ್ಷಾಂತರ ರೂಪಾಯಿಗಳ ನಷ್ಟದಲ್ಲಿ ಕೆಲಸ ಮಾಡುತ್ತಿವೆ. ಅವು ಲಾಭದಾಯಕವಾಗಿಲ್ಲ. ಕೈಗಾರಿಕೆಯನ್ನು ಹೆಚ್ಚಿಸಬೇಕೆಂಬ ಮನಸ್ಸು ಸರ್ಕಾರದವರಿಗಿಲ್ಲ. ಮಲ್ಟಿಪರ್ಪಸ್ ಹೈಸ್ಕೂಲುಗಳಲ್ಲಿ ಸಾವಿರಾರು ರೂಪಾಯಿಗಳ ಬೆಲೆ ಬಾಳತಕ್ಕ ಮೆಷಿನರಿಯನ್ನು ಗ್ರೀಸ್ ಹಾಕಿಕೊಂಡು ಹಾಗೆಯೇ ಇಟ್ಟುಕೊಂಡಿದ್ದಾರೆ. ಆ ಮೆಷಿನರಿಗಳೆಲ್ಲವೂ ವಿದ್ಯಾ ಮಂತ್ರಿಗಳ ಕೈಯಲ್ಲಿವೆ. ಎಷ್ಟರ ಮಟ್ಟಿಗೆ ನಮ್ಮ ದೇಶದಲ್ಲಿ ಕೈಗಾರಿಕೆಯನ್ನು ಅಭಿವೃದ್ಧಿಮಾಡಬೇಕು, ಯಾವ ಯಾವ ಮೆಷಿನರಿ ಇಡಬೇಕು, ನಮ್ಮ ದೇಶದಲ್ಲಿ ಸಂಪನ್ಮೂಲಗಳನ್ನು ಹೆಚ್ಚಿಸಬೇಕು, ನಿರುದ್ಯೋಗವನ್ನು ನಿವಾರಣೆ ಮಾಡಬೇಕು ಎನ್ನತಕ್ಕದ್ದು ನಮ್ಮ ಸರ್ಕಾರದವರಿಗೆ ಕಿಂಚಿತ್ತೂ ವ ನಸ್ಸಿಲ್ಲ ಎಂದು ನಾನು ಕಳಕಳಿಯಿಂದ ಬಿನ್ನವಿಸಿಕೊಳ್ಳುತ್ತೇನೆ. ಮಾನ್ಯ ಕೈಗಾರಿಕಾ ಮಂತ್ರಿಗಳು ಯಾವ ರಾಜಕೀಯದಲ್ಲೂ ಪ್ರವೇಶಮಾಡದೆ, ಅವರಿಗೆ ಇನ್ನು ಇರತಕ್ಕ ನಾಲ್ಕು ವರ್ಷಗಳ ಅವಧಿಯಲ್ಲಿ ಕೈಗಾರಿಕೆಯನ್ನು ಅಭಿವೃದ್ಧಿಮಾಡಿ ಅದರಿಂದ ದೇಶಕ್ಕೆ ಹೆಚ್ಚು ಉತ್ಪತ್ತಿ ಬರುವಂತೆ ಅವಕಾಶವನ್ನು ಮಾಡಿಕೊಟ್ಟು ಗತಿಸಿದ ಸರ್. ಎಂ. ವಿಶ್ವೇಶ್ವರಯ್ಯನವರು ಯಾವ ರೀತಿ ಮಾದರಿ ಮೈಸೂರಿನ ಶಿಲ್ಪಿ ಎನ್ನತಕ್ಕ ಒಂದು ಹೆಸರನ್ನು ಪಡೆದಿದ್ದರೋ ಅದೇ ರೀತಿ ನಮ್ಮ ಕೈಗಾರಿಕಾ ಮಂತ್ರಿಗಳು ಮೈಸೂರಿನ ಶಿಲ್ಪಿ ಎನ್ನುವ ಒಂದು ಕೀರ್ತಿಯನ್ನು ಪಡೆಯುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಹಾಗೆಯೇ ಈ ಕೈಗಾರಿಕಾ ಸಹಕಾರ ಸಂಘಗಳಿವೆ. ಸಾಧಾರಣವಾಗಿ 400 ರಿಂದ 4000 ಕೈಗಾರಿಕಾ ಸಂಘಗಳನ್ನು ಮಾಡಿದ್ದಾರೆ. ಈ ನೇಕಾರ ಸಂಘಗಳು ಹೊಸದಾಗಿ ಇಲ್ಲ, ಇವು ಅನಾದಿಕಾಲದಿಂದಲೂ, ದೇಶ ಹುಟ್ಟಿದಾರಭ್ಯ ಇವೆ. ಸ್ವಲ್ಪ ಸಾಲ ಕೊಡುವುದರ ಮೂಲಕ ಕೈಗಾರಿಕಾ ಸಂಘ ಮಾಡಿದ್ದಾರೆಯೇ ಹೊರತು, ಇವು ಹೊಸದಲ್ಲ. ದೇಶದಲ್ಲಿ ಕಚ್ಚಾ ಪದಾರ್ಥಗಳು ಬೇಕಾದಷ್ಟು ಸಿಗುತ್ತವೆ. ಚಿತ್ರದುರ್ಗ, ತುಮಕೂರು ಮತ್ತು ಬಳ್ಳಾರಿ ಡಿಸ್ಟ್ರಿಕ್ಟುಗಳಲ್ಲಿ

ಕಚ್ಚಾ ಪದಾರ್ಥಗಳು ಬೇಕಾದಷ್ಟು ಸಿಗುತ್ತವೆ. ಈ ಕಚ್ಚಾ ಪದಾರ್ಥಗಳು ಹೊರ ದೇಶಕ್ಕೆ ರವಾನೆಯಾಗಿ ಹೋಗುತ್ತಿವೆ. ಅದರ ಬದಲು ಈ ರಾಜ್ಯದಲ್ಲಿಯೇ ಅವುಗಳನ್ನು ಉಪಯೋಗಿಸಿಕೊಂಡು ತಯಾರಾದ ಪದಾರ್ಥಗಳನ್ನು ಪರದೇಶಗಳಿಗೆ ಕಳುಹಿಸಿ ಸ್ಟರ್ಲಿಂಗ್ ಮತ್ತು ಫಾರಿನ್ ಎಕ್ಸ್‌ಚೇಂಜ್ ಸಂಪಾದಿಸಬಹುದು. ನಿಮಗೆ ಅದನ್ನು ಉತ್ಪತ್ತಿ ಮಾಡಲು ಶಕ್ತಿ ಇಲ್ಲ; ಅದಕ್ಕೆ ಅನುಕೂಲತೆ ಒದಗಿಸಿಕೊಡುವ ಶಕ್ತಿ ಇಲ್ಲ. ಕಚ್ಚಾ ಪದಾರ್ಥಗಳನ್ನು ಹೊರದೇಶಕ್ಕೆ ಕಳುಹಿಸುವ ಅಪಾಯ ಸ್ಥಿತಿಗೆ ತಂದಿರುವುದು ನಮ್ಮ ದೇಶದ ದುರ್ದೈವ. ಕಚ್ಚಾ ಪಧಾರ್ಥಗಳಿಗೆ ನಮ್ಮ ದೇಶದಲ್ಲಿ ಏನೂ ಕೊರತೆ ಇಲ್ಲ. ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ನಮ್ಮ ತಾಲ್ಲೂಕಿನಲ್ಲಿ ಬಿಳಿ ಮಣ್ಣು ಸಿಗುತ್ತದೆ. ಅದನ್ನು ಇಂಗ್ಲೆಂಡಿಗೆ ಕಳುಹಿಸುತ್ತಾ ಇದ್ದಾರೆ ವರ್ತಕರು ಬೆಂಗಳೂರಿಂದ ಬಂದು ಈ ಮಣ್ಣನ್ನು ಸುಲಭ ಖರೀದಿಗೆ ಕೊಂಡು ಇಂಗ್ಲೆಂಡಿಗೆ ರವಾನೆ ಮಾಡುತ್ತಿದ್ದಾರೆ. ಅದರ ಬದಲು ಇಲ್ಲಿಯೇ ಅದರಿಂದ ಸಾಮಾನು ತಯಾರು ಮಾಡಿ ಇಂಗ್ಲೆಂಡಿಗೆ ಕಳುಹಿಸಬಾರದೇ!

ಶ್ರೀ ಕೆ. ಮಲ್ಲಪ್ಪ.—ಇಂಗ್ಲೆಂಡಿಗೆ ಯಾವುದೂ ಹೋಗುತ್ತಾ ಇಲ್ಲ.

ಶ್ರೀ ಬಿ. ಚನ್ನಬೈರೇಗೌಡ.—ನಮ್ಮಲ್ಲಿ ಎರಡು ಪ್ರದೇಶಗಳಲ್ಲಿ ಈ ಬಳೀ ಮಣ್ಣು ದೊರಕುತ್ತದೆ. ಅದನ್ನು ಕಳುಹಿಸುತ್ತಾರೆ.

ಈ R.I.C.S. ಅಂತ ಮಾಡಿ, ಈ ರೂರಲ್ ಇಂಡಸ್ಟ್ರೀಸ್ ಸಂಘಗಳ ಮೂಲಕ ಉತ್ಪತ್ತಿ ಹೆಚ್ಚಿಸಲು ಸಾಲಗಳನ್ನು ಕೊಡುತ್ತಿದ್ದೀರ. ಜನಗಳು ಯಾವ ಕೈಗಾರಿಕೋದ್ಯಮಗಳನ್ನು ಮಾಡದೆ, ಸಾಮಗ್ರಿಗಳನ್ನು ತಮ್ಮ ನಿತ್ಯಬಳಕೆಗೆ, ಸ್ವಂತಕ್ಕೆ ಉಪಯೋಗಿಸಿಕೊಂಡು, ಸಂಘಕ್ಕೆ ಸಾಲಗಾರರಾಗಿರುತ್ತಾರೆ. ಈ ಇಲಾಖೆಗೆ ಒಬ್ಬ ಡೈರೆಕ್ಟರು, ಸಿಬ್ಬಂದಿ ವರ್ಗ ಎಲ್ಲಾ ಹೆಚ್ಚಾಗಿದೆ; ಇವರು ಏನೂ ಕೆಲಸ ಮಾಡುತ್ತಾ ಇಲ್ಲ. ಗ್ರಾಮಾಂತರ ಕೈಗಾರಿಕಾ ಸಹಕಾರ ಸಂಸ್ಥೆ ಎಂದು ಹೆಸರಿಟ್ಟುಕೊಂಡಿದ್ದರೂ, ಆ ಹೆಸರಿಗೆ ಅರ್ಥ ಬರುವ ರೀತಿಯಲ್ಲಿ ಯಾವ ಕೆಲಸವನ್ನೂ ಈ ಸಂಘಗಳು ನಡೆಸುತ್ತಿಲ್ಲ.

ನಮ್ಮ ಬಾಲಕರಲ್ಲಿ ಇಂಡಸ್ಟ್ರಿಯಲ್ ಮೈಂಡ್ ಬರುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಕನ್ನಡ ಮೀಡಿಯಂ ತೆಗೆದುಕೊಂಡು ಎಸ್.ಎಸ್.ಎಲ್.ಸಿ. ಮಾಡಿಕೊಂಡು ಪಿ.ಯು.ಸಿ.ಗೆ ಸಾಮಾನ್ಯವಾಗಿ ನಮ್ಮ ಹುಡುಗರು ಬರುತ್ತಾರೆ. ಅಲ್ಲಿ ಇಂಗ್ಲೀಷ್ ಮೀಡಿಯಂ ಇರುತ್ತದೆ; P.U.C.ಯಲ್ಲಿ ಬಹಳ ಜನ ಗ್ರಾಮಾಂತರ ಪ್ರದೇಶದ ಹುಡುಗರು ಪಾಸಾಗುವುದಿಲ್ಲ. ಅವರಲ್ಲಿ ಕಷ್ಟಪಟ್ಟು P.U.C. ಪಾಸಾದವರು, B.Sc.ಯಲ್ಲಿ ತೇರ್ಗಡೆಯಾಗುವುದಿಲ್ಲ. ಒಂದೋ, ಎರಡೋ ಪಾರ್ಟ್ B.Sc. ಯಲ್ಲಿ ಮಾಡಿಕೊಂಡು Part B Sc.ಗಳಾಗಿ ಮನೆಕಡೆ ಹಿಂದಿರುಗುತ್ತಾರೆ. ಅವರು S.S.L.C ಪಾಸಾಗುತ್ತಲೂ P U.C.ಗೆ ಹೋಗುವುದಕ್ಕೆ ಬದಲು, ಇಂಡಸ್ಟ್ರಿಯಲ್ ಮೈಂಡ್ ಅವರಲ್ಲಿ ಡೆವಲಪ್ ಮಾಡುವುದಕ್ಕೆ, ಕೈಗಾರಿಕೆಗಳನ್ನು ಹೇರಳವಾಗಿ ಪ್ರಾರಂಭಿಸಿ, ಅವರು ಅವುಗಳಲ್ಲಿ ತರಪೇತಿ ಹೊಂದಲಿ. ಸೆಂಟ್ರಲ್ ಗವರ್ನಮೆಂಟಿನವರು ಫ್ಯಾಕ್ಟರಿಗಳನ್ನು ಸ್ಟಾರ್ಟ್ ಮಾಡಿದ್ದಾರೆ, ಆ ಫ್ಯಾಕ್ಟರಿಗಳಿಗೆ ಜನರನ್ನು ತಯಾರುಮಾಡಬೇಕು. ಹೈಸ್ಕೂಲುಗಳ ಪಕ್ಕದೊಳಗೇ ಒಂದು ಇಂಡಸ್ಟ್ರಿಯಲ್ ಸ್ಕೂಲನ್ನು ತೆಗೆದು ಜನಗಳನ್ನು ತಯಾರು ಮಾಡಿ; ಆವಾಗ ಹೆಚ್ಚು ಉತ್ಪಾದನೆಗೆ ಅವಕಾಶವಾಗುತ್ತದೆ; ಜನಗಳಿಗೆ ಸಂಪಾದನೆ ಮಾರ್ಗವೂ ಆಗುತ್ತದೆ; ನಿರುದ್ಯೋಗ ಪ್ರಶ್ನೆಯನ್ನು ನಿವಾರಣೆ ಮಾಡಿದ ಹಾಗಾಗುತ್ತದೆ. ಈಗ 12 ಕೋಟಿ ರೂಪಾಯಿ ಕೇಳಿದ್ದೀರಿ; ಇನ್ನೂ 10 ಕೋಟಿ ರೂಪಾಯಿ ಕೇಳಿರಿ; ಈ ಮಾನ್ಯ ಸಭೆಯ ಸದಸ್ಯರು ಕೊಡುತ್ತಾರೆ; ನಿಮಗೆ ಎಲ್ಲಾ ಬೆಂಬಲ ನಾವು ಕೊಡುತ್ತೇವೆ. ದೇಶದಲ್ಲಿ ಉತ್ಪಾದನೆ ಹೆಚ್ಚಿಸುವುದಕ್ಕೆ ನಿರುದ್ಯೋಗ ಪರಿಹಾರ ಮಾಡಲಿಕ್ಕೆ ನಮ್ಮ ಸೂಚನೆಗಳಿಗೆ ಮಾನ್ಯತೆ ಕೊಡಿ; ನಾವು ಎಲ್ಲ ಸಹಕಾರವನ್ನು ಸರ್ಕಾರಕ್ಕೆ ನೀಡುತ್ತೇವೆ. ನಮ್ಮ ದೇಶದಲ್ಲಿ ಸಿಗುವ ಕಚ್ಚಾ ಪದಾರ್ಥಗಳನ್ನು ಹೊರಗೆ ಕಳುಹಿಸುವುದನ್ನು ನಿಲ್ಲಿಸಿ, ಅವುಗಳಿಂದ ಅವರು ತಯಾರುಮಾಡುವ ಸಾಮಗ್ರಿಗಳನ್ನು, ಇಲ್ಲಿ ನೀವೇ ತಯಾರುಮಾಡಲು ಪ್ರಾರಂಭಮಾಡಿ, ನಿಮಗೆ ಎಲ್ಲಾ ಬೆಂಬಲ ಕೊಡುತ್ತೇವೆ; 15 ಕೋಟಿ ರೂಪಾಯಿ ಕೊಡುತ್ತೇವೆ. ಬರೀ ಸಂಬಳಕ್ಕೋಸ್ಕರ, ಕಟ್ಟಡಗಳ ಅಭಿವೃದ್ಧಿಗೋಸ್ಕರ, ಹೆಚ್ಚು ಸಾಲ ಕೊಡುವುದಕ್ಕೋಸ್ಕರ ಈ ಇಲಾಖೆ ಇದೆ. ಉತ್ಪತ್ತಿ ಹೆಚ್ಚು ಮಾಡಲು ಈ ಇಲಾಖೆ ಜನಗಳಿಗೆ ಅವಕಾಶ ಕಲ್ಪಿಸಿಲ್ಲ. ಇಂಡಸ್ಟ್ರಿಯಲ್ ಎಸ್ಟೇಟುಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚಿಸಬೇಕು. ಇಂಡಸ್ಟ್ರಿಗಳೆಲ್ಲಾ ಬೆಂಗಳೂರಿನಲ್ಲಿ ಕೇಂದ್ರೀಕೃತ ಮಾಡುವುದನ್ನು ಬಿಡಬೇಕು. ಯಾವ ಭಾರಿ ಪ್ರಮಾಣದ ಕೈಗಾರಿಕೆಯೂ ಬೆಂಗಳೂರಿನಲ್ಲಿಯೇ ಸ್ಥಾಪಿತವಾಗುತ್ತಿದೆ; ಯಾವ ತರಹ ಪ್ರಮಾಣದ ಫ್ಯಾಕ್ಟರಿಗಳು ಬಂದರೂ ಸಹ ಬೆಂಗಳೂರು ಸುತ್ತಮುತ್ತಲ ಕೇಂದ್ರೀಕೃತವಾಗಿ, ಬೆಂಗಳೂರಿನಲ್ಲಿ ನೀರು, ಎಲೆಕ್ಟ್ರಿಸಿಟಿ, ನೆಲ ಎಲ್ಲಕ್ಕೂ ತೊಂದರೆಯಾಗಿದೆ. ಈ ಫ್ಯಾಕ್ಟರಿಗಳನ್ನು ಗ್ರಾಮಾಂತರ ಪ್ರದೇಶಗಳಿಗೆ ಹರಿಸಿ, ಹಿಂದುಳಿದ ಭಾಗಗಳಿಗೆ ಹರಿಸಿ. ಈ ಇಂಡಸ್ಟ್ರಿಯಲ್ ಎಸ್ಟೇಟುಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚು ಹೆಚ್ಚಾಗಿ ಸ್ಥಾಪನೆ ಮಾಡಬೇಕೆಂದು ಸರ್ಕಾರದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

[MR. SPEAKER in the Chair.]

(ಶ್ರೀ ಬಿ. ಚನ್ನಬೈರೇಗೌಡ)

ಸ್ಟೈನ್‌ಲೆಸ್ ಸ್ಟೀಲ್, ಕ್ಯಾಂಫರ್, ನೇಲ್ಸ್ (nails) ಇವಕ್ಕೆಲ್ಲಾ ಕೋಟ ಸಿಸ್ಟಂ ಇದೆ. ನಮ್ಮ ತಾಲ್ಲೂಕು ವಿಜಯಪುರ ಸಂಘದ ಹೆಸರಿನಲ್ಲಿ ಕ್ಯಾಂಫರಿಗೆ ಮೂರು ಸರ್ತಿ ಕೋಟವನ್ನ ಬೆಂಗಳೂರಿಗೆ ತೆಗೆದುಕೊಂಡು ಹೋಗಿ, ಮೂರು ಸಾರಿಯೂ ಬೆಂಗಳೂರಿನಲ್ಲಿಯೇ ಅವನ್ನು ಮಾರಿ ಕೊಂಡು ಹೋಗಿದ್ದಾರೆ; ಆ ಕೋಟ ಊರಿಗೆ ಹೋಗಲೇ ಇಲ್ಲ.

Mr. SPEAKER.—Is there any complaint for the members of the Society ?

Sri B. CHANNABYRE GOWDA.—Yes, sir, written complaint ಕೊಟ್ಟಿದೆ. ಈ ಸ್ಟೈನ್‌ಲೆಸ್ ಸ್ಟೀಲ್ ಕೋಟವು ದುರುಪಯೋಗವಾಗುತ್ತಿದೆ. ಬರೀ ಬೋರ್ಡುಗಳು ಹಾಕಿಕೊಂಡಿರುತ್ತಾರೆ ಅಷ್ಟೆ. ಈ ಸ್ಟೈನ್‌ಲೆಸ್ ಸ್ಟೀಲ್ಸ್, ನೇಲ್ಸ್, ಪ್ಲಾಸ್ಟಿಕ್ಸ್, ಇನ್ನೂ ಅನೇಕ ತರಹ ಕೋಟಗಳನ್ನು ಮತ್ತು ಜಪಾನ್ ಮತ್ತು ಜರ್ಮನಿಯಿಂದ ಬರತಕ್ಕಂಥ ಸಾಮಾನುಗಳ ಕೋಟಾ ವನ್ನೂ, ಫಾರಿನ್ ಎಕ್ಸ್‌ಛೇಂಜ್‌ಗೆ ಸಿಕ್ಕಿರುವವನ್ನೂ ದಾಕ್ಷಿಣ್ಯಕ್ಕೆ ಮತ್ತು ರಾಜಕೀಯ ಒತ್ತಡಕ್ಕೆ ಒಳಗಾಗಿ ಕೊಟ್ಟಿದ್ದಾರೆ; ಈ ತರಹ ಪರ್ಮಿಟ್‌ಗಳನ್ನು ಕೊಟ್ಟರೆ ಅವುಗಳನ್ನು ಮಾರುವುದಕ್ಕೆ ಅವಕಾಶವಾಗುತ್ತದೆ. ಕೈಗಾರಿಕಾ ಮಂತ್ರಿಗಳನ್ನು ಈ ಪರ್ಮಿಟ್ಟುಗಳಲ್ಲಿ ಬ್ಲಾಕ್‌ಮಾರ್ಕೆಟ್ ಆಗುತ್ತಿರುವ ಕಡೆಗೆ ಹೆಚ್ಚು ನಿಗಾ ಕೊಟ್ಟು, ಬ್ಲಾಕ್‌ಮಾರ್ಕೆಟ್ ಆಗುವುದನ್ನು ನಿಲ್ಲಿಸಿ, ಅವು ಸದ್ವಿನಿ ಯೋಗವಾಗುವಂತೆ ನೋಡಿಕೊಳ್ಳಬೇಕು. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—Before I call upon the next hon. Member to speak, may I know what happened to the question of adjustment of work on Monday ?

Sri B. D. JATTI.—Sir, I consulted the Leader of the Opposition and he has agreed that there should not be any holiday on the 25th because the work will be unnecessarily hampered. He has agreed that we may sit in the morning on Monday.

Mr. SPEAKER.—I think that can be done. Such of the members as are likely to be away on Monday, may give me their names and they may speak today on the Demands.

Sri C. J. MUKKANNAPPA.—Sir, we did not know what the Leader of the Opposition consulted with the Finance Minister. I would suggest that we sit as usual on Monday also, i.e., from 1 p.m.

Mr. SPEAKER.—I have understood your point. Such of the members as are desirous of participating in the discussion today may speak.

Sri S. SHIVAPPA.—Sir, because there are several more Demands to be discussed, we do not want to have any holiday. So, we thought that in order to enable those members who want to go to their constituency the session may be held in the morning. It is agreed that we can meet on Monday in the morning and such of those members who cannot participate in the discussion on Monday may be permitted to have a chance to speak today.

11.00 A.M.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮೂರು ದಿನಗಳ ಕೆಳಗೆ ಒಂದು ಪ್ರೋಗ್ರಾಂ ಕೊಟ್ಟಿದ್ದರು. ಅದರ ಪ್ರಕಾರ ಷೆಡ್ಯೂಲ್ ಟೈಂ keep up ಮಾಡಬೇಕು. ಬಡ್ಜೆಟ್ ಮಂಡಿಸುವ ತಾರೀಖನ್ನು ಬದಲಾಯಿಸುವುದಕ್ಕಾಗುವುದಿಲ್ಲ. ಆಡಳಿತ ಪಕ್ಷದವರು ಈ ಬಗ್ಗೆ ಸ್ಪಷ್ಟವಾದ ನಿಲುವನ್ನು ಹೇಳದೇ ಇರುವಾಗ ಆ ಬಗ್ಗೆ ಇನ್ನೂ ಹಿಂದುಮುಂದು ನೋಡುವ ಕ್ರಮ ಸರಿಯಲ್ಲ. ಇವತ್ತು ಶ್ರೀಮಾನ್

ಗೋಪಾಲಗೌಡರು ಹೇಳಿದ ವಾದವನ್ನು ನಾನು ಸಮರ್ಥಿಸುತ್ತೇನೆ. ಅದು ಸರಿಯೆಂದು ನನಗೆ ಕಾಣುತ್ತದೆ. ಒಂದು ವೇಳೆ ನಾಯಕರು ಇಲ್ಲದೇ ಇರುವಾಗ ಉಪನಾಯಕರಾದರೂ ಇಲ್ಲಿ ಇರಬೇಕು. ನಮ್ಮ ಅನುಕೂಲಗಳನ್ನು ಸಹ ಅವರು ನೋಡಬೇಕು. ಬೊಂಬಾಯಿ ಕರ್ನಾಟಕದವರು ಊರಿಗೆ ಹೋಗಿಯೇ ಹೋಗುತ್ತಾರೆ. ಬೆಳಗ್ಗೆ ಅಧಿವೇಶನವಿಟ್ಟರೆ ಕೇವಲ 10-20 ಮೈಲಿಗಳ ದೂರದಲ್ಲಿರುವವರು ಬರಬಹುದು. ನೂರಾರು ಮೈಲಿಗಳ ದೂರದಲ್ಲಿರುವವರು ಹೇಗೆ ಬರುವುದಕ್ಕಾಗುತ್ತದೆ? ಅದೂ ಅಲ್ಲದೆ ಮಧ್ಯಾಹ್ನ ಒಂದು ಘಂಟೆಗೇನಾದರೂ ಅಧಿವೇಶನವಿಟ್ಟರೆ ನಾವು ಊರಿಗೆ ಹೋಗಿ ಮತ್ತೆ ಬೆಳಗ್ಗೆ ಪುನಃ ಬರಬೇಕಾಗುತ್ತದೆ. 3 ದಿನಗಳ ಕೆಳಗೆ ಮುಖ್ಯಮಂತ್ರಿಗಳು ಸೋಮವಾರ ರಜವಿಲ್ಲ. ಏಪ್ರಿಲ್ 1ನೇ ತಾರೀಖಿನ ಹೊತ್ತಿಗೆ ಅಪ್ರೋಪ್ರಿಯೇಷನ್ ಬಿಲ್ ಪಾಸ್‌ಮಾಡಬೇಕಾಗುತ್ತದೆಂದು ಹೇಳಿದರು. ನಾವು ಆ ಹಣಕಾಸಿನ ವಿಚಾರದಲ್ಲಿ ಸಹಕಾರ ಕೊಡುವುದಕ್ಕೆ ಸಿದ್ಧ. ಆದ್ದರಿಂದ ಬೆಳಗ್ಗೆ ಅಧಿವೇಶನವಿಟ್ಟು ನಮಗೆ ಸುಮ್ಮನೆ ಇಕ್ಕಟ್ಟು ತಂದುಹಾಕಬೇಡಿ. ಈಗ ಯಾರ್‍ಯಾರು ಮಾತನಾಡುತ್ತಾರೋ ಮಾತನಾಡಲಿ. ಮಧ್ಯಾಹ್ನ ಒಂದು ಘಂಟೆಗೆ ಸೇರುವುದೇ ಒಳ್ಳೆಯದು ಎಂದು ನನ್ನ ಅಭಿಪ್ರಾಯ. ನನ್ನ ಅಭಿಪ್ರಾಯವನ್ನು ನನ್ನ ಹಿಂದುಗಡೆ ಮಾತನಾಡಿದವರೂ ಮತ್ತು ಇನ್ನು ಮುಂದೆ ಮಾತನಾಡುವವರದೂ ಆಗಿರುತ್ತದೆಂದು ನಾನು ನಂಬಿದ್ದೇನೆ. We are all existing in a Hindu society. ರಾಹುಕಾಲದಲ್ಲಿ ಏನು ಕೆಲಸವನ್ನೂ ಮಾಡಬಾರದು. 7½ ಘಂಟೆಯಿಂದ 9 ಘಂಟೆಯವರೆಗೆ ರಾಹುಕಾಲವಿರುತ್ತದೆ. ತಮ್ಮ ಕಾಲದಲ್ಲಿ ಒಂದು ದಾರಿಮಾಡಿ ವಿರೋಧಪಕ್ಷದ ನಾಯಕರೊಬ್ಬರನ್ನೇ ಈ ವಿಷಯದಲ್ಲಿ ಜವಾಬ್ದಾರಿಯಾಗಿರುವ ಹಾಗೆ ಮಾಡಬೇಡಿ. ನಾವು ಒಬ್ಬೊಬ್ಬರೇ ಇದ್ದೇವೆ. ನಮ್ಮ ಅಭಿಪ್ರಾಯವನ್ನೂ ಕೇಳಿ.

Mr. SPEAKER.—I am sure the hon. Member Sri Muckannappa will not do anything "that a pata". To cut matters short, if he or any of the members behind him wants to participate today, he may give me a list and I will accomodate them.

Sri C. J. MUCKANNAPPA.—Then, Let the views of the Opposition Leader carry weight.

[*Sri R. N. Lakshmipathi rose.*]

Mr. SPEAKER.—Don't go on interjecting. Is not the debate to go on?

Sri R. N. LAKSHMIPATHI.—Should I come in the morning or in the afternoon?

Mr. SPEAKER.—There will be a morning session on Monday, from 8-30 a.m. to 12-30 p.m. or 1 p.m.

†ಶ್ರೀ ಟಿ. ಎನ್. ಮಾದಪ್ಪಗೌಡ (ನಾಗಮಂಗಲ).—ಸ್ವಾಮಿ, ಈಗ ಹನ್ನೊಂದು ಕೋಟಿ ರೂಪಾಯಿಗಳನ್ನು ಖರ್ಚುಮಾಡತಕ್ಕ ಈ ಕೈಗಾರಿಕೆಯ ಡಿಮ್ಯಾಂಡನ್ನು ನಾವು ಒಪ್ಪಬೇಕಾಗಿದೆ. ಶ್ರೀಮಾನ್ ಶಿವಪ್ಪನವರು ಹೇಳಿದಹಾಗೆ ಈ ಮೈಸೂರನ್ನು ಒಂದು ಕೈಗಾರಿಕಾ ದೇಶವನ್ನಾಗಿ ಮಾಡಬೇಕೆಂದು ಹೇಳಿ ದಿವಂಗತ ಸರ್. ಎಂ. ವಿಶ್ವೇಶ್ವರಯ್ಯನವರು ಬಹಳವಾಗಿ ಪ್ರಯತ್ನ ಮಾಡಿದರು. ಅವರು ಹಾಕಿಕೊಟ್ಟಂತಹ ಒಂದು ಮೇಲ್ಪಂಗ್ತಿಯಲ್ಲಿ ಇವತ್ತು ಕೆಲಸ ಕಾರ್ಯಗಳು ನಡೆಯುತ್ತಿವೆ. ಆದರೆ ಅವರು ಏನು ಆಶೆ ಇಟ್ಟುಕೊಂಡಿದ್ದರೋ ಅಷ್ಟರಮಟ್ಟಿಗೆ ಆ ಕೆಲಸ ಕಾರ್ಯಗಳು ಯಶಸ್ವಿಯಾಗಿಲ್ಲ. ನಮಗೆ ಸ್ವಾತಂತ್ರ್ಯ ಬಂದು 15 ವರ್ಷಗಳಾದರೂ ಸಹ ಇನ್ನೂ ಅವರ ಒಂದು ಆಶೆಯ ಅಂತಸ್ತಿನ ಮಟ್ಟಕ್ಕೆ ನಮ್ಮ ದೇಶದ ಕೈಗಾರಿಕಾಭಿವೃದ್ಧಿಯನ್ನು ತರಲು ಸಾಧ್ಯವಾಗಲಿಲ್ಲವಲ್ಲಾ ಎಂಬುದಾಗಿ ನನ್ನ ಮನಸ್ಸಿಗೆ ಬಹಳ ನೋವಾಗುತ್ತಿದೆ. ನನ್ನ ಮಾನ್ಯ ಸ್ನೇಹಿತರೊಬ್ಬರು ಹೇಳಿದಹಾಗೆ ಈ ಇಲಾಖೆ ದಿನೇ ದಿನೇ ಬಡಾವಣೆಯಲ್ಲಿ ಜಾಸ್ತಿಯಾಗುತ್ತಿದೆಯೇ ವಿನಹ ನ್ಯಾಯವಾಗಿ ಎಲ್ಲೆಲ್ಲಿ ಏನೇನು ಕೆಲಸಗಳನ್ನು ಮಾಡಬೇಕು ಎನ್ನುವ ವಿಚಾರಗಳ ಕಡೆಗೆ ಸರ್ಕಾರದವರು ಹೆಚ್ಚಿಗೆ ಗಮನ ಕೊಟ್ಟಹಾಗೆ ಕಾಣಲಿಲ್ಲವೆಂದು ನನಗೆ ತೋರುತ್ತದೆ. ಈ ವಿಚಾರದಲ್ಲಿ ಹಿಂದೆ ಒಂದುಸಾರಿ ಡೈರೆಕ್ಟರವರ ಆಫೀಸಿಗೆ ಹೋದಾಗ ಅಲ್ಲಿ ಕೇವಲ ಹತ್ತಾರು ಜನರಿದ್ದುದನ್ನು ನೋಡಿದೆ. ಅಲ್ಲಿ ಕೆಲವು ಡೈರೆಕ್ಟರುಗಳು ಸಹಾ ಇರುತ್ತಾರೆ. ಅವರಲ್ಲಿ ಕೆಲವರು ಯಾವ ಬಾಬನ್ನು ನೋಡುತ್ತಿದ್ದಾರೋ ಆ ಬಾಬಿನ ಬಗ್ಗೆ ಕೇಳತಕ್ಕ ಪ್ರಶ್ನೆಗೇ ಉತ್ತರ ಕೊಡುವ ಸ್ಥಿತಿಯಲ್ಲಿಲ್ಲ ಎಂಬುದು ನನ್ನ ಸ್ವಂತ ಅನುಭವವಾಗಿದೆ. ಪರಿಸ್ಥಿತಿ ಈ ರೀತಿ ಇರುವುದರಿಂದ ಈ ವಿಚಾರದಲ್ಲಿ ಪರಿಣತರಾಗಿರುವವ

(ಶ್ರೀ ಟಿ. ಎನ್. ಮಾದಪ್ಪಗೌಡ)

ರನ್ನು ಕೈಗಾರಿಕಾ ಇಲಾಖೆಗಳಲ್ಲಿಟ್ಟು ದೇಶಕ್ಕೆ ಹೆಚ್ಚು ಅನುಕೂಲವಾಗುವ ರೀತಿಯಲ್ಲಿ ಕೆಲಸಗಳು ನಡೆಯಬೇಕೆಂದು ನಾನು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಅನೇಕ ಕಡೆಗಳಲ್ಲಿ ಟ್ರೈನಿಂಗ್ ಇನ್‌ಸ್ಟಿಟ್ಯೂಟ್ಸ್ ಎಂದು ಮಾಡಿದ್ದಾರೆ. ಅಲ್ಲಿ ಟೆಕ್ನಿಕಲ್ ಎಜುಕೇಷನ್ ಬಹಳಮಟ್ಟಿಗೆ ಕೆಡುತ್ತಿದೆ. ಈ ರೀತಿ ಪರಿಸ್ಥಿತಿ ಉಂಟಾಗುವುದರಿಂದ ಈ ಬಗ್ಗೆ ವ್ಯಾಸಂಗ ಪೂರ್ತಿ ಮಾಡಬೇಕೆಂದು ಹೋಗತಕ್ಕ ಕಾಲದಲ್ಲಿ ವಿದ್ಯಾರ್ಥಿಗಳಿಗೆ ಯಾವುದೇ ರೀತಿಯಾದ ಅನುಕೂಲಗಳು ದೊರೆಯದೆ ಹೋಗಿ ನಿರುದ್ಯೋಗ ಸಮಸ್ಯೆಗೆ ಬಹಳ ಮಂದಿ ತುತ್ತಾಗುತ್ತಿದ್ದಾರೆ. ಇದರಿಂದ ಅವರನ್ನು ಏನುಕೆಲಸಕ್ಕೂ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಅಂತಹವರಿಗೆ ನಿಮ್ಮ ಇಂತಹ ಸ್ಕೂಲುಗಳಲ್ಲಿ ಹೆಚ್ಚಿನ ತರಬೇತು ಕೊಟ್ಟು ಅವರು ಅಲ್ಲಿಂದ ಪಾಸ್ ಮಾಡಿ ಹೋದಾಗ ಅತ ಯಾವ ಕಸುಬಿನಲ್ಲಿ ತಯಾರಾಗಿದ್ದಾನೋ ಆ ಕಸುಬಿಗೆ ಅವನನ್ನು ನೇಮಿಸಬೇಕು. ಅಲ್ಲದೆ ಅವನಿಗೆ ಸಣ್ಣಪುಟ್ಟ ಯಂತ್ರೋಪಕರಣಗಳ ಬಂಡವಾಳದ ಜವಾಬ್ದಾರಿಯನ್ನು ಸ್ವಲ್ಪಮಟ್ಟಿಗಾದರೂ ವಹಿಸಿ ಕೊಟ್ಟು ಅವನು ಇರುವಕಡೆಯೇ ಕೆಲಸಗಳನ್ನು ಕೊಡುವಂತೆ ಮಾಡಿದರೆ ಖಂಡಿತವಾಗಿ ಸ್ವಲ್ಪ ಮಟ್ಟಿಗೆ ಅನುಕೂಲವಾಗುತ್ತದೆಂದು ನಾನು ಹೇಳುತ್ತೇನೆ. ಆದರೆ ಟೆಕ್ನಿಕಲ್ ಎಜುಕೇಷನ್ ತೆಗೆದುಕೊಂಡಂಥ ಅನೇಕ ವಿದ್ಯಾರ್ಥಿಗಳು ಇವತ್ತು ಈ ಬೆಂಗಳೂರಿನಲ್ಲಿ ಎಷ್ಟೋ ಜನರು ಇದ್ದಾರೆ. ಇವತ್ತು ಬೆಂಗಳೂರು ಮತ್ತು ಬೆಂಗಳೂರು ಸುತ್ತಮುತ್ತಲೂ ಬೇಕಾದಷ್ಟು ಕೈಗಾರಿಕೆಗಳು ನಡೆಯುತ್ತಿದ್ದರೂ ಕೂಡ ಪತ್ರಿಕೆಗಳಲ್ಲಿ ಏನು ಹೇಳುತ್ತಾರೆಂದರೆ ಟೆಕ್ನಿಕಲ್‌ಪರ್ಸನಲ್ ಎಷ್ಟೇ ಜನ ಆದರೂ ನಮಗೆ ಬೇಕಾಗುತ್ತದೆ ಎಂಬುದಾಗಿ ಹೇಳುತ್ತಾರೆ. ಇನ್ನುಮುಂದಕ್ಕೆ ವಿದ್ಯಾರ್ಥಿಗಳ ಸಂಖ್ಯೆಯನ್ನು ಹೆಚ್ಚುಮಾಡುತ್ತೇವೆಂದು ಹೇಳುತ್ತಾರೆ. ಆದರೆ ಈ ಟೆಕ್ನಿಕಲ್ ವಿಷಯದಲ್ಲಿಯೇ ಪರಿಣತರಾಗಿ ಪರೀಕ್ಷೆ ಪಾಸ್‌ಮಾಡಿಕೊಂಡಿರತಕ್ಕ ನಮ್ಮ ಮೈಸೂರಿನ ಮಕ್ಕಳಿಗೆ ಎಲ್ಲನೋಡಿದರೂ ಕೆಲಸ ಸಿಗದೆ ತೊಂದರೆಯಾಗುತ್ತಿರುವುದನ್ನು ಮಾನ್ಯ ಕೈಗಾರಿಕಾ ಸಚಿವರು ಗಮನಿಸಬೇಕು. ಮೈಸೂರಿನಲ್ಲಿ ಸ್ಥಾಪನೆಯಾದಂಥ ಯಾವ ಕೈಗಾರಿಕೆಯಾಗಿರಲಿ, ಅಥವಾ ಕೇಂದ್ರಸರ್ಕಾರದಿಂದ ಸ್ಥಾಪಿತವಾದ ಕೈಗಾರಿಕೆಗಳು ಯಾವುದೇ ಆಗಿರಲಿ, ಕಡ್ಡಾಯವಾಗಿ ನಮ್ಮ ಮೈಸೂರಿನ ಮಕ್ಕಳಿಗೆ ಅಲ್ಲಿ ಕೆಲಸ ಸಿಕ್ಕುವ ಏರ್ಪಾಡನ್ನು ಸರ್ಕಾರದವರು ಕೂಡಲೇ ಮಾಡುವುದು ಅವರ ಆದ್ಯ ಕರ್ತವ್ಯವಾಗಿದೆ. ಈ ವಿಷಯದಲ್ಲಿ ಮಾನ್ಯಮಂತ್ರಿಗಳೇ ಜವಾಬ್ದಾರಿ ತೆಗೆದುಕೊಂಡು ನಮ್ಮ ಮೈಸೂರಿನ ನಿರುದ್ಯೋಗಿಗಳಿಗೆ ಅಲ್ಲೆಲ್ಲಾ ಉದ್ಯೋಗ ಕೊಡಿಸುವ ಹಾಗೆ ವ್ಯವಸ್ಥೆ ಮಾಡಬೇಕೆಂದು ನಾನು ಹೇಳಬಯಸುತ್ತೇನೆ.

ಇನ್ನು ನಮ್ಮ ದೇಶದ ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚಿಗೆ ಲೋಹಗಳು ಸಿಕ್ಕುವಂತಹ ಪ್ರದೇಶಗಳು ಹೇರಳವಾಗಿವೆ. ಇವನ್ನು ಚೆನ್ನಾಗಿ ಸರ್ವೆ ಮಾಡಬೇಕು. ಆಯಾ ಪ್ರದೇಶಗಳಲ್ಲಿರತಕ್ಕ ಜನರಿಗೆ ಅವರಿರುವ ಸ್ಥಳಗಳಲ್ಲಿಯೇ ಈ ಬಗ್ಗೆ ಕೆಲಸಗಳನ್ನು ದೊರಕಿಸಿಕೊಡುವ ಏರ್ಪಾಡನ್ನು ಕೂಡಲೇ ಸರ್ಕಾರದವರು ಮಾಡಿಕೊಡಬೇಕಾಗಿದೆ.

ಇಂಡಸ್ಟ್ರಿಯಲ್ ಎಸ್ಟೇಟ್ ತೆರೆಯುತ್ತೇವೆಂದು ಹೇಳಿದ್ದಾರೆ, ಜಿಲ್ಲೆಗೆ ಒಂದೆರಡು ಕಡೆ ಜಾಗಗಳನ್ನು ಗೊತ್ತು ಮಾಡಿದ್ದಾರೆ. ಹೀಗೆ ಗೊತ್ತುಮಾಡಿ ಒಂದೆರಡು ವರ್ಷವಾದರೂ ಅಲ್ಲಿ ಇನ್ನೂ ಯಾವ ಕಾರ್ಯಕ್ರಮವೂ ನಡೆಯುತ್ತಿಲ್ಲ. ಆದಷ್ಟು ಬೇಗ, ಈ ವರ್ಷವೇ ಆ ಕಾರ್ಯ ನಡೆಯುವಂತೆ ಏರ್ಪಾಡು ಮಾಡಬೇಕು, ವಿಳಂಬ ಮಾಡಲು ಅವಕಾಶ ಕೊಡಬಾರದೆಂದು ಹೇಳಲಪೇಕ್ಷಿಸುತ್ತೇನೆ.

ಇನ್ನು ಕಮ್ಯೂನಿಟಿ ಡೆವಲಪ್‌ಮೆಂಟ್ ಬ್ಲಾಕುಗಳಲ್ಲಿ ಇಂಡಸ್ಟ್ರಿಯಲ್ ಎಕ್ಸ್‌ಟೆನ್‌ಷನ್ ಆಫೀಸರುಗಳೆಂಬ ಅಧಿಕಾರಿಗಳಿದ್ದಾರೆ. ಇವರಿಗೆ ಬಾಕಿ ಅಧಿಕಾರಿಗಳಿಗಿಂತ ಹೆಚ್ಚಿನ ಸಂಬಳದ ಸ್ಕೇಲನ್ನು ಕೊಟ್ಟಿದ್ದಾರೆ. ಆದರೆ ನನ್ನ ಅನುಭವದಲ್ಲಿ ಇವರು ಮೂರು ಕಾಸಿನ ಕೆಲಸವನ್ನೂ ಮಾಡುತ್ತಿಲ್ಲ. ಆಯಾ ಬ್ಲಾಕುಗಳಿಗೆ ಇವರು ಬಂದು ಮೂರು ನಾಲ್ಕು ವರ್ಷಗಳಾಗಿದ್ದರೂ ಒಂದು ಹೊಸ ಉದ್ಯಮವನ್ನು ಸ್ಥಾಪನೆ ಮಾಡುವುದಕ್ಕೂ ಇವರ ಕೈಯಲ್ಲಾಗಿಲ್ಲ. ಆದಕಾರಣ ಈ ಹುದ್ದೆಗಳನ್ನಿಟ್ಟುಕೊಂಡೇನುಪ್ರಯೋಜನ ? ದೇಶದ ಈ ಕಷ್ಟ ಪರಿಸ್ಥಿತಿಯಲ್ಲಿ ಈ ಹಣ ಅನಾವಶ್ಯಕವಾಗಿ ಖರ್ಚಾಗುತ್ತಿದೆಯೆಂದು ವ್ಯಸನದಿಂದ ಹೇಳಬೇಕಾದ ಸಂದರ್ಭ ಬಂದಿದೆ. pottery, smithy, carpentry. ಈ ಕೆಲಸಗಳನ್ನು ಎಲ್ಲಿ ಸ್ಥಾಪನೆ ಮಾಡಿದರೂ ಇವಕ್ಕೆ ಗಿರಾಕಿ ಇರುತ್ತದೆ. ಏಕೆಂದರೆ ಜನರಿಗೆ ಬೇಕಾಗುತ್ತದೆ. ನಮ್ಮ ರಾಜ್ಯದ ದೌರ್ಭಾಗ್ಯವೋ ಏನೋ ನಮ್ಮಲ್ಲಿ ಅನೇಕ ಜನ ನಿರುದ್ಯೋಗಿಗಳಿದ್ದರೂ, ಅವರಲ್ಲಿಯೂ ನನ್ನ ಪ್ರಾಂತದಲ್ಲಿ ಮರ ಕುಯ್ಯುವವರು, ಮರಗೆಲಸ ಮಾಡುವವರು ಎಲ್ಲರೂ ಕೇರಳದವರೇ, ಇಲ್ಲಿಯವರಿಗೆ ಅವಕಾಶ ಸಿಕ್ಕುತ್ತಿಲ್ಲ. ಆದುದರಿಂದ carpentry ವಿಚಾರದಲ್ಲಿ ಹೆಚ್ಚು ಗಮನ ಕೊಟ್ಟು ಪ್ರತಿ ತಾಲ್ಲೂಕಿನಲ್ಲಿಯೂ ನೂರಾರು ಮಕ್ಕಳು ಈ ಕಸಬನ್ನು ಕಲಿಯಲು ಏರ್ಪಾಡು ಮಾಡಬೇಕೆಂದು ವಿನಯದಿಂದ ಮಾನ್ಯ ಶ್ರೀ ಮಲ್ಲಪ್ಪನವರನ್ನು

ಕೇಳಿಕೊಳ್ಳುತ್ತೇನೆ. ನಮ್ಮೂರಿನಲ್ಲಿ ಬಹಳ ಪ್ರಾಮುಖ್ಯವಾದ ಕಸಬು ಎಂದರೆ, ವಿಗ್ರಹಗಳನ್ನು ಮಾಡುವುದು. ಇದು ಬಹಳ ಸೂಕ್ಷ್ಮವಾದ ಕೆಲಸ, ಯಂತ್ರಗಳನ್ನು ಹಾಕಿಕೊಂಡು ಮಾಡುವ ಕೆಲಸವಲ್ಲ. ಬಹಳ ಪುರಾತನ ಕಾಲದಿಂದಲೂ ಅತ್ಯುತ್ತಮವಾದ ವಿಗ್ರಹಗಳನ್ನು ಮಾಡುವುದಕ್ಕೆ ಈ ಊರು ಪ್ರಸಿದ್ಧವಾದ ಸ್ಥಳ. ಅಲ್ಲಿ ಕೈಗಾರಿಕೆ ಟ್ರೈನಿಂಗ್ ಸ್ಕೂಲನ್ನು ಯಾವಾಗ ತೆರೆದರೋ ಆಗಿನಿಂದ ಈ ಜನರಿಗೆ ಹಿಂದೆ ಸಿಕ್ಕುತ್ತಿದ್ದ ಕೆಲಸ ಈಗ ಸಿಕ್ಕುತ್ತಿಲ್ಲ. ಅಲ್ಲಿ ಕೆಲಸಗಾರರಿಗೆ ಅಡ್ವಾನ್ಸ್ ಕೊಟ್ಟು ಲೋಹಗಳನ್ನೊದಗಿಸಿಕೊಟ್ಟರೆ ಅವರಿಂದ ಹೆಚ್ಚು ವಿಗ್ರಹಗಳನ್ನು ಮಾಡಿಸಿ ಅವನ್ನು ಬೆಂಗಳೂರು, ಮೈಸೂರಿನಲ್ಲಿರುವ ಸರ್ಕಾರಿ ಷೋ ರೂಮುಗಳಲ್ಲಿಟ್ಟು ಮಾರಾಟ ಮಾಡಲು ಅನುಕೂಲ ಮಾಡಿಕೊಟ್ಟರೆ ಈ ಕಸಬುದಾರರು ಉಪಕಾರವನ್ನು ಸ್ಮರಿಸುತ್ತಾರೆ. ದಯವಿಟ್ಟು ನಾಗಮಂಗಲದಲ್ಲಿರುವ ಟ್ರೈನಿಂಗ್ ಇನ್ಸ್ಟಿಟ್ಯೂಟಿನ ಮೂಲಕ ಉತ್ತೇಜನ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಸೊಸೈಟಿಗಳಲ್ಲಿ ಟ್ರೈನಿಂಗ್ ಕೊಡಬೇಕು. ಕೆಲವು ರೂರಲ್ ಕೈಗಾರಿಕೆ ಸೊಸೈಟಿಗಳಿವೆ ಅವುಗಳಿಂದ ಎಳ್ಳಷ್ಟು ಪ್ರಯೋಜನವಾಗುತ್ತಿಲ್ಲವೆಂದು ಸ್ವಂತ ಅನುಭವದಿಂದ ಹೇಳುತ್ತೇನೆ. ನಾನು ಈ ಸೊಸೈಟಿಗೆ ಕೆಲವು ಕಾಲ ಅಧ್ಯಕ್ಷನಾಗಿದ್ದೆ. ಆಗ ನಾನೆಷ್ಟು ಪ್ರಯತ್ನಪಟ್ಟರೂ ಅದು ಸರಿಯಾಗಿ ಕೆಲಸ ಮಾಡಬೇಕೆಂದು ಅದು ಸಾಧ್ಯವಾಗಲಿಲ್ಲ. ಇರತಕ್ಕ ಸನ್ನಿವೇಶದಿಂದ ಹೆಚ್ಚು ಕೆಲಸ ಮಾಡಲಾಗುತ್ತಿಲ್ಲ. ಆದುದರಿಂದ ಇವರಲ್ಲಿ ಸಾಕಷ್ಟು ಅನುಭವವಿಲ್ಲವೆಂದು ಕಾಣುತ್ತದೆ. ಆದಷ್ಟು ಇವನ್ನು ತೆಗೆದುಬಿಡುವುದು ಉತ್ತಮ. ಯಂಕ, ನಾಣಿ, ಸೀನ ಹತ್ತಾರು ಸಂಘಗಳಲ್ಲಿ ಸದಸ್ಯರಾಗಿರುತ್ತಾರೆ. ಆದುದರಿಂದ ತಾಲ್ಲೂಕು ಮಟ್ಟದಲ್ಲಿ ಇಂಥ ಕಸಬುಗಳಿಗೆ ಸಂಬಂಧಪಟ್ಟ ಒಂದೊಂದು ಸಂಘವನ್ನು ಸ್ಥಾಪನೆ ಮಾಡಿ ಅಂಥ ಸಂಘಗಳಿಗೆ ಉತ್ತೇಜನ ಅನುಕೂಲಗಳನ್ನು ಕೊಟ್ಟರೆ ಚೆನ್ನಾಗಿ ಕೆಲಸ ಮಾಡಬಹುದೆಂಬ ಅಭಿಪ್ರಾಯವಿದೆ. ಈ ಕಡೆ ಸರ್ಕಾರ ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ರುದ್ರಪ್ಪ (ಕಾಳಿ).—ಮಾನ್ಯ ಸಭಾಪತಿಗಳೆ, ಈ ದಿನ ನಮ್ಮ ಮುಂದಿರುವ ಬೇಡಿಕೆಗಳನ್ನು ಸಂಪೂರ್ಣವಾಗಿ ಸಮರ್ಥಿಸುತ್ತಾ ಕೆಲವು ವಿಷಯಗಳನ್ನು ಹೇಳಬಯಸುತ್ತೇನೆ. ಎರಡನೆಯ ಪಂಚವಾರ್ಷಿಕ ಯೋಜನೆಯಾಗಿ ಈಗ ಮೂರನೆಯದರಲ್ಲಿದ್ದೇವೆ. ಹೈದರಾಬಾದು ಕರ್ಣಾಟಕದ ವಿಷಯದಲ್ಲಿ ಹೇಳುವುದಾದರೆ, ಇಂದಿನ ಸರ್ಕಾರ ಅದರ ವಿಷಯದಲ್ಲಿ ಬಹಳ ಅಲಕ್ಷ್ಯದಿಂದ ನಡೆಯುತ್ತಿದೆ ಎಂದು ವಿಷಾದದಿಂದ ಹೇಳಬೇಕಾಗಿದೆ. ಎರಡು ಅಥವಾ ಮೂರನೆಯ ಯೋಜನೆಯಲ್ಲಿ ಅಲ್ಲಿ ಯಾವ ಮೇಜರ್ ಕೈಗಾರಿಕೆ ಅಥವಾ ಕಾಟೇಜ್ ಕೈಗಾರಿಕೆಯನ್ನು ತೆರೆಯುವುದಕ್ಕೆ ಸರ್ಕಾರ ಯಾವ ರೀತಿಯ ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲವೆಂದು ಹೇಳಬಯಸುತ್ತೇನೆ. ಗುಲ್ಬರ್ಗದಲ್ಲಿ ಸಿಮೆಂಟ್ ಕಾರ್ಖಾನೆಯನ್ನು ತೆರೆಯುವುದಕ್ಕೆ ಅನುಕೂಲವಾದ ಸಲಕರಣೆಗಳಿದ್ದರೂ ಅಲ್ಲಿ ತೆರೆದಿಲ್ಲ.

ಶ್ರೀ ಕೆ. ಮಲ್ಲಪ್ಪ.—ಷಹಾಬಾದ್‌ನಲ್ಲದೆ, ವಾಡಿ ಕಾರ್ಖಾನೆಗೆ ಲೈಸೆನ್ಸ್ ಕೊಟ್ಟಿದೆ.

ಶ್ರೀ ಎಸ್. ರುದ್ರಪ್ಪ.—ಮಾನ್ಯಮಂತ್ರಿಗಳು ಗುಲ್ಬರ್ಗಕ್ಕೆ ಬಂದಿದ್ದರು. ಆ ಜಿಲ್ಲೆಯಲ್ಲಿ ಲೈಮ್‌ಸ್ಟೋನ್ ಹೇರಳವಾಗಿದ್ದರೂ ಅದನ್ನು ಉಪಯೋಗ ಮಾಡಿಲ್ಲ. ಸಿಮೆಂಟ್ ಕಾರ್ಖಾನೆಗೆ ಬೇಕಾದ ಜಿಪ್ಸಮ್ ಚಿತಾಪುರ ತಾಲ್ಲೂಕಿನಲ್ಲಿ ಸಿಕ್ಕುತ್ತದೆ. ಇಷ್ಟು ಹೆಚ್ಚು raw materials ಇದ್ದರೂ ಸಿಮೆಂಟ್ ಕಾರ್ಖಾನೆಯನ್ನು ಕೂಡ ತೆರೆದಿಲ್ಲವೆಂದು ವಿಷಾದದಿಂದ ಹೇಳುತ್ತೇನೆ. ಚಿಂಚೋಲಿ ತಾಲ್ಲೂಕಿನಲ್ಲಿ fullers earth ಸಿಕ್ಕಿದೆ. ಸುಮಾರು ಏಳು ಲಕ್ಷ ಟನ್ನಷ್ಟು ಸಿಕ್ಕಬಹುದೆಂದು ರಷ್ಯದ ತಜ್ಞರು ಬಂದು ಹೇಳಿದ್ದಾರೆ. fullers earth ನ್ಯಾಷನಲ್ ಮಿನರಲ್. ಇದನ್ನು Oil refineryಗಾಗಿ ಉಪಯೋಗ ಮಾಡಬಹುದೆಂದೂ state exploit ಮಾಡಬಹುದೆಂದೂ ಹೇಳಿದ್ದಾರೆ. ಆದರೂ ಯಾವ ಕಾರ್ಯಕ್ರಮವನ್ನು ತೆಗೆದುಕೊಂಡಿಲ್ಲ. ಇದನ್ನು ರಾಜ್ಯ ಸರ್ಕಾರವೇ exploit ಮಾಡುತ್ತಾರೋ ಅಥವಾ ಖಾಸಗಿ ಜನರಿಗೆ ಕೊಡುತ್ತಾರೋ ಸ್ಪಷ್ಟವಾಗಿ ತಿಳಿಸಿಲ್ಲ. ರಾಷ್ಟ್ರೀಯ ಪ್ರಾಮುಖ್ಯತೆ ಈ ಮಿನರಲ್‌ಗೆ ಇದ್ದಮೇಲೆ state enterpricse ಆಗಿ ಮಾಡಬೇಕು. ರಾಜಕೀಯಕ್ಕೆ ಒಳಗಾಗಿ ಖಾಸಗಿ ಜನರಿಗೆ ಕೊಟ್ಟರೆ ಇಡೀ ಮೈಸೂರು ರಾಜ್ಯಕ್ಕೆ ಹಾನಿಯಾಗುತ್ತದೆ.

ಮೂರನೆಯದಾಗಿ, ಯಾದ್‌ಗಿರ್‌ನಲ್ಲಿ ಗಾಜಿನ ಕಾರ್ಖಾನೆಯನ್ನು ಮಾಡುವುದಕ್ಕೆ ಬೇಕಾದ ಕಚ್ಚಾ ಪದಾರ್ಥಗಳಿವೆ. ವಿಶಿಷ್ಟ ತರವಾದ ಕಲ್ಲುಗಳೂ, ಉಸುಕೂ ಇದೆ. ಆದರೂ ಅಲ್ಲಿ ಇದುವರೆಗೂ ಗಾಜಿನ ಕೈಗಾರಿಕೆ ಪ್ರಾರಂಭಿಸಲು ಸರ್ಕಾರ ಯಾವ ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ. ಖಾಸಗಿ ಜನರು ಲೈಸೆನ್ಸ್ ಕೇಳಿದ್ದಾರೆಂದು ಗೊತ್ತಾಗಿದೆ. ಇದುವರೆಗೆ ಕಾರ್ಖಾನೆಯನ್ನು ಸ್ಥಾಪನೆ ಮಾಡಲು ಅವರಿಗೆ ಪ್ರೋತ್ಸಾಹ ಕೊಡಲು ಯಾವ ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ.

Sri K. MALLAPPA.—Licence has to be given by the Government of India under the Industries Development and Regulation Act. Application has been sent to the Government of India and licence has not yet been given. Without the licence no factory can be started.

ಶ್ರೀ ಎಸ್. ರುದ್ರಪ್ಪ.—ಗುಲ್ಬರ್ಗ ಜಿಲ್ಲೆಯಲ್ಲಿ ಹೇರಳವಾಗಿ ಲೈಮ್‌ಸ್ಟೋನ್ ಸಿಕ್ಕುತ್ತದೆ, ಕ್ವಾರಿ ಸಹ ಇದೆ. ಹೈದರಾಬಾದ್ ಸರ್ಕಾರದವರು ಕೆಲವು ಖಾಸಗಿ ಕಂಪನಿಗಳಿಗೆ ಲೈಮ್‌ಸ್ಟೋನ್ ತೆಗೆಯುವ ಬಗ್ಗೆ ಗುಲ್ಬರ್ಗ ಜಿಲ್ಲೆಯಲ್ಲಿ 20 ವರ್ಷ ಲೀಸ್‌ಗೆ ಕೊಟ್ಟಿದ್ದಾರೆ. 5 ಮೈಲಿ ರೇಡಿಯಸ್‌ನಲ್ಲಿರುವುದನ್ನು ಬೇರೆ ಕಂಪನಿಯವರಿಗಾಗಲಿ ಅಥವಾ ಖಾಸಗಿ ಜನರು ಮುಂದೆ ಬಂದರೆ ಅವರಿಗಾಗಲಿ ಲೀಸ್‌ಗೆ ಕೊಡಬೇಕೆಂದು ಅಗ್ರೀಮೆಂಟಿನಲ್ಲಿದೆ. ಹಾಗೆ ಮಾಡದಿರುವುದರಿಂದ ಜನರಿಗೆ ಬಹಳ ತೊಂದರೆಯಾಗಿದೆ. ರೈತರಿಗೆ ಸಾರ್ವೆ ಕಟ್ಟುವುದಕ್ಕೆ, ಮನೆ ಕಟ್ಟುವುದಕ್ಕೆ ಸಹ ಸೌಲಭ್ಯ ದೊರೆಯದೆ ತೊಂದರೆಯಾಗಿದೆ. ಸರ್ಕಾರದವರು ಈ ವಿಷಯದಲ್ಲಿ ಸೂಕ್ತ ಕ್ರಮ ಕೈಗೊಂಡು ಇರುವ ತೊಂದರೆಯನ್ನು ನಿವಾರಣೆ ಮಾಡಬೇಕೆಂದು ಸೂಚಿಸುತ್ತೇನೆ. ಅದಲ್ಲದೆ ಮೊನ್ನೆ ತಾನೆ ಸರ್ಕಾರದವರು ಗುಲ್ಬರ್ಗ ಜಿಲ್ಲೆಯಲ್ಲಿ ಸ್ಟೋನ್ ಕ್ವಾರಿಯನ್ನು ಯಾರಿಗೂ ಲೀಸ್‌ಗೆ ಕೊಡಬಾರದೆಂದು ಹುಕ್ಕುಂ ಮಾಡಿದ್ದಾರೆ. ಈ ವಿಚಾರದಲ್ಲೇನುಮಾಡಿದರೆ ಅನುಕೂಲವೆಂಬುದನ್ನು ಸಂಬಂಧಪಟ್ಟ ಮಂತ್ರಿಗಳಿಗೂ ಮತ್ತು ಮುಖ್ಯ ಮಂತ್ರಿಗಳಿಗೂ ಹೇಳಿದ್ದೇನೆ. ಸಣ್ಣ ಸಣ್ಣವರು ಕೆಲವರಿಗೆ ಸಿಕ್ಕುವಂತೆ ಮೂರು ವರ್ಷಕ್ಕೆ ಅಥವಾ ಐದು ವರ್ಷಕ್ಕೊಂದುಸಲ ಹರಾಜು ಮಾಡಿ ಲೀಜ್‌ಗೆ ಕೊಡುವಂತೆ ಮಾಡಿದರೆ ಒಳ್ಳೆಯದೆಂದು ಹೇಳಿದರೂ ಆ ಬಗ್ಗೆ ಆರ್ಡರು ಮಾಡಿಲ್ಲ. ಈ ರೀತಿಯಿಂದ ಹೈದರಾಬಾದ್ ಕರ್ಣಾಟಕವನ್ನು ಅಲಕ್ಷ್ಯ ಮಾಡಿದ್ದಾರೆಂದು ಹೇಳ ಬಯಸುತ್ತೇನೆ.

Sri K. MALLAPPA.—The matter is pending in the Court.

ಶ್ರೀ ಎಸ್. ರುದ್ರಪ್ಪ.—ಮೂರನೆಯದಾಗಿ ರಾಯಚೂರಿನಲ್ಲಿ ಪ್ರೈವೇಟ್ ಸೆಕ್ಟಾರ್‌ನಲ್ಲಿ ಸ್ಪಿನಿಂಗ್ ಮಿಲ್ಲುಗಳನ್ನು ತೆರೆಯಬೇಕೆಂದು ಜನರು ಬಹಳ ಉತ್ಸಾಹದಿಂದ ಸುಮಾರು 5 ಲಕ್ಷ ರೂಪಾಯಿಗಳಷ್ಟು ಬಂಡವಾಳವನ್ನು ಸಂಗ್ರಹಿಸಿದ್ದಾರೆ. ಆದರೆ ಅವರಿಗೆ ಇದುವರೆಗೆ ಲೈಸೆನ್ಸ್ ಕೊಟ್ಟಿಲ್ಲ.

Sri K. MALLAPPA.— It is not correct. Licence has been given.

ಶ್ರೀ ಎಸ್. ರುದ್ರಪ್ಪ.—ಕೊಟ್ಟಿದ್ದಾರೆ. ಆದರೆ ಸರ್ಕಾರದವರು ಕೊಡುವ ಷೇರು ಬಂಡವಾಳವಾದ 10 ಲಕ್ಷ ರೂಪಾಯಿಗಳನ್ನು ಕೊಟ್ಟಿಲ್ಲ ಎಂದು ತಿಳಿದುಬಂದಿದೆ.

Sri B. D. JATTI.—Unless the people collect ten lakhs, Government will not be in the picture at all.

Sri S. RUDRAPPA.—But they have collected five lakhs.

Sri B. D. JATTI.—Yes. But they have to collect five lakhs more.

Sri S. RUDRAPPA.—They are going to collect five lakhs.

V. M. DEO.—A Textile Mill requires a capital of 75 lakhs. What is the use of giving five lakhs? That mill is not going to be established if only five lakhs is collected.

ಶ್ರೀ ಎಸ್. ರುದ್ರಪ್ಪ.—ಹೈದರಾಬಾದ್ ಕರ್ಣಾಟಕ ಬಹಳ ಹಿಂದುಳಿದಿದೆ. ಈ ವಿಷಯ ಸರ್ಕಾರಕ್ಕೆ ಗೊತ್ತಿದೆ. ರಾಯಚೂರು ಜಿಲ್ಲೆಯಲ್ಲಿ ಷೇರು ಬಂಡವಾಳ ಕೊಡುವುದರಲ್ಲಿ ಸ್ವಲ್ಪ ತೊಂದರೆಯಾಗಿದೆ. ತೀವ್ರವಾಗಿ ಅಲ್ಲಿ ಸ್ಪಿನಿಂಗ್ ಮಿಲ್ ಸ್ಥಾಪಿಸುವುದಕ್ಕೆ ಸರ್ಕಾರ ಕ್ರಮ ಕೈಕೊಳ್ಳಬೇಕೆಂದು ಬೇಡುತ್ತೇನೆ. ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಎರಡು ಸ್ಪಿನಿಂಗ್ ಮಿಲ್‌ಗಳನ್ನು ತೆರೆಯುವುದಕ್ಕೆ ಅವಕಾಶವಿದೆ. ಅದರಲ್ಲಿ ಒಂದು ಮಿಲ್ಲನ್ನಾದರೂ ರಾಯಚೂರು ಜಿಲ್ಲೆಗೆ ಕೊಡಬೇಕೆಂದು ಮನವಿ ಮಾಡುತ್ತೇನೆ.

ಬೀದರ್ ಡಿಸ್ಟ್ರಿಕ್ಟ್ ವಿಚಾರ ಹೇಳುವುದಾದರೆ ಅಲ್ಲಿ ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸಲು ಅಲ್ಲಿನ ಜನರು ಮುಂದೆ ಬಂದು ಸಾಕಾದಷ್ಟು ಷೇರು ಬಂಡವಾಳವನ್ನು ಕೂಡ ಸಂಗ್ರಹಿಸಿದ್ದಾರೆ. ಆದರೆ ಇದುವರೆಗೂ ಲೈಸೆನ್ಸ್ ಸಿಕ್ಕಿಲ್ಲ. ಮಾನ್ಯ ಮಂತ್ರಿಗಳೂ ಸಾಕಷ್ಟು ಪ್ರಯತ್ನ ಮಾಡಿದರು. ಆದರೂ ಸಿಕ್ಕಬೇಕಾದ ಲೈಸೆನ್ಸ್ ಸಿಕ್ಕಲಿಲ್ಲ. ಈ ವಿಷಯದಲ್ಲಿ ಹೇಳಬೇಕಾದರೆ ರಾಯಚೂರು ಜಿಲ್ಲೆಯ ಗಂಗಾವತಿಗೆ ಲೈಸೆನ್ಸ್ ಕೊಡಬೇಕಾದ್ದು ಕಾರಣಾಂತರದಿಂದ ಗೋರಿಬಿದನೂರಿಗೆ ಕೊಡಲ್ಪಟ್ಟಿತು. ಆದುದರಿಂದ ಸರ್ಕಾರ ಹೈದರಾಬಾದ್ ಪ್ರಾಂತ್ಯವನ್ನು ಅಲಕ್ಷ ಮಾಡಿದ್ದಾರೆಂದು ಹೇಳುತ್ತೇನೆ.

ಸರ್ಕಾರದವರು ಗುಲ್ಬರ್ಗ ಜಿಲ್ಲೆಯಲ್ಲಿ ಎ. ಇ. ಎಸ್. ಯೋಜನೆಯನ್ನು ಜಾರಿಗೆ ತರಲು ತೀರ್ಮಾನಿಸಿ 30 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅದಕ್ಕಾಗಿ ಧನ್ಯವಾದಗಳನ್ನರ್ಪಿಸಿ ಇಷ್ಟು ಹೇಳಲು ಅವಕಾಶ ಕೊಟ್ಟಿದ್ದಕ್ಕೆ ಅಧ್ಯಕ್ಷರಿಗೆ ವಂದಿಸುತ್ತೇನೆ.

†Sri D. PARAMESWARAPPA (Honnali).—Mr Speaker, Sir, it is true that during the post-independent period, the country has made some progress in the direction...........

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಕನ್ನಡದಲ್ಲೇ ಮಾತನಾಡಿ.

Sri D. PARAMESWARAPPA.—Members cannot be pinned down.....

Mr. SPEAKER.—I won't permit him. He has begun in English and he has to close in English.

Sri D. PARAMESWARAPPA.—In the economic growth of a country these two things are necessary—one is agriculture and the other is industry. These two factors are very important. It is very necessary that the Government has to pay much attention in the direction of industrialisation of the country. Many of the industries have grown up, both in the private sector and public sector. But, with regard to the policy that the Government is following, I must say that it is pursued in a haphazarded manner. It is for this reason. If you look to the working of the private industries and if you compare it with the working of the industries that are owned by the State, it is evident that the industries owned by the State are incurring heavy losses and that is due to the reason that the personnel that are administering those industries are lacking in technical knowledge and the manager or some agent that are posted are not technicians. They have no technical knowledge. Therefore, this is one of the main reasons, in my opinion, why the industries that are owned by the Government are incurring heavy losses.

Another point which I wish to bring to the notice of the Industries Minister is that the Government has not conducted an industrial survey in the State. We have enough raw materials in the country but most of the industries to-day are concentrated in cities, so much so, that the population in the rural parts is dwindling on account of this policy. Therefore, decentralisation in industries is very necessary and an industrial survey is very necessary. It is very necessary to establish industries where certain raw materials are available. In my own constituency—Honnalli Taluk—for example, there are so many law materials, cotton, sand, chillies, limenstone and clay. Where these raw materials are available in plenty, I think it is necessary to set up industries there, at the spot, instead of concentrating them in big cities, as a result of which, there is already depopulation in villages. In my opinion, if this policy is pursued, my apprehension is, many of the villages will be wiped out. Therefore, this factor has to be taken into consideration and industries have got to be decentralised.

Another thing is—in the method of maintenance of accounts, there is a remarkable difference between private owned industries and the State owned industries. There, the accounts are kept regularly and every year, they publish, what is called, the balance sheets. Here, in many of the industries, such a system is not followed, if I am correct.

(Sri D. Parameswarappa)

Publication of balance sheets at the end of every year is just to show the financial position of the industry.

Sri K. MALLAPPA.—We are placing before the House.

11-30 P.M.

Sri D. PARAMESWARAPPA.—Its working is evidenced by the report of the audit, accounts as well as Public Accounts Committee. Any way the working of the industries is not satisfactory.

Sri K. MALLAPPA.—Not at all. Only Sericulture.

Sri D. PARAMESWARAPPA.—At least you admit that the working of sericulture is not satisfactory.

Sri K. MALLAPPA.—It is not that it is not satisfactory but it is working under loss.

Sri D. PARAMESWARAPPA.—Sir, another point which I wish to stress upon is with regard to the mining industry. Because our country has large resources particularly with reference to my constituency, I would like to invite the attention of the Minister for Industries to the mining industry. You may be aware Mr. Speaker, Sir, that in my Taluk there is one gold mine called Kudurekonda Gold Mines. With regard to that Gold Mine, I am given to understand there is some history and it is available in the Office of the Director of Geology and Mining. I am told that one European called Young, was working in Gold Mines at Kudurekonda just about 50 or 60 years ago. For various reasons he had to wind up that enterprise and go to his native place. Thereafter the Government did not take any interest in that direction. Though it is evident that gold is available there and it actually forms a belt there.

Sri K. MALLAPPA.—In what quantity ?

Sri D. PARAMESWARAPPA.—You must make a survey. I am bringing this fact to your notice in order to evoke your interest and find out whether it is beneficial to the country if that work is taken up.

Sri K. MALLAPPA.—Now-a-day gold mines are running under loss.

Sri D. PARAMESWARAPPA.—If you work them properly, I do not think they will entail loss.

Sri K. MALLAPPA.—What about the Gold Price.

Sri D. PARAMESWARAPPA.—I do not think this rate will continue for ever. There is bound to be some change and fluctuation in the price.

Sri B. D. JATTI.—The international rate of gold per ounce is 167 and the open market rate is 367. When the difference is Rs. 200 how is it possible to run the mines with profit ?

Sri D. PARAMESWARAPPA.—Can you assure the House that this state of affairs will continue for ever.

Sri B. D. JATTI.—The international market rate has been decided and fixed by an international body in the year 1934. Unless that rate is revised we cannot decide it here and bring it down.

Sri D. PARAMESWARAPPA.—I am concerned with the difficulties of the Government. I am only bringing to the notice of the Government. It is left to their decision to find out whether it is desirable to work the mines or not. I only want the Minister for Industries to look it and if he feels that it is profitable, let him undertake this mining industry. That is a.l my submission. Lastly I suggest that in each taluk Industrial Schools may be opened in order to imbibe industrial bias in the minds of the people. It is also necessary to establish industrial estate on a small scale. With these few observations I conclude my speech.

† Sri THIRUMALADEVA RAYALU RANGADEVA RAYALU (Gangavati).—I support the demand which is presented in this House. I would like to point out certain essential industries which are required for the Raichur District. If Thungabhadra Project is fully developed about 5 lakhs of acres would be irrigated. Old tanks are being restored and new tanks are coming up. In order to feacilitate the agriculturists an implements factory is necessary. I hope, therefore, the Government will consider the question of establishing a small agricultural implements factory in that area. Secondly, the former Hyderabad State had proposed to establish two sugar factories in the Thungabadra Ayacut area, one at Kallur and another at Gangavati. Water has not yet reached Kallur and so the Kallur Sugar Factory will come up later on. So far as Gangavati Sugar Factory is concerned we thought of having it on a co-operative basis. We had collected about 4 lakhs of rupees shares. But on the advice of the Government due to some foreign exchange difficulty we had to give up that proposal. Government had recommended licence to be granted to a private party. Unfortunately he could not erect the factory there. One fine morning we came to know that the Government had recommended that licence to be given to some other sugar factory. So it is not the fault of ryots there. If you had consulted the ryots they would have collected the share amount. Even now if the Government gives us an assurance, I can assure you that within a year we can collect the share amount. Sir, license has been given for a Co-operative Spinning Mill in Raichur. Under the dry-*cum*-wet experiment, a fine variety of cotton is being grown there. About 4 lakhs of rupees has also been collected for this mill.

Sri B. D. JATTI.—On a point of clarification, Sir. The ex-M. L. A. who was taking the responsibility to collect the money did collect some money but ultimately did not succeed. He advised Government to give back the money. So, it is not on the advice of the Government that the money was given back.

Sri K. MALLAPPA.—The Hon'bel Member said that on the advice of the Government the Society gave up this enterprise. That is not correct. The ex-M. L. A. who was the sponsore of this Co-operative

(SRI K. MALLAPPA)

Society, was not able to collect the required capital. Therefore, he gave up the idea of starting a sugar factory on a co-operative basis.

Sri TIRUMALADEVA RAYALU RANGADEVA RAYALU.—We do not know about it. The Finance Minister who was the Chief Minister then, announced that due to foreign exchange difficulties, licence could not be given to the co-operative sugar factory and so it was given to a private person.

About the Co-operative Spinning Mill at Raichur, it is a backward area. I hope Government will have a soft corner for giving grant-in-aid for this mill. Then, there it a Shutter Factory at Thungabhadra Project which is a joint concern of Andhra and Mysore Governments. Why not our Government take it solely and take the full benefit of it ? I suggest that this may be done. I thank the Speaker for giving me an opportunity to speak a few words.

† ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ).—ಸ್ವಾಮಿ, ಈಗ ನಮ್ಮ ಮುಂದಿರತಕ್ಕ ಕೈಗಾರಿಕಾ ಇಲಾಖೆಯ ಬೇಡಿಕೆಗಳ ಬಗ್ಗೆ ನಾನು ನನ್ನ ಬೆಂಬಲ ನೀಡುತ್ತ ಈ ಇಲಾಖೆಯಲ್ಲಿರುವ ಹಲವಾರು ಲೋಪ ದೋಷಗಳನ್ನು ಈಗ ಸರ್ಕಾರದವರ ಗಮನಕ್ಕೆ ತರಲಚ್ಛಿಸುತ್ತೇನೆ.

ಈ ಇಲಾಖೆಯಲ್ಲಿ ಹಲವಾರು ಲೋಪದೋಷಗಳಿವೆ. ಈ ದಿವಸ ನಮ್ಮ ದೇಶದಲ್ಲಿರತಕ್ಕ ಜನಗಳಲ್ಲಿ ನೂರಕ್ಕೆ 80ರಷ್ಟು ಜನ ವ್ಯವಸಾಯದಿಂದಲೇ ಜೀವನ ನಡೆಸತಕ್ಕವರಾಗಿದ್ದಾರೆ. ಈ ಜನರ ಕಲ್ಯಾಣವನ್ನು ಸಾಧಿಸಲು ಈಗ ಭೂಮಿಯ ಮೇಲೆ ಬಿದ್ದಿರತಕ್ಕ ಒತ್ತಡ ಕಡಿಮೆಯಾಗಿ, ಅವರು ಬೇರೆ ಉದ್ಯೋಗಗಳನ್ನು ಕಲ್ಪಿಸಿಕೊಂಡು ಜೀವನ ಮಾಡಲು, ಅವರಿಗೆ ಬೇರೆ ಉದ್ಯೋಗಗಳನ್ನು ಕಲ್ಪಿಸಿಕೊಡಲು ಈಗ ನಮ್ಮ ಈ ಕೈಗಾರಿಕೆಗಳನ್ನು ಅಭಿವೃದ್ಧಿಮಾಡಬೇಕು. ಈ ಒಂದು ಮಾರ್ಗವನ್ನು ಬಿಟ್ಟರೆ ನಾವು ಅವರಿಗೆ ಬೇರೆ ಇನ್ನಾವ ಮಾರ್ಗದಲ್ಲೂ ಉದ್ಯೋಗಗಳನ್ನು ಕಲ್ಪಿಸಿಕೊಡಲು ಸಾಧ್ಯವಿಲ್ಲವೆಂಬ ಮಾತನ್ನು ನಾನೀಗ ಸರ್ಕಾರದವರಿಗೆ ಒತ್ತಾಯಪೂರ್ವಕವಾಗಿ ಹೇಳುತ್ತಿದ್ದೇನೆ. ಈಗ ನಮ್ಮಲ್ಲಿ ಏನಾಗಿದೆಯೆಂದರೆ—ನಮ್ಮ ದೇಶದಲ್ಲಿ ಯಾವ ಒಂದು ಕೈಗಾರಿಕೆಯನ್ನೇ ಆಗಲೀ—ಅದು ದೊಡ್ಡದಾಗಿರಲಿ ಚಿಕ್ಕದಾಗಿರಲಿ, ಎಲ್ಲ ಕೈಗಾರಿಕೆಗಳನ್ನೂ ಬೆಂಗಳೂರು ನಗರ ಒಂದರಲ್ಲೇ ಸ್ಥಾಪನೆ ಮಾಡಲು ಸರ್ಕಾರದವರು ಹೆಚ್ಚಿನ ಆಸಕ್ತಿಯುಳ್ಳವರಾಗಿದ್ದಾರೆಂತ ಹೇಳಿದರೆ ತಪ್ಪಾಗಲಾರದು. ಈ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವ ವಿಚಾರದಲ್ಲಿ ಸರ್ಕಾರದವರ ಗಮನ ಆ ಜಿಲ್ಲಾ ಹಾಗೂ ತಾಲ್ಲೂಕುಗಳ ಕಡೆಗೆ ಹರಿಯಬೇಕಾದುದು ಅಗತ್ಯ. ಏಕೆಂದರೆ ಈ ದಿವಸ ಹೆಚ್ಚು ಪ್ರಮಾಣದಲ್ಲಿ ಜನರು ವಾಸಮಾಡುತ್ತಿರುವ ಪ್ರದೇಶಗಳೆಂದರೆ ಅದು ತಾಲ್ಲೂಕು ಪ್ರದೇಶಗಳಲ್ಲಿ ಆದುದರಿಂದ ಆ ಪ್ರದೇಶದಲ್ಲಿರತಕ್ಕ ಜನರ ಆರ್ಥಿಕಾಭಿವೃದ್ಧಿಯಾಗಬೇಕಾಗಿದ್ದರೆ ಈ ಕೈಗಾರಿಕೆಗಳನ್ನು ಈ ಬೆಂಗಳೂರು ನಗರದಲ್ಲಿ ಕೇಂದ್ರೀಕೃತ ಮಾಡುತ್ತಿದ್ದರೆ ಅದು ಸಾಧ್ಯವಾಗುವುದಿಲ್ಲವೆಂದು ನಾನು ಹೇಳುತ್ತೇನೆ. ಆದುದರಿಂದ ಇನ್ನು ಮುಂದೆ ಸ್ಥಾಪಿಸಲಿರುವ ಕೈಗಾರಿಕೆಗಳನ್ನು ಜಿಲ್ಲಾ ಹಾಗೂ ತಾಲ್ಲೂಕು ಪ್ರದೇಶಗಳಿಗೆ ಹರಡಲು ಸರ್ಕಾರದವರು ಗಮನಕೊಡಬೇಕೆಂದು ಹೇಳುತ್ತೇನೆ.

ಇನ್ನು ಈ ಇಲಾಖೆಯಲ್ಲಿರತಕ್ಕ ಅನೇಕ ಸಮಸ್ಯೆಗಳ ಬಗ್ಗೆ ನಾನೀಗ ಒಂದೆರಡು ಉದಾಹರಣೆಗಳನ್ನು ಕೊಡಬೇಕೆಂದಿದ್ದೇನೆ. ಈಗಾಗಲೇ ಅನೇಕರು ಹೇಳಿದ್ದಾರೆ. ಈ ಹಿಂದೆ ಮಾತನಾಡಿದ ಶ್ರೀಮಾನ್ ಡಿ. ಎಂ. ಸಿದ್ದಯ್ಯನವರು 2,000 ಪವರ್ ಲೂಮುಗಳನ್ನು ಸ್ಯಾಂಕ್ಷನ್ ಮಾಡಿ ನೇಕಾರರಿಗೆ ಇವುಗಳ ಸೌಕರ್ಯವನ್ನೊದಗಿಸಿದ್ದಾರೆಂತ ಹೇಳಿದರು. ಆದರೆ ಈಗ ಮಾನ್ಯ ಮಂತ್ರಿಗಳು ಹೊಸದಾಗಿ ಸ್ಥಾಪಿಸಿರತಕ್ಕ ಹ್ಯಾಂಡ್ ಲೂಂ ವೀವರ್ಸ್ ಅಸೋಸಿಯೇಷನ್ನಿನಲ್ಲಿ ನಾನೂ ಸಹ ಒಬ್ಬ ಮೆಂಬರಾಗಿ ಅಲ್ಲಿ ಕೆಲಸಮಾಡುತ್ತಿದ್ದೇನೆ. ಆದರೆ ಈ ದಿವಸ ಸರ್ಕಾರದವರು ಈ ನೇಕಾರರ ವಿಚಾರದಲ್ಲಿ ಎಷ್ಟರಮಟ್ಟಿಗೆ ಅವರಿಗೆ ಸೌಕರ್ಯ ಕಲ್ಪಿಸಿಕೊಟ್ಟಿದ್ದಾರೆ ಎನ್ನತಕ್ಕ ಬಗ್ಗೆ ಒಂದು ವರದಿ ತಯಾರಿಸಿ—ಸರ್ಕಾರದವರು ನಮ್ಮ ಮುಂದಿಡತಕ್ಕ ಅಂಕಿ ಅಂಶಗಳನ್ನು ನಾವು ಇಲ್ಲೇನೋ ನೋಡಿ ಮೆಚ್ಚಿಕೊಳ್ಳಬಹುದು. ಆದರೆ ಕಾರ್ಯರೂಪದಲ್ಲಿ ಮಾತ್ರ ಏನೂ ಆಗುತ್ತಿಲ್ಲ. ಆದಾಗ್ಯೂ ಸರ್ಕಾರದವರು ಈ ದಿವಸ ಆ ನೇಕಾರರಿಗಾಗಿ ಲಕ್ಷಾಂತರ ರೂ.ಗಳನ್ನು ಚೆಲ್ಲುತ್ತಿದ್ದಾರೆ. ಆದರೆ ಆ ಹಣ ಯಾವ ರೀತಿ ವೆಚ್ಚವಾಗುತ್ತಿದೆಯೆಂಬುದರ ಕಡೆಗೆ ಸ್ವಲ್ಪಮಟ್ಟಿಗೆ ಸರ್ಕಾರದವರ ದೃಷ್ಟಿಯನ್ನು ಬೀರು

ವುದೊಳ್ಳೆಯದೆಂದು ನಾನು ಸೂಚಿಸಲಿಚ್ಛಿಸುತ್ತೇನೆ. ಹಾಲಿ ಈ ಕೈಗಾರಿಕಾ ಪೋರ್ಟ್‌ಫೋಲಿಯೊ ಜವಾಬ್ದಾರಿಯನ್ನು ವಹಿಸಿಕೊಂಡಿರತಕ್ಕ ಮಾನ್ಯ ಮಂತ್ರಿಗಳು ಈಗ ಸರ್ಕಾರಿ ಆಡಳಿತದಲ್ಲಿ ನಡೆಯುತ್ತಿರುವ ಅನೇಕ ಕೈಗಾರಿಕೆಗಳ ಸ್ಥಿತಿಗತಿಯನ್ನು ಬಹಳಮಟ್ಟಿಗೆ ಉತ್ತಮಗೊಳಿಸಿದ್ದಾರೆ. ಆದರೆ ಇನ್ನೂ ಇವುಗಳ ಆಡಳಿತವನ್ನು ಸ್ವಚ್ಛಗೊಳಿಸಬೇಕಾದ್ದಿದೆ ಎಂತ ಅವರು ಹೇಳುತ್ತಿದ್ದಾರೆ. ಆದರೆ ಈ ದಿವಸ ಈ ಸ್ಟೇಟ್ ಓನ್ಡ್ ಇಂಡಸ್ಟ್ರೀಸ್‌ಗಳಲ್ಲಿ ಅನೇಕ ಲೋಪದೋಷಗಳಿರುತ್ತವೆ. ನಾನಾಗಲೇ ತಿಳಿಸಿದ ಆ ಹ್ಯಾಂಡ್ ಲೂಂ ಕೈಗಾರಿಕೆ ಸಂಸ್ಥೆಯಲ್ಲಿ ಸಹ ಅನೇಕ ಲೋಪದೋಷಗಳಿವೆ. ಅಲ್ಲಿ 5-6 ಲಕ್ಷ ರೂ.ಗಳ ಮೆಷಿನರಿ ಬಂದು ಬಹಳ ದಿವಸಗಳಿಂದಲೂ ಹಾಗೇ ಇಡಲಾಗಿ ಬಿದ್ದಿದೆ. ಈ ದಿವಸ ನಮ್ಮ ರಾಜ್ಯದಲ್ಲಿ ಮೂರು ಸ್ಟೇಟ್ ಅಪೆಕ್ಸ್ ಬ್ಯಾಂಕುಗಳು ಇರುತ್ತವೆ. ಆ ಪೈಕಿ ಕಾಟನ್ ಅಪೆಕ್ಸ್ ಸೊಸೈಟಿ ಅಂತ ಒಂದಿದೆ. ಈಗ ನಮ್ಮಲ್ಲಿ ಮೂರು ಸ್ಟೇಟ್ ಅಪೆಕ್ಸ್ ಸೊಸೈಟಿಗಳು ಕೆಲಸ ಮಾಡುತ್ತಿವೆ. ಈ ಪೈಕಿ ಒಂದು ಕಾಟನ್ ಅಪೆಕ್ಸ್ ಸೊಸೈಟಿ. ಈ ಸೊಸೈಟಿಯ ಅಂಕಿ ಅಂಶಗಳನ್ನು ಹೊರತಂದಲ್ಲಿ ಅವರು ಅಲ್ಲಿ ಬಹಳ ಅವಹೇಳನವಾದಂಥ ಕೆಲಸಗಳನ್ನು ಮಾಡಿದ್ದಾರೆಂಬುದು ಗೊತ್ತಾಗುತ್ತದೆ. ಪ್ರೈಮರಿ ಸೊಸೈಟಿಯಿಂದ ಕಳುಹಿಸಿದ ಮಾಲುಗಳ ಬಗ್ಗೆ ಅಲ್ಲಿ ಲೆಖ್ಖವನ್ನೇ ಇಟ್ಟಿಲ್ಲ. ಸರ್ಕಾರ ಇಷ್ಟಪಡುವುದಾದರೆ ನಾನು ಇದೆಲ್ಲವನ್ನು facts and figures ಮೂಲಕ ರುಜುವಾತು ಮಾಡುತ್ತೇನೆ. ಹೀಗೆ ಈ ಸೊಸೈಟಿಗಳಿಂದ ನಮಗೆ ಯಾವ ಫಲವೂ ದೊರೆಯುತ್ತಿಲ್ಲ. ಈ ಬಾಬಿಗೆ ದುಡ್ಡನ್ನು ನಿರರ್ಥಕವಾಗಿ ವೆಚ್ಚಮಾಡಲಾಗುತ್ತಿದೆ. ನಾನು ಅಲ್ಲಿ ಅಡ್ವೈಸರಿ ಸಮಿತಿಯಲ್ಲಿ ಒಬ್ಬ ಮೆಂಬರಾಗಿದ್ದೇನೆ. ಈ ವಿಚಾರಗಳನ್ನು ನಾನು ಅನುಭವದಿಂದ ಹೇಳುತ್ತಿದ್ದೇನೆ. ಅಲ್ಲಿಯೂ ಸಹ ಈ ವಿಚಾರವಾಗಿ ಕೆಲವು ಸಬ್‌ಜೆಕ್ಟುಗಳನ್ನು ಚರ್ಚೆಗೆ ತರಬೇಕೆಂದಿದ್ದೆ. ಹೀಗೆ ಈ ಬಾಬಿನಲ್ಲಿ ಅನೇಕ ನ್ಯೂನತೆಗಳಿರುತ್ತವೆ. ಇವುಗಳ ಬಗ್ಗೆ ಮಾನ್ಯ ಮಂತ್ರಿಗಳು ಸೂಕ್ತ ಕಾರ್ಯಕ್ರಮ ಕೈಗೊಳ್ಳಬೇಕೆಂದು ಅವರಲ್ಲಿ ಪ್ರಾರ್ಥನೆಮಾಡಿಕೊಳ್ಳುತ್ತೇನೆ. ನಾನಿನ್ನು ಒಂದೆರಡು ವಿಚಾರಗಳನ್ನು ಮಾನ್ಯ ಮಂತ್ರಿಗಳಲ್ಲಿ ಅಧ್ಯಕ್ಷರ ಮೂಲಕ ಅರಿಕೆ ಮಾಡಿಕೊಳ್ಳಬೇಕಾಗಿದೆ. ಈಗ ಗ್ರಾಮಾಂತರ ಪ್ರದೇಶಗಳಲ್ಲಿ ನಡೆಯುತಕ್ಕ ಗೃಹ ಕೈಗಾರಿಕೆಗಳ ಆಡಳಿತವನ್ನು ಸಮಾಜ ಕಲ್ಯಾಣ ಶಾಖೆಗೆ ವರ್ಗಾಯಿಸಿರುತ್ತಾರೆ. ಆದರೆ ಅಲ್ಲಿ ತಯಾರಾಗತಕ್ಕ ಮಾಲುಗಳ-ಪದಾರ್ಥಗಳ ವಿಲೇವಾರಿಯನ್ನಾಗಲೀ ಅಥವಾ ಅವುಗಳಿಗೆ ಒಂದು ಸರಿಯಾದ ಬೆಲೆಯನ್ನಾಗಲಿ ವ್ಯವಸ್ಥೆಮಾಡಿಲ್ಲ. ಈ ದಿವಸ ಈ ಕೈಗಾರಿಕೆಗಳಲ್ಲಿ ಉತ್ಪಾದನೆಯಾದ ಸುಮಾರು 10-15 ಸಾವಿರ ರೂ. ಗಳ ಆರ್ಟಿಸಾನ್ ಪದಾರ್ಥಗಳು ಮಾರಾಟವಾಗದೆ ಅವು ಅಲ್ಲೇ ಬಿದ್ದು ಗೆದ್ದಲು-ನುಸಿ ಹಿಡಿಯುತ್ತಿದೆ. ಟೈಲರಿಂಗ್ ಸೆಕ್ಷನ್ನಿನಲ್ಲಿರತಕ್ಕ ಬಟ್ಟೆ ಬಹುಶಃ ಆ ಸೊಸೈಟಿಗಳು ಹುಟ್ಟಿದಾಗಿನಿಂದ ತಯಾರಾದದ್ದೆಲ್ಲ ಅಲ್ಲೇ ಬಿದ್ದು ಕೊಳೆಯುತ್ತಿದೆ. ಇಂಥ ಒಂದು ಅಸಡ್ಡೆ ಮನೋಭಾವದಿಂದ ದುಡ್ಡನ್ನು ಯಾರೂ ಖರ್ಚು ಮಾಡಬಾರದು. ಈ ದಿವಸ ಅಲ್ಲಿ ತಯಾರಾಗತಕ್ಕ ಮಾಲುಗಳೇನಿವೆ ಅವುಗಳನ್ನು ಖರ್ಚು ಮಾಡುವುದಕ್ಕೆ ಬೇಕಾದಷ್ಟು ಅವಕಾಶವಿದೆ ಈ ದಿವಸ ಸರ್ಕಾರಿ ಆಫೀಸುಗಳಲ್ಲಿ ಕೆಲಸಮಾಡುತ್ತಿರುವ ನಾಲ್ಕನೇ ದರ್ಜೆಯ ನೌಕರರಿಗೆ ಈಗ ಆ ಖಾದಿ ಬಟ್ಟೆಯನ್ನು ಕೊಂಡುಕೊಳ್ಳುತ್ತಿರುವಂತೆ ಇದನ್ನೂ ಕೊಳ್ಳಬಹುದು. ಇಂಥಾ ಒಂದು ವ್ಯವಸ್ಥೆಯೊಂದನ್ನು ಜಾಗ್ರತೆ ಮಾಡಬೇಕು. ಇಲ್ಲವಾದರೆ ಬಡಬೋರೇಗೌಡನ ದುಡ್ಡನ್ನು ಯಾವ ಒಂದು ವ್ಯವಸ್ಥೆಯೂ ಇಲ್ಲದೆ ಅಸಡ್ಡೆಯಿಂದ ಖರ್ಚುಮಾಡಿದ ಹಾಗಾಗುತ್ತದೆ.

ನಾನು ಮಾನ್ಯ ಕೈಗಾರಿಕಾ ಮಂತ್ರಿಗಳಿಗೆ ವೈಯಕ್ತಿಕವಾಗಿ ಅಭಿನಂದನೆಯನ್ನರ್ಪಿಸಬೇಕಾಗಿದೆ. ಹಾಸನ ಜಿಲ್ಲೆಯಲ್ಲಿ ಹೊಸದಾಗಿ Textile Mills ತೆಗೆಯುವುದರ ಬಗ್ಗೆ ವ್ಯವಸ್ಥೆ ಮಾಡುತ್ತಿದ್ದಾರೆ. ಇದಕ್ಕಾಗಿ ನಮ್ಮ ಜಿಲ್ಲೆಯ ಪರವಾಗಿ ಮಾನ್ಯ ಮಂತ್ರಿಗಳನ್ನು ಅಭಿನಂದಿಸುತ್ತೇನೆ.

ಯಾವ ಯಾವ ಜಿಲ್ಲೆಯಲ್ಲಿ ಏನೇನು ಕಚ್ಚಾ ಪದಾರ್ಥಗಳು ಸಿಗುತ್ತವೆ, ಯಾವ ಯಾವ ಕೈಗಾರಿಕೆಗಳನ್ನು ಅಲ್ಲಿ ಸ್ಥಾಪಿಸಬೇಕು ಎಂಬುದಕ್ಕೆ ಅಂಕಿಅಂಶಗಳನ್ನು ತರಿಸಿದರೆ ಉತ್ತಮ. ಕೈಗಾರಿಕಾ ಡೈರೆಕ್ಟರ್ ಅಥವಾ ಡೆಪ್ಯುಟಿ ಡೈರೆಕ್ಟರ ಹತ್ತಿರ ಹೋಗಿ ವಿಚಾರಿಸಿದರೆ ಈ ವಿಚಾರದಲ್ಲಿ ಅವರಿಗೆ ಮಾಹಿತಿಯೇ ಇರುವುದಿಲ್ಲ. ಹೊಳೇನರಸೀಪುರದಲ್ಲಿ mineral ore ಹೇರಳವಾಗಿ ಸಿಕ್ಕುತ್ತದೆಂದು ಅನೇಕರು ಹೇಳುತ್ತಿದ್ದಾರೆ. ಇದರ ವಿಚಾರ ಕೈಗಾರಿಕಾ ಇಲಾಖೆಯಲ್ಲಿ ಏನೂ ತಿಳಿಯದೆ ಭೂಗರ್ಭಶಾಸ್ತ್ರ ಇಲಾಖೆಗೆ ಹೋಗಿ ವಿಚಾರ ಮಾಡಬೇಕಾಯಿತು. ತಜ್ಞರ ಸಲಹೆಯಿಲ್ಲದೆ ಖಾಸಗಿಯವರು ಸಹ ದುಡ್ಡನ್ನು ಚೆಲ್ಲುವುದಕ್ಕೆ ಮುಂದೆ ಬರುವುದಿಲ್ಲ. ಆದುದರಿಂದ ಈ ಬಗ್ಗೆ ಮೈಸೂರು ದೇಶದಲ್ಲಿ ಅಂಕಿಅಂಶಗಳನ್ನು ಸಂಗ್ರಹಿಸಿ ಇಡಬೇಕೆಂದು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

ನನ್ನ ಸ್ವಂತ ಕ್ಷೇತ್ರದ ವಿಷಯವಾಗಿ ಒಂದು ಸಣ್ಣ ವಿಷಯವನ್ನು ಈ ಸಭೆಯಲ್ಲಿ ಕೇಳಲು ಸ್ವಲ್ಪ ಅನುಮಾನಪಟ್ಟಿದ್ದೆ. ಈಗ ಅದನ್ನು ಹೇಳುತ್ತೇನೆ. ನಮ್ಮ ತಾಲ್ಲೂಕಿನಲ್ಲಿ, ನಮಗೆ ದೊರೆತಿರುವ ಅಂಕಿಅಂಶಗಳ ಪ್ರಕಾರ ಒಳ್ಳೆಯ mineral ore ಸಿಕ್ಕುತ್ತದೆ. It is rich in mineral deposits. ಅಲ್ಲಿಯ ಜನತೆ ತಮ್ಮ ಹತ್ತಿರ ಬಹಳ ಹೆಚ್ಚಿನ ಒತ್ತಾಯ ಹಾಕಿದ್ದಾರೆ. ಯಾವುದಾದರೂ

(ಶ್ರೀ ಎಚ್. ಡಿ. ದೇವೇಗೌಡ)

ಒಂದು ಕೈಗಾರಿಕೆಯನ್ನು ಮಾಡುವ ಬಗ್ಗೆ ಸರ್ಕಾರ ವ್ಯವಸ್ಥೆ ಮಾಡಬೇಕು. ಮಾನ್ಯ ಮಂತ್ರಿಗಳು ಬಂದಾಗ ತೋರಿಸಿದ್ದೇನೆ. ಮಾನ್ಯ ಸಚಿವೆಯರಾದ ಯಶೋಧರಮ್ಮನವರಿಗೂ ಗೊತ್ತಿದೆ. ನಾಲ್ಕೈದು ಸಾವಿರ ಜನ ಹರಿಜನರು ಯಾವ ಉದ್ಯೋಗವೂ ಇಲ್ಲದೆ ಊಟಕ್ಕೆ ತೊಂದರೆ ಪಡುತ್ತಿದ್ದಾರೆ. ಹಾಸನ ಜಿಲ್ಲೆಯಲ್ಲಿ ಅನೇಕ ತರಹ ಕೈಗಾರಿಕೆಗಳನ್ನು ಮಾಡುವುದಕ್ಕೆ ಸಾಧ್ಯವಿದೆ. Asbestos industry ಮತ್ತು ಸಿಮೆಂಟ್ ಕಾರ್ಖಾನೆ ಪ್ರಾರಂಭ ಮಾಡಬಹುದೆಂಬ ಭಾವನೆಯಿದೆ. ಸಿಮೆಂಟ್ ತಯಾರಿಸಲು ಮರಳು ಸಿಕ್ಕುತ್ತದೆ, ಸುಣ್ಣ ಸಿಕ್ಕುತ್ತದೆ, ನೀರಿನ ವ್ಯವಸ್ಥೆ ಇದೆ, ಕಾರ್ಮಿಕರು ಸಿಕ್ಕುತ್ತಾರೆ, ವಿದ್ಯುಚ್ಛಕ್ತಿ ಇದೆ, ಯಾವುದೇ ತರಹ ಸೌಕರ್ಯ ಬೇಕಾದರೂ ಇದೆ.

ಶ್ರೀ ಕೆ. ಮಲ್ಲಪ್ಪ.—ಅಲ್ಲಿ ಸುಣ್ಣಕಲ್ಲು ಸಿಕ್ಕುವುದಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಅಲ್ಲಿ ಸುಣ್ಣಕಲ್ಲು ಸಿಕ್ಕುತ್ತದೆ ಆದರೆ ಸಿಮೆಂಟ್ ತಯಾರಿಸುವುದಕ್ಕೆ ಅದು ಸರಿಯಾಗಿದೆಯೋ ಇಲ್ಲವೇ ಎನ್ನುವುದನ್ನು ತಜ್ಞರಿಗೆ ಬಿಡುತ್ತೇನೆ.

ಯಾವುದಾದರೂ ಕೈಗಾರಿಕೆಯನ್ನು ಮಾಡುವುದರ ಬಗ್ಗೆ ಸರ್ಕಾರ ಗಮನಹರಿಸಬೇಕು. ಹೊಳೆನರಸೀಪುರ ತಾಲ್ಲೂಕಿನಲ್ಲಿ ಒಂದು ಕೈಗಾರಿಕೆಯನ್ನು ಸ್ಥಾಪನೆಮಾಡಿ ಆ ಭಾಗದ ಜನತೆಗೆ ಜೀವನಕ್ಕೆ ಮಾರ್ಗ ಮಾಡಿಕೊಡಬೇಕೆಂದು ಒತ್ತಾಯಪೂರ್ವಕವಾಗಿ ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಹಾಸನ ಜಿಲ್ಲೆಯಲ್ಲಿ ಒಂದು cold storage plant ಹಾಕಿಕೊಡುತ್ತೇವೆಂದು ಒಂದುಸಲ ಹೇಳಿದಿರಿ. ಅಲ್ಲಿ ಆಲುಗಡ್ಡೆ ಹೆಚ್ಚಾಗಿ ಬೆಳೆಯುತ್ತಾರೆ. ಅವರ ಬೆಲೆ ಕಡಮೆಯಾದ ಕಾಲದಲ್ಲಿ cold storage ನಲ್ಲಿಟ್ಟು ಒಳ್ಳೆಯ ದರ ಬಂದಾಗ ಮಾರುವುದಕ್ಕೆ ಅವಕಾಶ ಕಲ್ಪಿಸಿಕೊಡಬೇಕು ಎಂದು ಪ್ರಾರ್ಥನೆ ಮಾಡುತ್ತೇನೆ.

ಹಾಸನ ಇಂಪ್ಲಿಮೆಂಟ್ಸ್ ಕಾರ್ಖಾನೆಯಲ್ಲಿ ನಷ್ಟವಾಗುತ್ತ ಇದ್ದುದನ್ನು ತಪ್ಪಿಸಿ ಆ ಕಾರ್ಖಾನೆಯನ್ನು ಅಭಿವೃದ್ಧಿಪಡಿಸಲು ಕ್ರಮ ತೆಗೆದುಕೊಂಡದ್ದು ಸ್ವಾಗತಾರ್ಹ. ಈಗಿನ ತುರ್ತುಪರಿಸ್ಥಿತಿಯಲ್ಲಿ ಶಸ್ತ್ರಾಸ್ತ್ರಗಳನ್ನು ತಯಾರು ಮಾಡುವುವಕ್ಕೆ ಕೂಡ ವ್ಯವಸ್ಥೆ ಮಾಡಬಹುದು. ಇದರ ಜೊತೆಗೆ ಸಣ್ಣ ಟ್ರಾಕ್ಟರುಗಳನ್ನು ತಯಾರು ಮಾಡುವ ಬಗ್ಗೆ ಸರ್ಕಾರ ಒಂದು ಯೋಜನೆಯನ್ನು ಇಟ್ಟುಕೊಂಡಿದೆ. ಅದಕ್ಕೂ ಅಲ್ಲಿ ಅವಕಾಶಮಾಡಿಕೊಡಬಹುದು. ಈ ಕಾರ್ಖಾನೆಯನ್ನು ಉತ್ತಮಪಡಿಸಿದರೆ ಕೆಲವರಿಗೆ ಉದ್ಯೋಗವನ್ನು ದೊರಕಿಸಿಕೊಟ್ಟಹಾಗೆ ಆಗುತ್ತದೆ.

ಮಡಕೇರಿಯಲ್ಲಿ ಒಂದು ವರ್ಕ್‌ಷಾಪ್ ಇಟ್ಟುಕೊಂಡಿದ್ದೀರಿ. ನಿಮ್ಮ ಅಂಕಿಅಂಶಗಳ ಪ್ರಕಾರ ಅಲ್ಲಿ ನಷ್ಟವಾಗುತ್ತಿದೆ. ಅದರ ಆಡಳಿತ ಬಹಳ ಕೆಳದರ್ಜೆಗೆ ಹೋಗಿದೆ ಎಂದು ಹೇಳಬಹುದು. ನನ್ನ ಸ್ವಂತ ಅನುಭವವನ್ನು ನಿಮ್ಮ ಮುಂದೆ ಇಡುತ್ತೇನೆ. N.E.S. ಜೀಪ್ ಒಂದನ್ನು ರಿಪೇರಿಗೆ ಕಳುಹಿಸಿಕೊಟ್ಟಿದ್ದರು. ಅದಕ್ಕೆ 2,600 ರೂಪಾಯಿ ಛಾರ್ಜು ಮಾಡಿದರು. ಅದನ್ನು ತಂದ 20 ದಿವಸಗಳೊಳಗಾಗಿ ಪುನಃ ಕೆಟ್ಟುಹೋಯಿತು. ಹೀಗಾದರೆ ಇದರ inference ಏನು ಎಂದು ನೀವೇ ಊಹಿಸಬಹುದು. ಇಂಥ ವರ್ಕ್‌ಷಾಪ್‌ಗಳನ್ನಿಟ್ಟುಕೊಳ್ಳುವ ಬದಲು ಅದನ್ನು ಮುಚ್ಚಿ ಶ್ರೀ ಎ. ಜಿ. ರಾಮಚಂದ್ರರಾಯರ ಕಮಿಟಿಯವರು ಹೇಳಿರುವಂತೆ ಬೆಂಗಳೂರು ಸೆಂಟ್ರಲ್ ವರ್ಕ್‌ಷಾಪ್‌ಗೆ ಅದನ್ನು ಸೇರಿಸಬಹುದು.

ನಮ್ಮ ತಾಲ್ಲೂಕಿನಲ್ಲಿ ಯಾವುದಾದರೂ ಒಂದು ಕೈಗಾರಿಕೆಯನ್ನು ಪ್ರಾರಂಭಮಾಡುವ ಬಗ್ಗೆ ಆದಷ್ಟು ಜಾಗ್ರತೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†Sri J. P. SARVESH (Serum).—In supporting the demand that is before the House, I would like to say a few words about Gulbarga Division area. It has been brought to the notice of Government several times that this area is very backward and needs special attention to bring it to the level of other areas. Unfortunately the Government have not done anything during the last 5 or 6 years. There is unemployment which is growing and the Government are not able to give any kind of employment and the people are forced to run away to Bombay and other big cities of other States to get employment. In the First or the Second Plan or even in the Third Plan, the Government have

not started any industry in Gulbarga Division in the Public Sector. They can start particularly cement factory. Why should we encourage Shahabad A. C. C. Factory ? It is a private institution managed by Private businessman and those people do not give any kind of employment to local people. They bring people from Kerala and Northern India. We are not against anybody coming there. But our grievance is that local people do not get any kind of employment. It is, therefore, necessary that Government should start factory in the public sector so that local people may get employment. We can start several cement factories either in Shahabad or Wadi or at Serum. I want to tell something about Shahabad stone quarry. Some years ago a big businessman started Shahabad Stone quarry. They have monopolised with the result that no other local people would start any quarry. They say that the previous Hyderabad Government had given them lease to quarry stones on a condition that nobody could start business within five miles radius. They are thus preventing the local people to come forward and start that business. It is necessary that the monopoly of 5 miles radius which the quarry owners are claiming should be removed, since no such privilege has been given by the Hyderabad Government so that local people could come forward and take up this work.

Sir, regarding Fuller's earth, it is availble in plenty in Chincholi. Even the Russian experts who came there said that it is the best and nowhere in the world such earth is available. Why should not Government start this industry in the Public Sector ? We should not encourage individual and private sector. We are a socialist society and we want to build a Socialist Society. It is, therefore, necessary that we should take up industries in the Public Sector. The Fuller's earth industry needs little amount and therefore it can easily be started in the public sector.

I strongly feel that Government should start this industry in public sector. In Gulburga, Government can think of starting small scale industries, like iron foundry, wire industry, metal industry, tiles industry, etc. There is a Small Scale Industries Board. There is nobody from Hyderabad Karnatak represented on this Board. We are not very particular that there should be somebody from Hyderabad Karnatak represented on this Board but what I mean to say is, the members who are on the Board should have thought of this area which is very backward and recommended the starting of small scale industries in Hyderabad Karnatak area. Government should immediately think of conducting a techno-economic survey of the area and see that this area is well developed and brought to the level of other areas.

12-00 NOON

ಶ್ರೀ ಗೋಪಾಲ ಸಾಲಿನ್ನ (ಮೂಡಬಿದರೆ).—ಸನ್ಮಾನ್ಯ ಅಧ್ಯಕ್ಷರೆ, ಕೈಗಾರಿಕೆಗೆ ಸಂಬಂಧ ವಾದ ಬೇಡಿಕೆಗಳನ್ನು ನಾವು ಸಮರ್ಥಿಸದೇ ಇದ್ದರೂ ಈ ಸಭೆಯವರೇನೋ ಅಂಗೀಕಾರ ಮಾಡು ತ್ತಾರೆ. ಇಲ್ಲಿರುವ ಬೇಡಿಕೆಗಳನ್ನು ನೋಡುವಾಗ ಅಪಾರವಾದ ಹಣವೇನೋ ಕೈಗಾರಿಕೆಯ ಇಲಾಖೆಗಳಿಗಾಗಿ ಖರ್ಚಾಗುತ್ತದೆ ಮತ್ತು 'ಇಂತಹ ಕೈಗಾರಿಕೆಗಳೇನೋ ಅಭಿವೃದ್ಧಿಯಾಗಬೇಕು

(ಶ್ರೀ ಗೋಪಾಲ ಸಾರೆನ್ನ)

ಆದರಿಂದ ಮಹತ್ವವಾದ ಮೆಷಿನರಿಗಳು ತಯಾರಾಗಬೇಕು ಎನ್ನುವ ಆಸೆಯೇನೋ ನ್ಯಾಯವಾಗಿದೆ. ಆದರೆ ಇದನ್ನು ಕೂಲಂಕಷವಾಗಿ ಪರಿಶೀಲಿಸಿ ನೋಡುವಾಗ ಈ ದೇಶದ ಜನತೆಗೆ ಸಾಕಾಗುವಷ್ಟು ಮತ್ತು ರಾಷ್ಟ್ರಕ್ಕೆ ಬೇಕಾಗುವಷ್ಟು ಉತ್ಪನ್ನಗಳು, ಅಷ್ಟೇನೂ ಪರಿಣಾಮಕಾರಿಯಾಗಿ ಆಗಿಲ್ಲ. ನಾವು ಎಷ್ಟು ಹಣವನ್ನು ಇನ್‌ವೆಸ್ಟ್ ಮಾಡುತ್ತಿದ್ದೇವೋ ಅದಕ್ಕೆ ತಕ್ಕಷ್ಟು ಪ್ರತಿಫಲ ಸಿಗುತ್ತಿಲ್ಲ ಎನ್ನುವುದನ್ನು ಎಲ್ಲರೂ ಒಪ್ಪಬೇಕಾಗಿದೆ. ಇದಕ್ಕೇನು ಕಾರಣ ಎನ್ನುವ ವಿಷಯಗಳನ್ನು ಸ್ವಲ್ಪ ಪರಿಶೀಲಿಸುವುದು ಅತ್ಯಗತ್ಯ. ಅನೇಕ ವಿಷಯಗಳನ್ನು ನೋಡುವಾಗ ನಮ್ಮ ಯೋಜನೆಗಳಿಗಾಗಿ ಹಾಕಿಕೊಂಡಿರುವ ಹಣವೆಲ್ಲ ಹೆಚ್ಚಾಗಿ ಸಿಬ್ಬಂದಿಗಳಿಗಾಗಿಯೂ, ದುಂದು ವೆಚ್ಚಗಳಿಗಾಗಿಯೂ ಮತ್ತಿತರ ರೂಪದಲ್ಲಿಯೂ ಖರ್ಚಾಗುತ್ತಿದೆ. ಆದರೆ ಇದರಿಂದಾಗುವ ಪರಿಣಾಮ, ಇದರಿಂದ ಆಗುವ ಉತ್ಪನ್ನಗಳು ಆಗುತ್ತಿರುವುದನ್ನು ನೋಡಿದರೆ ಅಷ್ಟೇನೂ ಸಮಾಧಾನಕರವಾಗಿ ಆಗಿಲ್ಲ ಎನ್ನುವುದು ತಿಳಿದು ಬರುತ್ತದೆ. ಅಷ್ಟು ಮಾತ್ರವಲ್ಲ, ಆಡಳಿತದ ದೃಷ್ಟಿಯನ್ನು ನೋಡಿದರೆ, ಅಷ್ಟು ಚೆನ್ನಾಗಿಲ್ಲ ಎನ್ನುವುದನ್ನು ಪ್ರತಿಯೊಬ್ಬರ ಅನುಭವದಿಂದಲೂ ನಾವು ತಿಳಿಯುತ್ತೇವೆ. ಈ ಇಲಾಖೆಯ ಆಡಳಿತವನ್ನು ವಿಮರ್ಶಿಸಿ ನೋಡಿದರೆ, ಎಷ್ಟೋ ಮಂದಿ ಡೈರೆಕ್ಟರುಗಳು, ಅಸಿಸ್ಟೆಂಟ್ ಡೈರೆಕ್ಟರುಗಳು, ಮತ್ತು ಇತರ ಅಧಿಕಾರಿಗಳಾಗಿ ನೇಮಿಸಲ್ಪಡತಕ್ಕವರು ಬೇರೆ ಬೇರೆ ರೆವಿನ್ಯೂ ಇಲಾಖೆಯಿಂದ ಬಂದಿರತಕ್ಕವರಾಗಿರುತ್ತಾರೆ. ಇವರಿಗೆ ಕೈಗಾರಿಕೆಯ ವಿಷಯ, ಟೆಕ್ನಿಕಲ್ ವಿಷಯ ಅಷ್ಟಾಗಿ ಗೊತ್ತಿರುವುದಿಲ್ಲ. ಕೈಗಾರಿಕಾ ಇಲಾಖೆಗೆ ಕೈಗಾರಿಕೆಯಲ್ಲಿ ಅನುಭವವಿರುವವರು ಕೈಗಾರಿಕೆಯ ಆಡಳಿತದಲ್ಲಿಯೇ ಇರತಕ್ಕವರು ಬಂದಿದ್ದಾದರೆ, ಕೈಗಾರಿಕೆಗಳು ಚೆನ್ನಾಗಿ ಲಾಭದಾಯಕವಾಗಿ ಅಭಿವೃದ್ಧಿಯಾಗುತ್ತದೆ ಎಂದು ನಮ್ಮೆಲ್ಲರ ಅಭಿಪ್ರಾಯ. ಕೈಗಾರಿಕೆಯ ಸಂಬಂಧವಾಗಿ ಅನುಭವವಿರುವ ಉತ್ತಮ ಆಡಳಿತದಾರರು ಬಂದಿದ್ದಾದರೆ, ಕೈಗಾರಿಕಾ ರಣರಂಗದಲ್ಲಿ ಏನು ತೊಡಕುಗಳು ಬಂದರೂ ಅವನ್ನು ಪರಿಹಾರ ಮಾಡಲು ಅನುಕೂಲವಾಗುತ್ತದೆ; ಮತ್ತು ನಮ್ಮ ಪರಿಸ್ಥಿತಿಗೆ ತಕ್ಕಂತಹ ಉತ್ಪಾದನೆಗಳನ್ನು ಮಾಡಲು ಅನುಕೂಲವಾಗುವಂತಹ ಆವಶ್ಯಕ ಪದಾರ್ಥಗಳನ್ನು ಉತ್ಪನ್ನ ಮಾಡಬಹುದು. ಇದರಲ್ಲಿಯೂ ನಿಜವಾಗಿ (Industrial and Technical Staff) ಅನುಭವವುಳ್ಳ ಸಿಬ್ಬಂದಿಯವರನ್ನು ಕೈಗಾರಿಕೆಗಳಲ್ಲಿ ತರುವುದು ಬಹಳ ಅವಶ್ಯವಾಗಿದೆ. ಕೈಗಾರಿಕಾದಾರರಿಗೆ ಇದರಿಂದ ಪರಿಣಾಮಕಾರಿಯಾದ ಲಾಭವೂ ಸಿಗುತ್ತದೆ ಎನ್ನುವನ್ನು ಸರ್ಕಾರ ಗಮನಿಸಬೇಕು. ಇನ್ನು ಹಳ್ಳಿಗಳಲ್ಲಿರುವ ಸರಿಯಾದ ಸಹಾಯ ಸಲಕರಣೆಗಳನ್ನು ಒದಗಿಸದೆ ಇರುವಂತಹ ನಿದರ್ಶನಗಳೂ ಇವೆ. ಅವುಗಳನ್ನು ವಿಮರ್ಶೆಮಾಡಿ ನೋಡುವಾಗ ಯಾವ ಉದ್ದೇಶಕ್ಕಾಗಿ ಸರ್ಕಾರ ಹಣ ವಿನಿಯೋಗವಾಗಬೇಕೆಂದು ಕೊಟ್ಟಿದೆಯೋ ಆ ಉದ್ದೇಶಕ್ಕೆ ಸರಿಯಾಗಿ ವಿನಿಯೋಗವಾಗದೆ ಅಲ್ಲಲ್ಲಿ ಬ್ಯಾಂಕು ಠೇವಣಾತಿಯಾಗಿ ಉಳಿತಾಯಗಳು ಇವೆಯೆಂದು ದೂರುಗಳು ಬರುತ್ತಿರುವುದನ್ನು ನಾವು ಕಾಣಬಹುದು. ಉದಾಹರಣೆಗಾಗಿ Coir Board, ಗ್ರಾಮಾಂತರ ಕೈಗಾರಿಕೆಗಳು, ಚರ್ಮದ ಕೆಲಸಗಾರರ ಸಂಘಗಳು, ಇನ್ನಿತರ ಹಲವು ಸಹಕಾರ ಸಂಘಗಳಿಗೆ ಸಾಲ ಅಥವಾ ಸಹಾಯಧನದ ರೂಪದಲ್ಲಿ ಅಪಾರ ಹಣಕಾಸನ್ನು ಒದಗಿಸಿದ್ದಾರೆ. ಇದಕ್ಕಾಗಿ ಕೆಲವು ಲಕ್ಷಾಂತರ ರೂಪಾಯಿಗಳನ್ನು ಕೊಟ್ಟಿರುವುದು ಖರ್ಚಾಗದೆ ಅಲ್ಲಿಯೇ ಹಾಗೆಯೇ ಉಳಿದಿದೆ. ಇನ್ನೂ ಕೆಲವು ಉತ್ತಮ ಸಂಸ್ಥೆಗಳಿಗೆ ಕೂಡ ಹಣ ಕೊಟ್ಟಿದ್ದಾರೆ. ಮರದ ಕೆಲಸಕ್ಕಾಗಿ, (Smithy) ಸ್ಮಿತಿ ಕೆಲಸಕ್ಕಾಗಿ ಹಾಗೂ ಇನ್ನಿತರ ಕೈಗಾರಿಕೆ ಕೆಲಸಗಳಿಗಾಗಿ ಹಣವಿದ್ದರೂ ಕೂಡ ಸಕಾರಣಗಳಿಂದಾಗಿ ಉಪಯೋಗವಾಗದೇ ಇರುವಂತಹ ನಿದರ್ಶನಗಳು ಎಷ್ಟೋ ಇವೆ. ಅದೂ ಅಲ್ಲದೆ ಎಷ್ಟೋ ಸಹಕಾರ ಸಂಘಗಳು ಚೆನ್ನಾಗಿ ಕೆಲಸ ಮಾಡುತ್ತಿಲ್ಲ ಎಂದು ಇಲ್ಲಿನ ಸದಸ್ಯರಲ್ಲಿ ಅನೇಕರು ತಮ್ಮ ಅಭಿಪ್ರಾಯವನ್ನು ಈ ಸಭೆಯಲ್ಲಿ ವ್ಯಕ್ತಪಡಿಸಿದ್ದಾರೆ. ಇದನ್ನು ಕೂಡ ಸರ್ಕಾರ ಗಮನಿಸಬೇಕಾಗಿದೆ. ಮುಖ್ಯವಾಗಿ ಹೇಳುವುದಾದರೆ ಕೆಲವು ಸಹಕಾರ ಸಂಘಗಳಿಗೆ ನಿಯಂತ್ರಿತ ಕಚ್ಚಾ ಮಾಲಿನ ಮತ್ತು ವಿದ್ಯುತ್ತಿನ ಸರಬರಾಯಿಯನ್ನು ಕೈಗಾರಿಕಾಸಂಸ್ಥೆಗಳಿಗೆ ಸಕಾಲದಲ್ಲಿ ಕೊಡದೆ ಖಾಸಗಿವ್ಯಕ್ತಿಗಳಿಗೆ ಸಿಗುವಂತೆ ಈ ಸಂಘಗಳಿಗೆ ಸಿಗುತ್ತಿಲ್ಲ. ಈ ಅಸಮಾನತೆಗಳಿಂದಾಗಿ ತೊಂದರೆಯಾಗಿದೆ. ಇದಕ್ಕೆ ಬೇಕಾಗುವಂತಹ Controlled Articles ಕೂಡ ಪ್ರಭಾವಶಾಲಿ ಖಾಸಗಿ ವ್ಯಕ್ತಿಗಳಿಗೆ ಸಿಗುವಂತಹ ಇನ್ನಿತರ ಸವಲತ್ತುಗಳು ಇವುಗಳಿಗೆ ಸಿಗುತ್ತಿಲ್ಲ. ಅಲ್ಲದೇ ಕೆಲವು ಕಡೆ ಯೋಜನೆಗಳಿಗಾಗಿ ಹಣವನ್ನು ಕೊಡುತ್ತಿದ್ದಾರೆ. ಯೋಜನೆಯ ಕೆಲಸಗಳು ಅರ್ಧ ಹಂತದಲ್ಲಿರುವಾಗ ಅದಕ್ಕೆ ಹಣ ಒದಗಿಸಿ ಮಂಜೂರಾತಿ ಕೊಡುತ್ತಾರೇನೊ ನಿಜ, ಹಾಗೆ ಮಂಜೂರಾದ ಹಣದ ಆಜ್ಞೆ ಮಾರ್ಚಿ ಆಖೈರಿಗೆ ಬರುತ್ತದೆ. ಅದು ಬಂದ ಮೇಲೆ ಬಾಂಡನ್ನು ಬರೆಸಿ ರಿಜಿಸ್ಟರ್ ಮಾಡಿಸಿ ಡೆಪ್ಯುಟೀ ಕಮಿಷನರಲ್ಲಿ ಹೋಗಿ, ಟ್ರೆಜರಿಯಲ್ಲಿ ಡಿಪಾಸಿಟ್ ಇಟ್ಟು ಒಪ್ಪಿಗೆ ಬರುವಾಗ್ಗೆ ಮಾರ್ಚಿ 31 ನೇ ತಾರೀಖಿಗೆ ಎಂದು ಕೊಟ್ಟ ಹಣ ಪೂರ್ತಿ ಲ್ಯಾಪ್ಸ್ ಆಗಿಹೋಗುತ್ತದೆ. ಬಾಂಡುಗಳನ್ನು ಮೊದಲು ರಿಜಿಸ್ಟರು ಮಾಡುವಾಗ

ಫೀಜನ್ನು ಕೊಟ್ಟು ಇತರ ಖರ್ಚುಗಳನ್ನು ಮಾಡಿದುದೆಲ್ಲವನ್ನು ಪುನಃ ಮುಂದಿನ ವರ್ಷ ಎರಡನೆಯ ಸಾರಿ ಮಾಡಿಸಿ ಈ ಹಣದ ಮಂಜೂರಾತಿಯನ್ನು ರಿನ್ಯೂ ಮಾಡುವಾಗ ಇದಕ್ಕಾಗಿ ರಿಜಿಸ್ಟ್ರೇಷನ್ ಮತ್ತಿತರ ಖರ್ಚುಗಳು ಅನಾವಶ್ಯಕವಾಗಿ ಬೀಳುತ್ತದೆ. ಇಂತಹ ನಿದರ್ಶನಗಳೆಷ್ಟೋ ಉಂಟು. ಹೀಗಾದರೆ ಸೊಸೈಟಿಗಳು ಯಾವ ರೀತಿ ಕ್ರಮವಾಗಿ ನಡೆಯಬಹುದು ಎನ್ನುವುದನ್ನು ಸರ್ಕಾರ ಅಂದಾಜ್ ಮಾಡಿಲ್ಲ. ಇನ್ನು ಕೆಲವು ಸಹಕಾರ ಸಂಘಗಳಿಗೆ ಕಚ್ಚಾಮಾಲುಗಳನ್ನು ಮತ್ತು ಮೆಷಿನರಿ ಗಳನ್ನು ಕೊಳ್ಳುವುದಕ್ಕಾಗಿ ಎರಡು ಇನ್‌ಸ್ಟಾಲ್‌ಮೆಂಟುಗಳಲ್ಲಿ ಸಾಲದ ಸಹಾಯವನ್ನು ಕೊಡು ತ್ತಾರೆ. ಮೆಷಿನರಿಗಳನ್ನು ಮತ್ತಿತರ ಸಾಮಗ್ರಿಗಳನ್ನು ತರುವುದಕ್ಕೆ ಹೋಗುವಾಗ ಈ ಸಹಾಯದ ಹಣವು ಸಮಯಕ್ಕೆ ಸರಿಯಾಗಿ ಸಿಗದೇ ಯೋಜನೆಗೆ ಅವಶ್ಯವಾದ ಯಂತ್ರಗಳ ಇತರ ಉಪಕರಣ ಗಳನ್ನು ರಾ ಮೆಟೀರಿಯಲ್ಸ್‌ಗಳನ್ನು ತೆಗೆದುಕೊಂಡು ಉಪಯೋಗ ಮಾಡಿಕೊಳ್ಳುವುದು ತೀರಾ ಕಷ್ಟವಾಗಿದೆ. ಈ ಸಹಕಾರ ಸಂಘಗಳು ಸ್ಥಾಪನೆಯಾದ ನಂತರ ಕೊಟ್ಟ ಸಾಲದ ಹಣಕ್ಕೆ ಸರ್ಕಾರಕ್ಕೆ 4% ರಷ್ಟು ಬಡ್ಡಿ ಕೊಡುವುದು, ಬರಿ ಸಿಬ್ಬಂದಿಗಳ ಗೋಸ್ಕರ ಸಂಬಳ ವೆಚ್ಚವಾಗುವುದು ಮತ್ತಿತರ ಅನವಶ್ಯಕ ವೆಚ್ಚಗಳು ಆಗುವಂತಾದರೆ ಸಂಘಗಳು ಅಭಿವೃದ್ಧಿಯಾಗುವುದಾದರೂ ಹೇಗೆ ? ಇಂತಹ ಸಹಕಾರ ಸಂಘಗಳನ್ನು ಹೇಗೆ ಜನರು ಅಭಿವೃದ್ಧಿಮಾಡಿ ಉಪಯೋಗ ಮಾಡಿಕೊಳ್ಳಬಹುದು ಎನ್ನುವುದನ್ನು ಸರ್ಕಾರ ವಿಮರ್ಶೆ ಮಾಡಬೇಕಾಗಿದೆ. ಆಡಿಟ್ ರಿಪೋರ್ಟಿನಲ್ಲಿ ಸಹಕಾರ ಸಂಘಗಳಿಗೆ ಸಂಬಂಧಪಟ್ಟಂತೆ ಅನೇಕ ವರದಿಗಳು ಬರುತ್ತಿವೆ. ಅದರಿಂದ ಏನು ತೊಡಕುಗಳು, ಅಡಚಣೆಗಳು, ತೊಂದರೆಗಳು ಇವೆ ಎನ್ನುವುದನ್ನು ತೋರಿಸುವಂತೆ ಸಂಬಂಧಪಟ್ಟ ಲೆಕ್ಕ ಪರಿಶೋಧಕರಿಗೆ ತಿಳಿಸಬೇಕು. ಎಷ್ಟೋ ಕಡೆ ಸಹಸ್ರಾರು ರೂಪಾಯಿಗಳ ವ್ಯವಹಾರವನ್ನು ನಡೆಸತಕ್ಕ ಸಹಕಾರ ಸಂಘಗಳಿಗೆ ಸಾಕಷ್ಟು ಸಾಲ, ಸಹಾಯ ಸೌಕರ್ಯಗಳನ್ನು ಒದಗಿಸಿದ್ದರೂ ಅದರ ಮೇಲೆ ಸರಿಯಾದ ಲೆಕ್ಕಪತ್ರಗಳು ಬರು ತ್ತವೆಯೋ ಇಲ್ಲವೋ ಎನ್ನುವುದು, ನಮ್ಮಿಂದ ಮಾಹಿತಿ ಒದಗಿಸುವುದು ಅಭಾವವಿರುವುದ ರಿಂದ ಅನೇಕ ವೇಳೆ ಸರಿಯಾಗಿ ಜನರಿಗೆ ಗೊತ್ತಾಗುತ್ತಿಲ್ಲ. ಇವೆಲ್ಲವನ್ನು ಸರಕಾರ ಪರಿಶೀಲಿಸಿ ಇದಕ್ಕೆ ಸಂಬಂಧಪಟ್ಟ ಇಲಾಖೆಯವರು ಗಮನಕ್ಕೆ ತೆಗೆದುಕೊಂಡು ಸರಿಪಡಿಸಬೇಕು. ಅಲ್ಲದೆ ಎಲ್ಲವೂ ಕೆಟ್ಟ ಮೇಲೆ ಕೇವಲ ಸೊಸೈಟಿಯ ಮೇಲೆ ಅಪಾದನೆ ಹೊರಿಸುವ ಒಂದೇ ಉದ್ದೇಶದಿಂದ ಅಥವಾ ಅವುಗಳ ಅಧಿಕಾರಗಳ ಮೇಲೆ ತಪ್ಪು ಹುಡುಕುವಷ್ಟಕ್ಕೆ ಮಾತ್ರ ಇಲಾಖಾಧಿಕಾರಿಗಳು ಗಮನಿಸಿದರೆ ಸಾಲದೆಂಬುದನ್ನು ಆಯಾ ಅಧಿಕಾರಿಗಳಿಗೆ ಆಜ್ಞೆ ಹೊರಡಿಸಬೇಕಾಗಿದೆ.

ಅಲ್ಲಲ್ಲಿ ಉತ್ತಮ ಸಹಕಾರಿ ಸಂಘಗಳ ಸ್ಥಾಪನೆಗೆ ನಿಗಾ ಕೊಡಬೇಕು. ತೊಂದರೆ ನಿವಾರಣೆಗೆ ಕ್ರಮ ತೆಗೆದುಕೊಳ್ಳುವುದು ಅಗತ್ಯ. ಇನ್ನು ಬೇಸಾಯಕ್ಕೆ ಸಂಬಂಧಪಟ್ಟ ಕೈಗಾರಿಕೆಗಳಿಗೆ ಹೆಚ್ಚು ಗಮನಕೊಡಬೇಕು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಣ್ಣ ನೇಗಿಲು ವ್ಯವಸಾಯಕ್ಕೆ ಬೇಕಾಗುವ ಸಲಕರಣೆ ತಯಾರುಮಾಡುವುದಕ್ಕೆ, ಸರಕಾರ ಅನುಕೂಲ ಮಾಡಿಕೊಡಬೇಕು. ಕೃಷಿಕರಿಗೆ ಬೇಕಾಗುವ ಮರ ದೊರೆಯುವುದಿಲ್ಲ. ಈ ಬಗ್ಗೆ ಕಾಗದ ಬರೆದು ತಿಳಿಸಿದ್ದರೂ ಸಹ ಅನುಕೂಲ ಮಾಡಿರುವದಿಲ್ಲ. ನಮ್ಮ ಜಿಲ್ಲೆಯಲ್ಲಿ ಕೃಷಿಕರಿಗೆ ಬೇಕಾಗುವ ನೇಗಿಲು, ಸಲಕರಣೆಗಳು ದೊರೆಯುವುದಿಲ್ಲ. ಇವುಗಳನ್ನು ಒದಗಿಸಲು ಒಂದು ಕೇಂದ್ರ ಸಂಸ್ಥೆ ಮೂಲಕ ಏರ್ಪಾಡುಮಾಡಿ ಕೃಷಿಕರಿಗೆ ಒದಗಿಸುವ ವ್ಯವಸ್ಥೆ ಮಾಡಬೇಕು. ಈ ಯೋಜನೆ ಮಾಡುವುದು ಅಗತ್ಯವಾಗಿದೆ. ಮೂಡಬಿದ್ರಿ ಕ್ಷೇತ್ರದಲ್ಲಿ ಈ ಯೋಜನೆ ಮಾಡಿದರೆ ಬಹಳ ಪ್ರಯೋಜನವಾಗುತ್ತದೆ. ಸಂಬಂಧಪಟ್ಟ ಇಲಾಖೆಯವರು ಇದನ್ನು ಗಮನಿಸ ಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಎಲೆಕ್ಟ್ರಿಸಿಟಿ ಇಲಾಖೆಯವರಿಗೆ ಎಚ್ಚರಿಕೆಕೊಟ್ಟು ಸಹಕಾರಿ ಸಂಘಗಳಿಗೆ ವಿದ್ಯುಚ್ಛಕ್ತಿ ಒದಗಿಸುವ ಏರ್ಪಾಡು ಮಾಡಬೇಕು. ಕೆಲವುಕಡೆ ರಿಜಿಸ್ಟ್ರೇಷನ್ ಫೀ ಮಾಫ್ ಮಾಡಿದ್ದೀರಿ. ಅದೇ ರೀತಿಯಾಗಿ ಎಲ್ಲ ಸಹಕಾರಿ ಸಂಘಗಳಿಗೆ ರೆಜಿಸ್ಟ್ರೇಷನ್ ಫೀ ಮಾಫ್ ಮಾಡುವದನ್ನು ಮುಂದುವರಿಸ ಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಹರಿಜನರ ಕೈಗಾರಿಕೆಯ ವಿಚಾರ, ಒಂದು ಮಾತು ಹೇಳಬೇಕಾಗಿದೆ. ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನವರು ಈ ಯೋಜನೆ ತೆಗೆದುಕೊಂಡಿದ್ದಾರೆ. ಚರ್ಮದ ಕೈಗಾರಿಕೆಗಾಗಿ 125 ರೂಪಾಯಿ ಕೊಡುತ್ತಾರೆ. ಸಣ್ಣ ಸಣ್ಣ ಕೆಲಸಗಳಿಗಾಗಿ 25-50 ರೂಪಾಯಿ ಹರಿಜನರಿಗೆ ಕೊಡುತ್ತಾರೆ. ಇದರಿಂದ ಹೆಚ್ಚಾಗಿ ಪ್ರಯೋಜನವಾಗುವುದಿಲ್ಲ, ಇದನ್ನು ವಿಮರ್ಶೆ ಮಾಡುವುದು ಅಗತ್ಯ. ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟು ಎಕನಾಮಿಕ್ ಎಯ್ಡ್ ಕೊಡುತ್ತಾರೆ. ಈ ಇಲಾಖೆಯು ಇಂಡಸ್ಟ್ರೀಸ್ ಇಲಾಖೆಯೊಡನೆ ಸೇರಿ ಒಂದು ಯೋಜನೆ ಮಾಡಬೇಕು. ಸರಿಯಾದ ಹತ್ತು ಜನರನ್ನು ಸೇರಿಸಿ ಒಂದು ಅಂಗಡಿ ಹಾಕಿದರೆ ಇಂಥ ಕೈಗಾರಿಕೆಗಳು ವ್ಯವಸ್ಥಿತ ರೂಪದಲ್ಲಿ ಬೆಳೆಯು ತ್ತವೆ. ವ್ಯವಸ್ಥಿತ ರೀತಿಯಲ್ಲಿ ನೆರವೇರಿಸುವುದು ಅಗತ್ಯ. ಹರಿಜನರ ಕೈಗಾರಿಕೆಗಳಿಗೆ ಎಕನಾಮಿಕ್ ಎಯ್ಡ್ ಮೂಲಕ ಖರ್ಚು ಮಾಡುವುದರಿಂದ ಅಷ್ಟಾಗಿ ಪ್ರಯೋಜನ ಹೊಂದುವುದಿಲ್ಲ. ಸೋಷಿಯಲ್

(ಶ್ರೀ ಗೋಪಾಲ ಸಾಲಿನ್ಸ)

ವೆಲ್‌ಫೇರ್ ಡಿಪಾರ್ಟ್‌ಮೆಂಟು ಒಂದು ಸರಿಯಾದ ಯೋಜನೆಮಾಡಿ ಆರ್ಥಿಕ ನೆರವು ದೊರೆಯುವ ಹಾಗೆ ಮಾಡಬೇಕೆಂದು ಸರಕಾರವನ್ನು ಕೇಳಿಕೊಳ್ಳುತ್ತೇನೆ.

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈಗ ಸಭೆಯ ಮುಂದೆ ಮಂಡಿಸಿರುವ ಈ ಬೇಡಿಕೆಗಳ ಬಗ್ಗೆ ಹೇಳುವುದಾದರೆ, ಮೈಸೂರು ಸರಕಾರ ಒದಗಿಸಿರತಕ್ಕ ಹಣ ಏನೇನೂ ಸಾಲದು ಎಂದು ನನ್ನ ಅಭಿಪ್ರಾಯ. ಕಳೆದ ವರ್ಷ 18 ಕೋಟಿ ರೂ. ಖರ್ಚುಮಾಡಿರತಕ್ಕಂಥ ಕೈಗಾರಿಕಾ ಇಲಾಖೆಗೆ ಈ ವರ್ಷ 13 ಕೋಟಿಗೆ ಇಳಿದಿದೆ. ಈ ರೀತಿ ಹಣ ಕಡಿಮೆ ಒದಗಿಸಿರುವುದರ ಔಚಿತ್ಯವೇನು ? ಸರಕಾರ ಸಭೆಗೆ ಉತ್ತರ ಕೊಡುವಾಗ್ಗೆ ಹೇಳುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ದಿವಂಗತ ಸರ್ ವಿಶ್ವೇಶ್ವರಯ್ಯನವರು ದೇಶದ ಕಲ್ಯಾಣವಾಗಬೇಕು, ಜನರು ಸುಖವಾಗಿ ಬದುಕಬೇಕು, ನಮ್ಮ ಆರ್ಥಿಕ ಸ್ಥಿತಿ ಸುಧಾರಿಸಬೇಕು ಎಂದು, ಕೈಗಾರಿಕೆಗಳನ್ನು ಪ್ರಾರಂಭಿಸಿದರು. ಈ ಎಲ್ಲ ಸ್ಲೋಗನ್ಸ್ ಏಕೆ ಹೇಳುತ್ತೀರಿ ? ಅವುಗಳನ್ನು ಬಟ್ಟು ಬಿಡುವುದು ಒಳ್ಳೆಯದಲ್ಲವೆ ? ಮೊದಲನೆ ಮತ್ತು ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ನಾವು ಕೈಗಾರಿಕೆಗಳನ್ನು ಬೆಳಸಿಕೊಂಡು ವೇಗದಿಂದ ಮುಂದು ಹೋಗುತ್ತೇವೆ ಎಂದು ಹೇಳುತ್ತೀರಿ. ಆದರೆ ಮೂರನೇ ಯೋಜನೆಯ ಎರಡನೇ ವರ್ಷದಲ್ಲಿ ಇನ್ನೂ ಕುಂಟುವದಕ್ಕೆ ಕಾರಣವೇನು ? ಸ್ಕೀಮ್ಸ್ ಇಲ್ಲವೆ? ಖನಿಜ ಸಂಪತ್ತು ಇಲ್ಲವೆ ? ಸವಲತ್ತು ದೊರೆಯುವ ದಿಲ್ಲವೆ ? ಎಂಬ ಅನುಮಾನ ಬಂದಿದೆ. ನಾನು ಒಂದು ಪ್ರಶ್ನೆ ಕೇಳಿದ್ದಕ್ಕೆ ಉತ್ತರ ಕೊಟ್ಟಿರುವದನ್ನು ನೋಡಿ ಈ ರೀತಿ ನಾನು ತಿಳಿದುಕೊಂಡಿದ್ದೇನೆ. ಕೇಂದ್ರ ಸರಕಾರ ಹೀಗೆ ಮಾಡಿದ್ದಾರೆ, ಪಬ್ಲಿಕ್ ಸೆಕ್ಟಾರ್‌ನಲ್ಲಿ ಹೀಗೆ ಮಾಡಬೇಕು, ಪ್ರೈವೇಟ್ ಸೆಕ್ಟಾರ್‌ನಲ್ಲಿ ಹಾಗೆ ಮಾಡಬೇಕು ಎಂದ ದೊಡ್ಡದಾಗಿ ಉತ್ತರ ಕೊಡುತ್ತೀರಿ. ಆದರೆ ದೇಶದ ಸಂಪತ್ತು ಹೆಚ್ಚು ಮಾಡುವುದು ಆಗಿಲ್ಲ. ಹೊಸದುರ್ಗದಲ್ಲಿ ಒಂದು ಸಿಮೆಂಟ್ ಫ್ಯಾಕ್ಟರಿ ಪ್ರಾರಂಭ ಮಾಡಬೇಕೆಂದು ಕೇಳಿದರೆ, ಜನ ಮುಂದೆ ಬಂದರೆ, ಜನ ಕೇಳಿದರೆ, ಹಣ ಇದ್ದರೆ, ಫಾರಿನ್ ಕೊಲ್ಯಾಬೊರೇಷನ್ ಸಿಕ್ಕರೆ, ಅದನ್ನು ಯೋಚನೆ ಮಾಡುತ್ತೇವೆಂದು ಹೇಳಿದಿರಿ. ಆಂಧ್ರ ಪ್ರದೇಶದಲ್ಲಿ ಏನು ನಡೆಯುತ್ತಿದೆ ನೋಡಬೇಕು. ಎರಡು ಹೊಸ ಸಿಮೆಂಟ್ ಫ್ಯಾಕ್ಟರಿ ಪ್ರಾರಂಭ ಮಾಡಲಿದ್ದಾರೆ. ಈಗಾಗಲೇ 6-7 ಸಿಮೆಂಟ್ ಫ್ಯಾಕ್ಟರಿಗಳು ಕೆಲಸ ಮಾಡುತ್ತಿವೆ. ನಮ್ಮಲ್ಲಿ ಎಷ್ಟು ಸಿಮೆಂಟ್ ಫ್ಯಾಕ್ಟರಿಗಳಿವೆ ? ಒಂದು ಜಾಸ್ತಿಮಾಡುವುದಕ್ಕೂ ಕೂಡ ಅನುಮಾನ ರೂಪದಲ್ಲಿ ಉತ್ತರಕೊಟ್ಟಿರಿ. ಇದರಿಂದ ದೇಶಕ್ಕೆ ಒಳ್ಳೆಯದಾಗುತ್ತದೆಯೇ ಎನ್ನುವದನ್ನು ಯೋಚನೆಮಾಡಿ. ತೈಲ ಶುದ್ಧೀಕರಣ ಕೇಂದ್ರ ಮಂಗಳೂರಿನಲ್ಲಿ ಬರುತ್ತದೆಂದು ಶ್ರೀ ವೀರೇಂದ್ರ ಪಾಟೀಲರು ಅಪ್ಪಣೆ ಕೊಡಿಸಿದರು. ಆದರೆ ಹಣಕಾಸಿನ ಮಂತ್ರಿಗಳು ಹೇಳಿದರು ಅದು ಬರುವುದು ಅಸಂಭವ ಎಂದು; ಇದರಲ್ಲಿ ಯಾರು ಹೇಳಿರುವುದು ಸರಿ ? ನಾವು ಮಾತ್ರ ಏನೂ ತಿಳಿಯದೆ ಸ್ಯಾಂಡ್ ವಿಚ್ ಆಗಿದ್ದೇವೆ. ನಿಮ್ಮ ಶಕ್ತಿ ಸಾಮರ್ಥ್ಯ ಕುಂಠಿತವಾಗಿದೆ ಎಂದು ಹೇಳಬೇಕಾಗಿದೆ. ಒಂದು ದೂರ ದೃಷ್ಟಿಯಿಂದ ಒಂದು ಪ್ಲಾನ್, ಸ್ಕೀಮ್ ಇಟ್ಟುಕೊಂಡು ಕೈಗಾರಿಕೆ ಸ್ಥಾಪನೆಮಾಡಿ ಅಭಿವೃದ್ಧಿ ಪಡಿಸಬೇಕು, ದೇಶದಲ್ಲಿ ಬೇಕಾದಷ್ಟು ಖನಿಜಸಂಪತ್ತಿದೆ. ಒಂದಾದರೂ ಸರಿಯಾದ ಸ್ಕೀಮ್ ಇಲ್ಲದೆ ಎರಡು ಯೋಜನಾ ಅವಧಿಯಲ್ಲಿ ಹಣಕಾಸು ಖರ್ಚುಮಾಡಿದ್ದೀರಿ. ನಿಮ . ನೊರೆತಿರುವ ಅಧಿಕಾರ ಉಳಿಸಿಕೊಳ್ಳಲು ದೇಶಕ್ಕೆ ಅನ್ಯಾಯ ಮಾಡಬೇಡಿ. ನಿಜವಾಗಿಯೂ ದೇಶದ ಹಿತ ಚೆನ್ನಾಗಿ ಆಗಬೇಕು. ದೇಶದ ಹಿತರಕ್ಷಣೆ ಮಾಡುವ ಕಾಲಕ್ಕೆ false prestigeಗೆ ಒಳಗಾಗಬಾರದು. ಕಣ್ಣಲ್ಲಿ ಕಣ್ಣಿಟ್ಟು ಗಾಂಭೀರ್ಯದಿಂದ ವರ್ತಿಸಬೇಕು, ದೇಶದ ಹಿತ ಮಣ್ಣುಪಾಲು ಮಾಡಬೇಡಿ.

ಆಯಿಲ್ ರಿಫೈನರಿ ಕೇಂದ್ರ ನಮ್ಮ ದೇಶಕ್ಕೆ ಬರುವುದಿಲ್ಲವೆಂಬುದು ಗೊತ್ತಾಯಿತು. ಇನ್ನು ಅಲ್ಯೂಮಿನಿಯಮ್ ಫ್ಯಾಕ್ಟರಿ ನಮ್ಮ ದೇಶಕ್ಕೆ ಬರುತ್ತದೆಯೋ ಇಲ್ಲವೋ ಎನ್ನುವ ಯೋಚನೆ ಇದೆ.

Sri K. MALLAPPA.—There is absolutely no doubt about Mysore establishing an Aluminium Factory. But unfortunately some difficulty is created by the licence holder. The State has acquired that licence, so that it can start the aluminium factory as early as possible.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಹಾಗಾದರೆ ಒಂದು ಅಲ್ಯೂಮಿನಿಯಮ್ ಫ್ಯಾಕ್ಟರಿ ನಮ್ಮ ದೇಶಕ್ಕೆ ಬರುತ್ತದೆಯೆಂದು ಸ್ವಲ್ಪ ಸಮಾಧಾನವಾಯಿತು. ರೆಯಾನ್ ಫ್ಯಾಕ್ಟರಿಗೆ ಏತಕ್ಕೆ ಲೈಸೆನ್ಸ್ ತೆಗೆದುಕೊಂಡರು, ಏತಕ್ಕೆ ಇನ್ನೂ ಅದನ್ನು ಪ್ರಾರಂಭಮಾಡಲಿಲ್ಲ. ಲೈಸೆನ್ಸ್ ತೆಗೆದುಕೊಂಡವರಿಗೆ ಸರ್ಕಾರದವರು 45 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ. ಮೈಸೂರು ಸಂಸ್ಥಾನದಲ್ಲಿ ಎಲ್ಲ ಜನತೆಗೂ ಕೆಲಸ ಸಿಕ್ಕಿ ಆರ್ಥಿಕಾಭಿವೃದ್ಧಿಯಾಗುವ ರೀತಿಯಲ್ಲಿ ಸರ್ಕಾರದವರು ದುಡಿಯುತ್ತಾರೆಯೇ ಎನ್ನುವ ಅನುಮಾನ ನನಗೆ ಬಂದಿದೆ.

ಶ್ರೀ ಕೆ. ಮಲ್ಲಪ್ಪ.—ಫಿಲಮಿಂಗ್ ರೆಯಾನ್ ಎಂದು ಹೇಳಿ ಅದು ಎಲ್ಲೂ ತಯಾರಾಗುವುದಿಲ್ಲ. ಅದರ ಬಗ್ಗೆ ಯಾವುದೋ ಒಂದು ಸ್ವಂತ ಹಕ್ಕು ಪೇಟೆಂಟಾಗಿದೆ. ಅವರು ಒಪ್ಪಿದರೆ ಮಾತ್ರ ಅದನ್ನು ತಯಾರು ಮಾಡುವುದಕ್ಕೆ ಸಾಧ್ಯ. ಅದರ ಬಗ್ಗೆ ಕರೆಸ್ಪಾಂಡೆನ್ಸ್ ನಡೆಯುತ್ತಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮಾತೆತ್ತಿದರೆ ಕೇಂದ್ರ ಸರ್ಕಾರದ ಕಡೆ ಕೈ ತೋರಿಸಬಾರದು. ನಿಮ್ಮ ಕಾಲದಲ್ಲಿ ಮೂರು ನಾಲ್ಕು ಹೊಸ ಕೈಗಾರಿಕೆಗಳನ್ನು ಸ್ಥಾಪನೆ ಮಾಡಬೇಕೆಂದು ನಾನು ಹೇಳುತ್ತೇನೆ. ಕೈಗಾರಿಕೆಯನ್ನು ಸ್ಥಾಪನೆ ಮಾಡತಕ್ಕ ವಿಚಾರದಲ್ಲಿ ಫೈರ್ ಮೇಲೆ ಆರ್ಡರ್ ಮಾಡುವಾಗ ಸ್ವಲ್ಪ ಬಗ್ಗಿಯಾಗಿರಬಾರದು. ಕೇಂದ್ರ ಸರ್ಕಾರದವರನ್ನು ಬೇರೆ ರಾಜ್ಯಕ್ಕೆ ಕೈಗಾರಿಕೆಯನ್ನು ಸ್ಥಾಪನೆ ಮಾಡುವುದಕ್ಕೆ ಅನುಕೂಲ ಮಾಡಿಕೊಟ್ಟು ನಮ್ಮ ರಾಜ್ಯವನ್ನು ಏತಕ್ಕೆ ತೃಣೀಕರಿಸಿದ್ದೀರಿ ಎಂದು ಕೇಳುವ ಶಕ್ತಿ ನಮ್ಮ ರಾಜ್ಯ ಸರ್ಕಾರದವರಿಗೆ ಬರಲಿ ಎಂದು ನಾನು ಹೇಳುತ್ತೇನೆ. ಭದ್ರಾವತಿಯಲ್ಲಿ ಸ್ಪೆಷಲ್ ಸ್ಟೀಲ್ ಪ್ಲಾಂಟ್ ಹಾಕಿ ಅದನ್ನು ದೊಡ್ಡದು ಮಾಡಬೇಕು. ಅದು ಒಪ್ಪಿಕೊಳ್ಳತಕ್ಕ ಮಾತು. ನಮ್ಮ ದೇಶದಲ್ಲಿ ಒಂದು ರಾ-ಫಿಲಂ ಇಂಡಸ್ಟ್ರಿ ಮಾಡಬೇಕೆಂದು ನಾನು ಚಿಕ್ಕ ಹುಡುಗನಾಗಿದ್ದಾಗಿನಿಂದಲೂ ಜನ ಕೇಳುತ್ತಿದ್ದಾರೆ. ಅದರ ಬಗ್ಗೆ ಏನು ಮಾಡಿದ್ದೀರಿ ?

ಶ್ರೀ ಕೆ. ಮಲ್ಲಪ್ಪ.—ಮಂಡ್ಯದಲ್ಲಿ ಒಂದು ಟೆಕ್ನಿಕಲರ್ ಫಿಲಂ ಕಾರ್ಖಾನೆ ಸ್ಥಾಪನೆಯಾಗುತ್ತದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅದು ಮಂಡ್ಯದಲ್ಲಿ ಸ್ಥಾಪನೆಯಾಗುತ್ತದೆಯೆಂದು ಹೇಳಿದರೆ ಬಹಳ ಸಂತೋಷ. ಆದರೆ ಅದನ್ನು ನಮ್ಮ ಪಕ್ಕದ ರಾಜ್ಯದವರು ಕಸಿದುಕೊಂಡು ಹೋದರೆ ಕಷ್ಟ.

ಶ್ರೀ ಕೆ. ಮಲ್ಲಪ್ಪ.—ಇಲ್ಲ. It is going to be started shortly. We are going to form a Company and call for shares. Licence has been given. The Managing Director of Mandya Sugar Company is going to America to finalise the contract.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಆಶ್ವಾಸನೆಯನ್ನು ಕೊಟ್ಟಿದ್ದೀರಿ, ಅದು ನಮ್ಮ ಮಕ್ಕಳ ಕಾಲಕ್ಕೋ ಅಥವಾ ಮೊಮ್ಮಕ್ಕಳ ಕಾಲಕ್ಕೋ ಆದರೆ ನೋಡೋಣ. ಅದರ ಮೇಲೆ ಬುನಾದಿಯನ್ನು ಹಾಕಿ ಕಟ್ಟಡವನ್ನು ಕಟ್ಟೋಣ. ಸಕ್ಕರೆ ಕಾರ್ಖಾನೆಯನ್ನು ಸ್ಥಾಪನೆ ಮಾಡುವುದರಲ್ಲಿ ನಮ್ಮ ಮೈಸೂರು ರಾಜ್ಯಕ್ಕೆ ಮಲತಾಯಿ ಧೋರಣೆ ಏತಕ್ಕೆ ತೋರಿಸುತ್ತೀರೆಂದು ನಮ್ಮ ಸರ್ಕಾರದವರು ಕೇಂದ್ರ ಸರ್ಕಾರದವರನ್ನು ಕೇಳಬೇಕು. ಬೇರೆ ಸ್ಟೇಟಿಗೆ ಯಾವ ಟ್ರೀಟ್‌ಮೆಂಟ್ ಕೊಡುತ್ತೀರೋ ಅದೇ ಟ್ರೀಟ್‌ಮೆಂಟನ್ನು ನಮ್ಮ ರಾಜ್ಯಕ್ಕೂ ಕೊಡಿ ಎಂದು ನಮ್ಮ ಸರ್ಕಾರದವರು ಕೇಂದ್ರ ಸರ್ಕಾರದವರನ್ನು ಕೇಳಬೇಕು. ಈಗ ಕೇಂದ್ರ ಸರ್ಕಾರವರು ಹೊಸದಾಗಿ 3-4 ಕಡೆಗಳಲ್ಲಿ ಸಕ್ಕರೆ ಕಾರ್ಖಾನೆಯನ್ನು ಸ್ಥಾಪನೆ ಮಾಡುವವರಾಗಿದ್ದಾರೆ. ಇಂಥಾ ಸಂದರ್ಭದಲ್ಲಿ ನಮ್ಮ ಸರ್ಕಾರದವರೂ ಏತಕ್ಕೆ ಪ್ರಯತ್ನಮಾಡಿ ನಮ್ಮ ರಾಜ್ಯಕ್ಕೂ ಒಂದು ಸಕ್ಕರೆ ಕಾರ್ಖಾನೆಯನ್ನು ಕೊಡಿ ಎಂದು ಕೇಂದ್ರ ಸರ್ಕಾರದವರನ್ನು ಕೇಳಬಾರದು ? ನಮಗೆ ಈಗ ಯಾವುದೋ ಒಂದು ಅಡಚಣೆಯಾಗಿದೆ. ಈಗ ನಾವು ಸಕ್ಕರೆ ಕಾರ್ಖಾನೆಯನ್ನು ಸ್ಥಾಪನೆ ಮಾಡುವುದಕ್ಕಾಗುವುದಿಲ್ಲ. ಈಗ ನಮ್ಮಲ್ಲಿ ಸಕ್ಕರೆ ಜಾಸ್ತಿ ತಯಾರಾಗುತ್ತಿದೆ. ಆದ್ದರಿಂದ ಈಗ ನಮ್ಮ ರಾಜ್ಯದಲ್ಲಿ ಸಕ್ಕರೆ ಕಾರ್ಖಾನೆಯನ್ನು ಸ್ಥಾಪನೆ ಮಾಡತಕ್ಕದ್ದು ಇಂಡಿಯಾ ಸರ್ಕಾರದ ಪಾಲಿಸಿಯಾಗಿಲ್ಲ ಎಂದು ನಮ್ಮ ಸರ್ಕಾರದವರು ಹೇಳತಕ್ಕದ್ದು ಸರಿಯಲ್ಲ. ಮೈಸೂರು ಸರ್ಕಾರದವರು ಆ ವಿಷಯದಲ್ಲಿ ಒಂದು ಖಚಿತವಾದ ಅಭಿಪ್ರಾಯವನ್ನು ಕೇಂದ್ರ ಸರ್ಕಾರದವರ ಮುಂದೆ ಇಡುವುದಕ್ಕೂ ಇವೊತ್ತಿನ ದಿವಸ ಹಿಂದೆಗೆದಿದ್ದಾರೆ ಎಂದು ನಾನು ಹೇಳುತ್ತೇನೆ. ಸಂಡೂರಿನಲ್ಲಿ ಕಬ್ಬಿಣದ ಕಾರ್ಖಾನೆಯನ್ನು ಸ್ಥಾಪನೆ ಮಾಡುತ್ತೇವೆಂದು ಹೇಳುತ್ತಾರೆ. ಅದು ಬರೀ ಪುಸ್ತಕದಲ್ಲಿದೆಯೇ ಹೊರತು ಅದನ್ನು ಕಾರ್ಯತಃ ಮಾಡಲಿಲ್ಲ. ನಮ್ಮ ದೇಶದಲ್ಲಿ ಖನಿಜ ಸಂಪತ್ತು ಎಷ್ಟು ಇದೆ, ಎಲ್ಲೆಲ್ಲಿದೆ ಎನ್ನುವ ಬಗ್ಗೆ ಸರ್ವೆ ಕಾರ್ಯವನ್ನು ಪೂರ್ಣ ವೇಗದಲ್ಲಿ ಮಾಡುತ್ತಿಲ್ಲ. ಸರ್ವೆ ಮಾಡಿಸಿ ಖನಿಜವನ್ನು ತೆಗೆದು ದೇಶಕ್ಕೆ ಅನುಕೂಲ ಮಾಡುವ ಕಾರ್ಯದಲ್ಲಿ ಸರ್ಕಾರದವರು ಕುಂಠಿತರಾಗಿದ್ದಾರೆ ಎಂದು ನಾನು ಹೇಳುತ್ತೇನೆ. ನ್ಯಾಯಬದ್ಧವಾಗಿ ಮೈಸೂರು ದೇಶದ ಜನರಿಗೆ ಕೆಲಸವನ್ನು ಕೊಡುವ ಕಾರ್ಯದಲ್ಲಿ ಸರ್ಕಾರದವರು ವಿಫಲರಾಗಿದ್ದಾರೆ. ಎಚ್. ಎ. ಎಲ್., ಎಚ್. ಎಂ. ಟಿ., ಐ. ಟಿ. ಐ. ಈ ಕಾರ್ಖಾನೆಗಳಲ್ಲಿ ಮೊನ್ನೆ 20 ಜನಗಳನ್ನು ಅಪಾಯಿಂಟ್ ಮಾಡಿಕೊಂಡರು. ಅದರಲ್ಲಿ 19 ಜನಗಳನ್ನು ಬರೀ ಕೇರಳದವರನ್ನೇ ಅಪಾಯಿಂಟ್ ಮಾಡಿಕೊಂಡಿದ್ದಾರೆ. ಕ್ವಾಲಿಫಿಕೇಷನ್ ಮತ್ತು ಅನುಭವ ಇದ್ದ ಜನರು ನಮ್ಮವರು ಇದ್ದರೂ ಕೂಡ ಬರೀ ಕೇರಳದವರನ್ನೇ ತೆಗೆದುಕೊಂಡಿದ್ದಾರೆ. ನಮ್ಮ ರಾಜ್ಯ ಸರ್ಕಾರದವರು ಆ ಫ್ಯಾಕ್ಟರಿಗಳಿಗೆ ನೆಲ ಕೊಟ್ಟು, ನೀರು ಕೊಟ್ಟು ಎಲೆಕ್ಟ್ರಿಸಿಟಿ ಕೊಟ್ಟು ಎಲ್ಲಾ ಸಹಾಯವನ್ನೂ ಮಾಡಿ ಎರಡು ಕೋಟಿ 25 ಲಕ್ಷ ಇರತಕ್ಕಂಥ ಕನ್ನಡಿಗರಿಗೆ ಆ ಫ್ಯಾಕ್ಟರಿಗಳಲ್ಲಿ ಎಷ್ಟು ಪರ್ಸೆಂಟ್

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಕೆಲಸ ಸಿಕ್ಕಿದೆ ಎಂದರೆ ಕೇವಲ 100ಕ್ಕೆ 5 ಜನಗಳಿಗೆ ಮಾತ್ರ. ಮೈಸೂರಿನಲ್ಲಿರತಕ್ಕ ಕೇಂದ್ರ ಸರ್ಕಾರದವರ ಎಲ್ಲಾ ಫ್ಯಾಕ್ಟರಿಗಳಲ್ಲಿಯೂ ಮೈಸೂರಿನವರಿಗೆ ಇಂತಿಷ್ಟು ಭಾಗ ಕೆಲಸಗಳನ್ನು ಕೊಡಬೇಕು. ಎಂದು ಅವರನ್ನು ಕೇಳಬೇಕು. ಅದರಲ್ಲಿ ಯಾವ ಡಿಸ್‌ಕ್ರಿಮಿನೇಷನ್ನೂ ಇರಬಾರದು. ನಮ್ಮ ರಾಜ್ಯದಲ್ಲಿ ನಿರುದ್ಯೋಗವನ್ನು ನಿವಾರಣೆ ಮಾಡುವ ಮಾರ್ಗದಲ್ಲಿ ಆ ಫ್ಯಾಕ್ಟರಿಗಳವರು ಅಡ್ಡಿ ಆತಂಕವನ್ನು ತಂದಿಡುತ್ತಿದ್ದಾರೆ. ಅದಕ್ಕೋಸ್ಕರವಾಗಿ ನಮ್ಮ ಸರ್ಕಾರದವರು ಕೇಂದ್ರ ಸರ್ಕಾರದವರಿಗೆ ಈ ವಿಷಯವನ್ನು ತಿಳಿಸಿ ಮೈಸೂರಿನ ಮಕ್ಕಳಿಗೆ ಸರಿಯಾದ ಪಾಲು ದೊರೆಯುವ ರೀತಿಯಲ್ಲಿ ಮಾಡಬೇಕೆಂದು ನಾನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಟಿ. ಡಿ. ದೇವೇಂದ್ರಪ್ಪ (ಭದ್ರಾವತಿ).— ಮಾನ್ಯ ಅಧ್ಯಕ್ಷರೇ, ಈಗ ಸರ್ಕಾರದವರು ನಮ್ಮ ಮುಂದಿಟ್ಟಿರತಕ್ಕ ಕೈಗಾರಿಕೆಯ ಡಿಮ್ಯಾಂಡನ್ನು ನಾನು ಸಮರ್ಥಿಸುತ್ತೇನೆ. ಹಾಗೂ ಈ ಕೈಗಾರಿಕೆಗಳ ವಿಷಯದಲ್ಲಿ ನಾನು ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ಮೈಸೂರು ರಾಜ್ಯದಲ್ಲಿ ಪ್ರಥಮವಾಗಿ ಸಣ್ಣ ಸಣ್ಣ ಕೈಗಾರಿಕೆಗಳನ್ನು ಮತ್ತು ದೊಡ್ಡ ದೊಡ್ಡ ಕೈಗಾರಿಕೆಗಳನ್ನು ಬೆಳೆಸುವುದರಲ್ಲಿ ಕಾರಣಕರ್ತರಾಗಿರುವವರಲ್ಲಿ ಸರ್ ಎಂ. ವಿಶ್ವೇಶ್ವರಯ್ಯನವರೂ ಒಬ್ಬರು ಎಂದು ಹೇಳಬಹುದು. ಅವರು ದಿವಾನರಾಗಿದ್ದಾಗ ಭದ್ರಾವತಿಯಲ್ಲಿರತಕ್ಕ ಕಾರ್ಖಾನೆಯನ್ನು ಬೆಳೆಸಬೇಕೆಂದು ಅದಕ್ಕೆ ತಳಹದಿಯನ್ನು ಹಾಕಿದರು. ಅದು ಇವೊತ್ತಿನ ದಿವಸ ದೊಡ್ಡ ಪ್ರಮಾಣದಲ್ಲಿ ಬೆಳೆದುಕೊಂಡು ಹೋಗುತ್ತಿದೆ. ಹಾಗೆಯೇ ಅವರು ದಿವಾನರಾಗಿ ನಿವೃತ್ತರಾದಮೇಲೆ ಕೂಡ ಗ್ರಾಮಾಂತರ ಪ್ರದೇಶಗಳಲ್ಲಿ ಸಣ್ಣ ಸಣ್ಣ ಕೈಗಾರಿಕೆಗಳನ್ನು ಬೆಳೆಸಬೇಕು, ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಬಡವರು ಕೈಗಾರಿಕೆಗಳಿಂದ ಜೀವನ ನಡೆಸುವುದಕ್ಕೆ ಅನುಕೂಲ ಮಾಡಿ ಕೊಡಬೇಕೆಂದು ಒಂದು ಯೋಜನೆಯನ್ನು ಹಾಕಿಕೊಂಡು ಪ್ರತಿ ತಾಲ್ಲೂಕಿನಲ್ಲಿಯೂ ಒಂದೊಂದು ಸೊಸೈಟಿಯನ್ನು ಸ್ಥಾಪನೆ ಮಾಡಿದರು.

12-30 P.M.

ಆದರೆ ಈ ಹೊತ್ತಿನ ದಿವಸ ಈ ಗ್ರಾಮ ಕೈಗಾರಿಕೆ ಸೊಸೈಟಿಗಳು ಏನು ಕೆಲಸ ಮಾಡುತ್ತಾ ಇವೆ, ಅವುಗಳಿಂದ ಪಡೆದಿರತಕ್ಕಂಥ ಹಣವನ್ನು ಅನೇಕ ಜನಗಳು ಮದುವೆ, ಮುಂಜಿಗಳಿಗೆ ಉಪಯೋಗಿಸಿಕೊಳ್ಳುತ್ತಾ ಇದ್ದಾರೆ. ಅವರದು ತಪ್ಪು ಅಂತ ಹೇಳುವುದು ಸರಿಯಲ್ಲ. ಅವರಿಗೆ ಸಣ್ಣ ಕೈಗಾರಿಕೆಗಳಿಂದ ಮನೆಯಲ್ಲಿ ಉಪಯೋಗಿಸುವ ಕೈಮಗ್ಗಗಳು ಮತ್ತು ಸೋಪನ್ನು ಮಾಡುವುದು ಮುಂತಾದುದರ ಬಗ್ಗೆ ತಿಳುವಳಿಕೆ ಇಲ್ಲದೆ, ಒಂದು ಅವ್ಯವಸ್ಥೆ ಆಗಿದೆ. ಸರ್ಕಾರದವರು ಗ್ರಾಮಾಂತರ ಪ್ರದೇಶಗಳಲ್ಲಿ ಹೆಣ್ಣು ಮಕ್ಕಳಿಗೆ ಅವರವರ ಮನೆಗಳಲ್ಲಿ ಅವರವರ ಬಟ್ಟೆಗಳನ್ನು ನೇಯ್ಗೆ ಮಗ್ಗಗಳ ಮೂಲಕ ಮಾಡಿಕೊಳ್ಳುವುದು, ಸೋಪನ್ನು ಮಾಡುವುದು ಮುಂತಾದ ಸಣ್ಣ ಸಣ್ಣ ಕೈಗಾರಿಕೆಗಳಲ್ಲಿ, ತಜ್ಞರನ್ನು ನೇಮಿಸಿ ಅವರಿಂದ ತರಪೇತಿ ಕೊಡಿಸಬೇಕು. ಕೆಲ ಕೆಲವು ಗ್ರಾಮಾಂತರ ಪ್ರದೇಶಗಳಲ್ಲಿ ಸಣ್ಣ ಕೈಗಾರಿಕೆಗಳನ್ನು ನಡೆಸುತ್ತಿದ್ದಾರೆ. ಸರ್ ಎಂ. ವಿಶ್ವೇಶ್ವರಯ್ಯನವರ ಈ ಒಂದು ಯೋಜನೆ ಬಲಾತ್ಕಾರವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಕಾರ್ಯಗತವಾದರೆ ಹಳ್ಳಿಗಾಡಿನ ಜನರು ಅವರ ಆರ್ಥಿಕ ಮಟ್ಟವನ್ನು ಉತ್ತಮಪಡಿಸಿಕೊಳುವುದಕ್ಕೆ ಅನುಕೂಲವಾಗುತ್ತದೆ.

ಭದ್ರಾವತಿ ಕಾರ್ಖಾನೆಗೆ ಅವರು ಹಾಕಿರತಕ್ಕಂಥ ಒಂದು ಬೀಜ ಇವತ್ತಿನ ದಿವಸ ಬೃಹದಾಕಾರವಾಗಿ ಬೆಳೆದುಕೊಂಡು ಬಂದಿದೆ. ಹಿಂದೆ ಶ್ರೀಮಾನ್ ಜತ್ತಿಯವರು ಮುಖ್ಯಮಂತ್ರಿಗಳಾಗಿದ್ದಾಗ ಕೈಗಾರಿಕೆ ಖಾತೆಯನ್ನು ಹೊತ್ತುಕೊಂಡು, ರಾಜ್ಯದಲ್ಲಿ ಅನೇಕ ಕೈಗಾರಿಕೆಗಳನ್ನು ಬೆಳೆಸಿದರು. ಭದ್ರಾವತಿ ಕಾರ್ಖಾನೆಯಲ್ಲಿ ಅನೇಕ ಬದಲಾವಣೆಗಳು ಅವರ ಕಾಲದಲ್ಲಿ ಆದುವು. ಏಕೆ ಇದನ್ನು ಹೇಳಬೇಕಾಗಿದೆಯೆಂದರೆ ಅಲ್ಲಿನ ಕಾರ್ಮಿಕರು, ಇವರು ಕಾರ್ಖಾನೆ ಬದಲಾವಣೆ ಮಾಡಿ ಅವರಿಗೆ ಸವಲತ್ತುಗಳನ್ನು ಒದಗಿಸಿದ್ದಕ್ಕಾಗಿ ಅವರಿಗೆ ತುಂಬಾ ಕೃತಜ್ಞರಾಗಿದ್ದಾರೆ. ಆ ಕಾರ್ಖಾನೆಯಲ್ಲಿ ಸಾವಿರಾರು ಜನಗಳಿಗೆ ಉದ್ಯೋಗ ಸಿಗುತ್ತಾ ಇದೆಯೆಂದು ಅವರನ್ನು ಸ್ಮರಿಸಿಕೊಳ್ಳುತ್ತಿದ್ದಾರೆ. ಅಷ್ಟೇ ಅಲ್ಲದೇ ಆ ಕಾರ್ಖಾನೆ ಆಡಳಿತ ನಡೆಸತಕ್ಕಂಥ ಶ್ರೀಮಾನ್ ಶಿವನಂಜಪ್ಪನವರು, ಕಾರ್ಖಾನೆ ಬಗ್ಗೆ ಹೆಚ್ಚಿಗೆ ಶ್ರಮ ವಹಿಸಿ ದುಡಿಯುತ್ತಿದ್ದಾರೆ. 7-8 ಕೋಟಿ ರೂಪಾಯಿ ವೆಚ್ಚದಲ್ಲಿ ಸ್ಟೀಲಿನ ಕಾರ್ಖಾನೆ ಅಲ್ಲಿ ಹೊಸದಾಗಿ ತಯಾರಾಗುತ್ತಿದೆ, ಈ ಕಾರ್ಖಾನೆಯ ಬಗ್ಗೆಯೂ ಮತ್ತು ಕಾಗದ ಕಾರ್ಖಾನೆ ಬದಲಾವಣೆ ಕಾರ್ಯದ ಬಗ್ಗೆಯೂ ಶ್ರೀಮಾನ್ ಶಿವನಂಜಪ್ಪನವರು

ಬಹಳ ಶ್ರದ್ಧೆ, ಶ್ರಮವಹಿಸಿ ದುಡಿಯುತ್ತಿರುವುದರಿಂದ ಇವುಗಳ ಕೆಲಸ ಭರದಿಂದ ಸಾಗುತ್ತಿದೆ. ಶ್ರೀಮಾನ್ ಶಿವನಂಜಪ್ಪನವರನ್ನು ಈ ಕೆಲಸ ಮುಗಿಯುವವರೆಗೂ ಮತ್ತು ಮುಂದೆಯೂ ಅನೇಕ ವರ್ಷಗಳ ಕಾಲ ಅಲ್ಲಿಯೇ ಇಟ್ಟಿರತಕ್ಕಂಥಾದ್ದು ಸರಿ ಎಂದು ನಾನು ಈ ಸಂಧರ್ಭದಲ್ಲಿ ತಿಳಿಸುತ್ತೇನೆ.

ಈಗ ರಾಜ್ಯದ ಕೈಗಾರಿಕೆ ಖಾತೆಯನ್ನು ಹೊತ್ತಿರತಕ್ಕಂಥ ಶ್ರೀ ಮಲ್ಲಪ್ಪನವರೂ ಭದ್ರಾವತಿಗೆ ದಯಮಾಡಿಸಿ ಅಲ್ಲಿರುವ ಕಾರ್ಖಾನೆಗಳ ಕಡೆ ಲಕ್ಷ್ಯ ಕೊಟ್ಟಿದ್ದಾರೆ. ರಾಜ್ಯದಲ್ಲಿರುವ ಕೈಗಾರಿಕೆಗಳನ್ನು ಕೂಡ ಅದೇ ರೀತಿ ಬೆಳಸಬೇಕು ಅನ್ನತಕ್ಕಂಥ ಒಂದು ಉತ್ಸಾಹ, ಒಂದು ಸ್ಫೂರ್ತಿ ಅವರಲ್ಲಿದೆ. ಅವರು ಈ ಭದ್ರಾವತಿ ಕಾರ್ಖಾನೆ ಬಗ್ಗೆಯೂ ಮತ್ತು ಸಣ್ಣ ಸಣ್ಣ ಗ್ರಾಮ ಕೈಗಾರಿಕೆಗಳ ಬಗ್ಗೆಯೂ ಹೆಚ್ಚು ನಿಗವನ್ನು ವಹಿಸಿ, ಅವರ ಕಾಲಾವಧಿಯಲ್ಲಿ ಕೈಗಾರಿಕೆಗಳು ಮೂಲೆ ಮೂಲೆಯಲ್ಲಿ ಬೆಳೆಯುವಂತೆ ವ್ಯವಸ್ಥೆ ಮಾಡಬೇಕು ಎಂದು ನಾನು ಆ ಸಂದರ್ಭದಲ್ಲಿ ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ನಮ್ಮ ಭದ್ರ ಪ್ರಾಜೆಕ್ಟ್ ಕೆಲಸ ಪೂರೈಕೆಯಾಗಿ ಅಲ್ಲಿ ಅನೇಕ ಸವಲತ್ತುಗಳಿವೆ. ಎಲೆಕ್ಟ್ರಿಸಿಟಿ, ನೀರು ಇದೆ, ರಸ್ತೆ, ಬಿಲ್ಡಿಂಗುಗಳಿವೆ. ಅಲ್ಲಿ ಕೆಲವು ಖಾಸಗಿಯವರು ಕೈಗಾರಿಕೆಗಳನ್ನು ಹಾಕಬೇಕೆಂದು ಮುಂದೆ ಬಂದಿದ್ದಾರೆ. ಮಾನ್ಯ ಕೈಗಾರಿಕೆ ಮಂತ್ರಿಗಳು ಈ ಒಂದು ಸ್ಥಳದಲ್ಲಿ ಕೈಗಾರಿಕೆಗಳು ಬೆಳೆಸಲು ಹೆಚ್ಚು ಗಮನಕೊಟ್ಟು, ಅಲ್ಲಿ ಕೈಗಾರಿಕೆಗಳು ಬರಲು ಅವಕಾಶ ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಅಲ್ಲಿಯೇ ಪಕ್ಕದಲ್ಲಿ ಹೊನ್ನುಗುಡ್ಡ ಎಂಬ ಜಾಗವಿದೆ. ಅಲ್ಲಿಗೆ ಕೆಲವು ವರ್ಷಗಳ ಹಿಂದೆ ಇಂಗ್ಲಿಷರು ಬಂದು ಬಂಗಾರ ಸಿಗುತ್ತದೆಯೆಂದು ಸಾವಿರಾರು ಅಡಿಗಳ ಗುಳಿಗಳನ್ನು ತೋಡಿ ನೋಡಿ, ಆ ಭಾಗ ಎಳಸು ಇದೆ ಎಂದು ಬಿಟ್ಟಿದ್ದರು. ಸರ್ಕಾರದವರು ಅಲ್ಲಿ ಸರ್ವೆಮಾಡಿಸಬೇಕು. ಅಲ್ಲಿ ಬಂಗಾರ ಸಿಗುವುದೇ ಆದಪಕ್ಷದಲ್ಲಿ ಈಗಿನ ತುರ್ತು ಪರಿಸ್ಥಿತಿಯಲ್ಲಿ ನಾವು ಬಂಗಾರದ ಒಂದು ನಿಧಿಯನ್ನೇ ಪಡೆಯಬಹುದು.

ಗ್ರಾಮಾಂತರ ಪ್ರದೇಶಗಳಲ್ಲಿ ತಾವು ಕಡ್ಡಾಯವಾಗಿ ನೇಯಿಗೆಯಲ್ಲಿ ತರಪೇತಿ ಹೊಂದುವಂತೆ ಮಾಡಿದರೆ ನಮ್ಮ ಬಡತನ ಪರಿಸ್ಥಿತಿಯನ್ನು ಎಷ್ಟೋ ಪರಿಹರಿಸಿಕೊಳ್ಳಬಹುದು ಎಂದು ನನ್ನ ಗಮನಕ್ಕೆ ಬರುತ್ತದೆ. ಕೆಲವು ಗ್ರಾಮಾಂತರ ಪ್ರದೇಶಗಳಲ್ಲಿ ನೇಯಿಗೆ ಮಾಡತಕ್ಕಂಥ ಮಗ್ಗಗಳನ್ನು ಮಾಡುತ್ತಾರೆ. ನಮ್ಮಲ್ಲಿ ಅನೇಕ ಗ್ರಾಮಗಳಲ್ಲಿ ಅವು ಇಲ್ಲ. ಅವರವರ ಬಟ್ಟೆಗಳನ್ನು ತಯಾರು ಮಾಡಿಕೊಳ್ಳತಕ್ಕಂಥ ಒಂದು ಕೈಮಗ್ಗದ ನೇಯಿಗೆ ವಿಧಾನವನ್ನು ತಾವು ಅವಶ್ಯವಾಗಿ ಮಾಡಬೇಕು. ಹಾಗೆ ಮಾಡಿದರೆ ಎಲ್ಲರೂ ಒಂದೊಂದು ಮಗ್ಗವನ್ನು ಇಟ್ಟುಕೊಂಡು ತಮ್ಮ ಬಟ್ಟೆಯನ್ನು ಮಾಡಿಕೊಳ್ಳುವ ಶಕ್ತಿ ಬರುತ್ತದೆ. ಎಲ್ಲೆಲ್ಲಿ ಕೈಗಾರಿಕೆಗಳಿಲ್ಲವೋ ಅಂಥ ಗ್ರಾಮಾಂತರ ಪ್ರದೇಶಗಳಿಗೆ ತಮ್ಮ ಇಲಾಖೆಯ ತಜ್ಞರನ್ನು ಕಳುಹಿಸಿಕೊಟ್ಟು ನೇಯಿಗೆ ಮಾಡುವ ವಿಧಾನವನ್ನು ತೋರಿಸಿ ಕಲಿಸಿಕೊಡಬೇಕು ಮತ್ತು ಸರ್ಕಾರದವರು ಕೆಲವು ಕೈಮಗ್ಗಗಳನ್ನು ಒದಗಿಸಿಕೊಡಬೇಕು.

ಹೇಗೂ ಗ್ರಾಮಾಂತರ ಪ್ರದೇಶಗಳಲ್ಲಿ ಈಗ ಹೈಸ್ಕೂಲುಗಳನ್ನು ತೆರೆದಿದ್ದೀರಿ. ಗ್ರಾಮಾಂತರ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಬೆಳಸಬೇಕಾದರೆ, ಇಂಡಸ್ಟ್ರಿಗಳಿಗೆ ಸಂಬಂಧಪಟ್ಟ ಸಣ್ಣ ಸಣ್ಣ ಕೈಗಾರಿಕೆಗಳಲ್ಲಿ ಈ ಹೈಸ್ಕೂಲು ಬಾಲಕರಿಗೆ ತರಪೇತಿ ಕೊಡುವ ಏರ್ಪಾಡು ಮಾಡಬೇಕು. ಗ್ರಾಮಾಂತರ ಪ್ರದೇಶಗಳ ಹೈಸ್ಕೂಲುಗಳು ಇರುವ ಎಲ್ಲಾ ಕಡೆಯೂ ಒಂದು ಕೈಗಾರಿಕೆಗೆ ಸಂಬಂಧಪಟ್ಟ ಸ್ಕೂಲನ್ನು ತೆರೆದು, ಅದನ್ನು ಮಾಡತಕ್ಕಂಥ ವಿಧಾನವನ್ನು ಕಲಿಸಿದರೆ, ಗ್ರಾಮಗಳಲ್ಲಿ ಓದಿರತಕ್ಕಂಥ ಹುಡುಗರು ಸಣ್ಣ ಸಣ್ಣ ಕೈಗಾರಿಕೆಗಳನ್ನು ಪ್ರಾರಂಭಮಾಡಿ ಬೆಳಸಬಹುದು, ಅಂಥ ಒಂದು ವಿಧಾನವನ್ನು ಕೂಡ ಕಲ್ಪಿಸಿಕೊಡಬೇಕು.

ಆಮೇಲೆ ನಮ್ಮ ತುಂಗಭದ್ರಾ ಜಲಾಶಯವಿದೆ. ಅಲ್ಲಿ ಸಕ್ಕರೆ ಕಾರ್ಖಾನೆಯೊಂದು ಸ್ಥಾಪನೆಯಾಗಿದೆ. ನಮ್ಮ ಏರಿಯಾದಲ್ಲಿ ಇನ್ನೂ ಒಂದು ಕಾರ್ಖಾನೆ ಆಗತಕ್ಕಂಥ ಒಂದು ಸಲಹೆ ಇದೆ. ಹಿಂದೆ ಕೂಡ ಭದ್ರಾವತಿ ತಾಲ್ಲೂಕಿನ ಮೊಸರಹಳ್ಳಿಯಲ್ಲಿ ಇನ್ನೊಂದು ಸಕ್ಕರೆ ಫ್ಯಾಕ್ಟರಿ ಹಾಕಬೇಕೆಂದು ಸರ್ವೆ ನಡೆಸಿ, ಆ ಯೋಜನೆಯನ್ನು ಕಾರಣಾಂತರದಿಂದ ಕೈ ಬಿಟ್ಟಿದ್ದಾರೆ. ಇಲ್ಲಿ ಇರಿಗೇಷನ್ ಆಗತಕ್ಕಂಥ ಭೂಮಿ ಬೇಕಾದಷ್ಟಿದೆ. ಮೊಸರಹಳ್ಳಿ ಹತ್ತಿರ ಒಂದು ಸಕ್ಕರೆ ಕಾರ್ಖಾನೆಗೆ ಜಾಗಕೂಡ ಚುನಾಯಿಸಿರುವುದರಿಂದ, ಅಲ್ಲಿ ಆ ಕಾರ್ಖಾನೆಯಾಗಲು ವ್ಯವಸ್ಥೆ ಮಾಡಬೇಕೆಂದು ಪ್ರಾರ್ಥಿಸಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

MR. SPEAKER.—The House will now rise and meet again on Monday at 8-30 A.M.

The House adjourned at Forty Minutes past Twelve of the Clock to meet again at Thirty Minutes past Eight of the Clock, on Monday, the 25th March 1963.

WD 425—GPB—900—2-9-63.